# ಪ್ರಬುದ್ಧ ಕರ್ನಾಟಕ

ಸಂಪುಟ ೯೨ ಸಂಚಿಕೆ ೩೫೫

೨೦೧೫

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

# ಪ್ರಬುದ್ಧ ಕರ್ಣಾಟಕ

ಸಂಪುಟ ೯೨

ಸಂಚಿಕೆ ೩೫೫



**ಪ್ರಸಾರಾಂಗ**

ಮೈಸೂರು ವಿಶ್ವವಿದ್ಯಾನಿಲಯ

೨೦೧೫

**Prabuddha Karnataka :** A Kannada Quarterly of the University of Mysore, Volume 92, Nos. 355; Edited by Prof. Priti Shrimandhar Kumar, Prof. K.N. Ganganaik and Prof. G.R. Thippeswamy; Published by the Director, Prasaranga, Manasagangotri, University of Mysore, Mysore - 570 006; Pages : xii+84=96



*ಪ್ರಧಾನ ಸಂಪಾದಕರು*

**ಪ್ರೊ. ಎಂ.ಜಿ. ಮಂಜುನಾಥ**

*ಸಂಪಾದಕರು*

**ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್**
**ಪ್ರೊ. ಕೆ.ಎನ್. ಗಂಗಾನಾಯಕ್**
**ಪ್ರೊ. ಜಿ.ಆರ್. ತಿಪ್ಪೇಸ್ವಾಮಿ**

**ಪ್ರಕಾಶಕರು**

**ಪ್ರೊ. ಎಂ.ಜಿ. ಮಂಜುನಾಥ**
ನಿರ್ದೇಶಕರು
ಪ್ರಸಾರಾಂಗ, ಮಾನಸಗಂಗೋತ್ರಿ
ಮೈಸೂರು – ೫೭೦ ೦೦೬

**ಮುದ್ರಕರು**

**ಡಾ. ಉಮೇಶ್**
ನಿರ್ದೇಶಕರು
ವಿಶ್ವವಿದ್ಯಾನಿಲಯ ಮುದ್ರಣಾಲಯ
ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬

# ಮುನ್ನುಡಿ

*ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ಣಾಟಕ, ವಿಜ್ಞಾನ ಕರ್ಣಾಟಕ*– ಇವೆಲ್ಲ ನಮ್ಮ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿರುವ ತ್ರೈಮಾಸಿಕಗಳು; ಹಾಗೆಯೇ ಆಂಗ್ಲ ಭಾಷೆಯಲ್ಲಿ ಬರುತ್ತಿರುವ *my*SCIENCE ಹಾಗೂ *my*SOCIETY ಅರ್ಧವಾರ್ಷಿಕಗಳು. ಕನ್ನಡದಲ್ಲಿ ಪಡಿಮೂಡುತ್ತಿರುವ ನಿಯತಕಾಲಿಕೆಗಳ ಕೊಡುಗೆ ದೊಡ್ಡದು. ಇಂದಿಗೂ ಸಂಶೋಧನೆ ಹಾಗೂ ಗ್ರಂಥಾಲಯದ ಭಾಷೆ ಇಂಗ್ಲಿಷ್ ಎಂಬುದನ್ನು ನಾವು ಚೆನ್ನಾಗಿ ಬಲ್ಲೆವು. ಹಾಗಾಗಿ ಆಂಗ್ಲ ಭಾಷೆಯಲ್ಲಿ ಸಂಶೋಧನಾ ಪ್ರಬಂಧಗಳನ್ನು ರಚಿಸುವವರಿಗೆ ಒಂದು ಅರ್ಥದಲ್ಲಿ ಹಾದಿ ಸುಗಮ; ಏಕೆಂದರೆ ಜಗತ್ತಿನಾದ್ಯಂತ ಈ ಭಾಷೆ ಬಳಕೆಯಲ್ಲಿದ್ದು ಪಾರಿಭಾಷಿಕ ಪದಗಳು ಸಿದ್ಧವಾಗಿ ದಕ್ಕುತ್ತವೆ. ಸಾರ್ವತ್ರಿಕವಾಗಿ ಬಳಕೆ ಮಾಡಲೂ ಒದಗುತ್ತವೆ. ಆದರೆ ಕನ್ನಡದಲ್ಲಿ ವೈಜ್ಞಾನಿಕ ವಿಷಯಗಳ ಮೇಲೆ ಸಂಶೋಧನಾತ್ಮಕ ಪ್ರಬಂಧ ಬರೆಯುವವರಿಗೆ ಅಷ್ಟು ಅನುಕೂಲಗಳಿಲ್ಲ. ಆದಾಗ್ಯೂ ಪ್ರಾದೇಶಿಕ ಭಾಷೆಯ ಮೂಲಕ ವಿಜ್ಞಾನವನ್ನು ಅರ್ಥಮಾಡಿಸುವ ಹೊಣೆಗಾರಿಕೆಯನ್ನು ಕನ್ನಡ ವಿಜ್ಞಾನ ಲೇಖಕರು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಇದು ವಿಜ್ಞಾನ ಮತ್ತು ಮಾನವಿಕಗಳ ಮಾತಾಯಿತು. ಇನ್ನು **ಪ್ರಬುದ್ಧ ಕರ್ಣಾಟಕ**ಕ್ಕೆ ತನ್ನದೇ ಆದ ಹಿನ್ನೆಲೆಯಿದೆ, ಇತಿಹಾಸವಿದೆ. ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳಂಥ ಮಹನೀಯರು ಕಟ್ಟಿ ಬೆಳೆಸಿದ ನಿಯತಕಾಲಿಕೆಯಿದು. ಮೈಸೂರು ವಿಶ್ವವಿದ್ಯಾನಿಲಯದ ಜೊತೆ ಜೊತೆಗೇ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡ ಹೆಗ್ಗಳಿಕೆ ಈ ನಿಯತಕಾಲಿಕೆಗಿದೆ. ಹಾಗಾಗಿ ಕರ್ನಾಟಕದ ಪ್ರಬುದ್ಧ ಚಿಂತಕರು ಈ ನಿಯತಕಾಲಿಕೆಯನ್ನು ಪ್ರೀತಿಯಿಂದ ನೋಡಿಕೊಳ್ಳಬೇಕಾದ ಜವಾಬ್ದಾರಿ ಹೊತ್ತಿದ್ದಾರೆ. ಆ ಕಾಲದ ಕಠಿಣವಾದ ಮಾನದಂಡಗಳನ್ನು ಇಟ್ಟು ಪ್ರಕಟಣೆಯ ಪ್ರಕ್ರಿಯೆಯನ್ನು ನಿಧಾನಗೊಳಿಸದೆ ಹೊಸದಾಗಿ ಬರಹ ಕಲಿತು ಸಾಗುತ್ತಿರುವ ಯುವ ವಿದ್ವಾಂಸರನ್ನು ತಿದ್ದಿ ಮುನ್ನಡೆಸುವ ದಿಶೆಯಲ್ಲಿ ನಮ್ಮ ಎಲ್ಲ ನಿಯತಕಾಲಿಕೆಗಳ ಸಂಪಾದಕ ಮಂಡಳಿಗಳ ಸಂಚಾಲಕರು ಹಾಗೂ ಸದಸ್ಯರು ಬಲು ಆಸ್ಥೆಯಿಂದ ಕಾರ್ಯೋನ್ಮುಖರಾಗಿದ್ದಾರೆ. ಅವರಿಗೆ ಹಾಗೂ ಅಂದವಾಗಿ ಇವನ್ನು ಪ್ರಕಟಗೊಳಿಸುತ್ತಿರುವ ಪ್ರಸಾರಾಂಗದ ನಿರ್ದೇಶಕರಿಗೆ ಹಾಗೂ ಮುದ್ರಣಾಲಯದ ನಿರ್ದೇಶಕರಿಗೆ ನನ್ನ ಶುಭಕಾಮನೆಗಳನ್ನು ತಿಳಿಸಲು ಹರ್ಷಿಸುತ್ತೇನೆ.

**ಪ್ರೊ. ಕೆ.ಎಸ್. ರಂಗಪ್ಪ**
ಕುಲಪತಿ

# ಪ್ರಕಾಶಕರ ನುಡಿ

ಮೈಸೂರು ವಿಶ್ವವಿದ್ಯಾನಿಲಯವು ಜ್ಞಾನಪ್ರಸಾರದ ಮಹೋನ್ನತ ಉದ್ದೇಶದೊಂದಿಗೆ ಸ್ಥಾಪಿಸಿದ ಪ್ರಸಾರಾಂಗವು ಹೊರತರುತ್ತಿರುವ ಪ್ರಬುದ್ಧ ಕರ್ಣಾಟಕ ನಿಯತಕಾಲಿಕೆಯು ಕನ್ನಡ ನಾಡಿನ ವಿದ್ವತ್ಪತ್ರಿಕೆಗಳಲ್ಲಿ ಬಹು ಪ್ರತಿಷ್ಠಿತ ಸ್ಥಾನವನ್ನು ಪಡೆದಿದೆ. ಕನ್ನಡ ಸಾಹಿತ್ಯ, ಭಾಷಾ ವಿಜ್ಞಾನ, ಜಾನಪದ, ಶಾಸನಶಾಸ್ತ್ರ, ಗ್ರಂಥ ಸಂಪಾದನಾ ಶಾಸ್ತ್ರ, ಸ್ಥಳನಾಮ ವ್ಯಾಸಂಗ, ನಾಣ್ಯಶಾಸ್ತ್ರ, ಇತಿಹಾಸ, ಪುರಾತತ್ವ, ಸಂಸ್ಕೃತಿ ಹೀಗೆ ಹಲವು ಜ್ಞಾನ ಶಿಸ್ತುಗಳಿಗೆ ಸೇರಿದ ಸಂಶೋಧನಾ ಲೇಖನಗಳ ಪ್ರಕಟಣೆಗೆಂದೇ ಮೀಸಲಾಗಿದ್ದು ಕನ್ನಡ ಸಾಹಿತ್ಯಾಭಿಮಾನಿಗಳ, ಸಂಶೋಧಕರ, ವಿದ್ವಾಂಸರ ಮನ್ನಣೆ ಗಳಿಸಿದೆ.

ಕನ್ನಡದಕಣ್ವ ಬಿ.ಎಂ.ಶ್ರೀ, ರಾಷ್ಟ್ರಕವಿ ಕುವೆಂಪು, ಹಿರಿಯ ವಿದ್ವಾಂಸರಾದ ತೀನಂಶ್ರೀ, ಟಿ.ಎಸ್. ವೆಂಕಣ್ಣಯ್ಯ, ತ.ಸು. ಶಾಮರಾಯ, ಡಿ.ಎಲ್. ನರಸಿಂಹಾಚಾರ್, ನಾಡೋಜ ದೇಜಗೌ ಮುಂತಾದ ಹಿರಿಯರ ಪರಿಶ್ರಮ ಪ್ರೋತ್ಸಾಹಗಳಿಂದ ಪ್ರಬುದ್ಧ ಕರ್ಣಾಟಕವು ಪ್ರಬುದ್ಧವಾದ ಸ್ಥಾನವನ್ನು ಪಡೆದಿದೆ. ಪ್ರಸ್ತುತ ಪ್ರಬುದ್ಧ ಕರ್ಣಾಟಕದ ೯೨ನೇ ಸಂಪುಟ ೩೫೫ನೇ ಸಂಚಿಕೆ ಹೊರಬರುತ್ತಿದೆ.

ಪ್ರಸಾರಾಂಗದ ಪ್ರಗತಿಗೆ ಸದಾ ಬೆಂಬಲ ನೀಡುತ್ತಿರುವ ನೆಚ್ಚಿನ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪನವರಿಗೆ, ಕುಲಸಚಿವರಾದ ಪ್ರೊ. ಸಿ. ಬಸವರಾಜು ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ, ಪ್ರಬುದ್ಧ ಕರ್ಣಾಟಕದ ಸಂಪಾದಕರೂ ಆದ ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್ ಅವರಿಗೆ, ಸಂಪಾದಕರಾದ ಪ್ರೊ. ಕೆ.ಎನ್. ಗಂಗಾನಾಯಕ್ ಅವರಿಗೆ, ಪ್ರೊ. ಜಿ.ಆರ್. ತಿಪ್ಪೇಸ್ವಾಮಿ ಅವರಿಗೆ, ಡಿ.ಟಿ.ಪಿ. ವಿಭಾಗದವರಿಗೆ, ಮುದ್ರಣಾಲಯದ ನಿರ್ದೇಶಕರಾದ ಡಾ. ಉಮೇಶ್ ಅವರಿಗೆ, ಪ್ರಸಾರಾಂಗದ ಹಾಗೂ ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೆ ನಾನು ಆಭಾರಿಯಾಗಿದ್ದೇನೆ.

**ಪ್ರೊ. ಎಂ.ಜಿ. ಮಂಜುನಾಥ**
ನಿರ್ದೇಶಕ, ಪ್ರಸಾರಾಂಗ

6

# ಸಂಪಾದಕರ ನುಡಿ

ಬಹುಮುಖಿ ಜ್ಞಾನಮೀಮಾಂಸೆಗಳು ಈ ಹೊತ್ತು ಮಾನವಿಕ ಸಂಶೋಧನಾ ಕ್ಷೇತ್ರವನ್ನು ಪರಿಣಾಮಗೊಳಿಸುತ್ತಿವೆ. ವಿವಿಧ ಜ್ಞಾನಶಿಸ್ತುಗಳೊಂದಿಗಿನ ಅನುಸಂಧಾನವು ಈ ಹೊತ್ತಿನ ಸಂಶೋಧನಾ ವೈಧಾನಿಕತೆಯ ಅನಿವಾರ್ಯತೆ, ತುರ್ತು ಕೂಡ ಆಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಹೆಮ್ಮೆಯ ವಿದ್ವತ್‌ಪೂರ್ಣ ನಿಯತಕಾಲಿಕೆಯಾದ 'ಪ್ರಬುದ್ಧ ಕರ್ಣಾಟಕ'ವು ಮೊದಲಿನಿಂದ ಅಂತರ್‌ಜ್ಞಾನ ಶಿಸ್ತೀಯತೆಯನ್ನು ಮೈಗೂಡಿಸಿಕೊಂಡ ಪರಂಪರೆಯನ್ನು ಹೊಂದಿದೆ. ಪ್ರಸ್ತುತ ಸಂಚಿಕೆಯೂ ಈ ಪರಂಪರೆಯ ಸಾತತ್ಯವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಸಂಯೋಜನೆಗೊಂಡ ಲೇಖನಗಳನ್ನು ಒಳಗೊಂಡಿದೆ. ಗ್ರಂಥಸಂಪಾದನೆ ಮೊದಲ್ಗೊಂಡು ವ್ಯಾಕರಣ, ಭಾಷಾ ಅಧ್ಯಯನ, ಶಾಸನ ಅಧ್ಯಯನ ವಿಷಯಕ ಲೇಖನಗಳು ಕನ್ನಡದ ಶಾಸ್ತ್ರೀಯ ಅಸ್ಮಿತೆಯನ್ನು ಬಿಂಬಿಸುತ್ತವೆ. ಸಾಹಿತ್ಯ ಕೃತಿಯೊಂದಿಗೆ ಸಾಮಾಜಿಕ ಸಂದರ್ಭವನ್ನು ಸಹಪಠ್ಯವಾಗಿ ಪರಿಭಾವಿಸುವ ನವಚಾರಿತ್ರಿಕವಾದಿ ಓದಿಗೆ ಡಾ. ಕುಶಾಲ ಬರಗೂರು ಅವರ 'ಜನಪದ ಸಾಹಿತ್ಯ : ಜನಪದರ ಸಾಮಾಜಿಕ ಸಂಕರದ ಕೇಂದ್ರ–ಹೆಣ್ಣು' ಲೇಖನವು ಮಾದರಿಯಾಗಿದೆ. ಹೆಚ್.ಎಲ್. ರೇಖಾರವರ ಲೇಖನವು ಸ್ತ್ರೀವಾದಿ ಚಿಂತನೆಯ ತಾತ್ತ್ವಿಕ ನೆಲೆಗಳನ್ನು ಸಂಗ್ರಾಹ್ಯವಾಗಿ ಹಿಡಿದಿಟ್ಟಿದೆ. ಪ್ರಭುಶಂಕರ, ಎಸ್.ಜಿ. ಸಿದ್ದರಾಮಯ್ಯ, ಕುಸುಮಾಗ್ರಜ, ಶಿವಶರಣೆಯರ ಅಭಿವ್ಯಕ್ತಿಗಳನ್ನು ಸಮಾಜಕೇಂದ್ರಿತ ನೆಲೆಯ ಅಧ್ಯಯನಕ್ಕೆ ಒಳಪಡಿಸುವ ಗಂಭೀರ ಪ್ರಯತ್ನದ ಲೇಖನಗಳು ಇಲ್ಲಿವೆ. ಗ್ರಂಥಸಂಪಾದನಾಶಾಸ್ತ್ರದ ಅನ್ವಯ ಪಾಠಪರಿಷ್ಕರಣೆಯನ್ನು ಹೇಗೆ ಕೈಗೊಳ್ಳಬೇಕೆಂಬುದರ ಬಗೆಗೆ ಸಮರ್ಥ ಮಾದರಿಯನ್ನು ಡಾ. ಕೆ. ಗೋಕುಲನಾಥ್‌ರಂಥ ಹಿರಿಯ ವಿದ್ವಾಂಸರ ಲೇಖನ ಒದಗಿಸಿದೆ. ಒಟ್ಟಾರೆ, ಇಡಿಯಾಗಿ ಸಾಹಿತ್ಯ ಅಧ್ಯಯನದ ಒಂದು ಪರಿಪೂರ್ಣವೂ ಸಮಗ್ರವೂ ಆದ ವಿನ್ಯಾಸ ಕಲ್ಪನೆ ಮೂಡಿಸುವಲ್ಲಿ ಪ್ರಸ್ತುತ ಸಂಚಿಕೆ ಸಫಲವಾಗಿದೆ. ಈ ಸಂಚಿಕೆಯ ಬಹುಪಾಲು ಲೇಖಕರು ಸಂಶೋಧನ ವಿದ್ಯಾರ್ಥಿಗಳು. ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳಿಂದ ಮೊದಲ್ಗೊಂಡು ಕುವೆಂಪು, ಟಿ.ಎಸ್. ವೆಂಕಣ್ಣಯ್ಯ,

ಡಿ.ಎಲ್. ನರಸಿಂಹಾಚಾರ್ ಮೊದಲಾದ ಶ್ರೇಷ್ಠ ಸಾಹಿತಿ–ವಿದ್ವಾಂಸರ ಪಡೆಯೇ 'ಪ್ರಬುದ್ಧ ಕರ್ಣಾಟಕ'ವನ್ನು ಸಶಕ್ತವಾಗಿ ಕಟ್ಟಿ ಬೆಳೆಸಿದೆ. 'ಪ್ರಬುದ್ಧ ಕರ್ಣಾಟಕ'ವು ಮೊದಲಿನಿಂದ ಹೊಂದಿರುವ ಹಿರಿಮೆ ಗರಿಮೆಗಳಿಗೆ ಚ್ಯುತಿ ಬರದಂತೆ ನೋಡಿಕೊಳ್ಳುವ ಜವಾಬ್ದಾರಿ ಸಂಪಾದಕರಾದ ನಮ್ಮದು ಹಾಗೂ ಲೇಖಕರದೂ ಕೂಡ. ಸಂಪುಟದ ಲೇಖಕರಿಗೆ, ಪ್ರಸಾರಾಂಗದ ನಿರ್ದೇಶಕರಿಗೆ ಮುದ್ರಣಾಲಯದ ನಿರ್ದೇಶಕರಿಗೆ ನಮ್ಮ ಕೃತಜ್ಞತೆಗಳು.

ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್
ಪ್ರೊ. ಕೆ.ಎನ್. ಗಂಗಾನಾಯಕ್
ಪ್ರೊ. ಜಿ.ಆರ್. ತಿಪ್ಪೇಸ್ವಾಮಿ
ಸಂಪಾದಕರು

5

# ಪರಿವಿಡಿ

# ಈ ಸಂಚಿಕೆಯ ಲೇಖಕರು

೧. **ಡಾ. ಕುಶಾಲ ಬರಗೂರು**
ಪೋಸ್ಟ್ ಡಾಕ್ಟರಲ್ ಫೆಲೋ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೫೯೧೭೦೯೦೧೧

೨. **ಡಾ. ಕೆ. ಗೋಕುಲನಾಥ್**
ನಂ. ೧೦೩೦, ೨೪ನೇ ಮುಖ್ಯ ರಸ್ತೆ
ಸೆಕ್ಟರ್ ೧, ಎಚ್.ಎಸ್.ಆರ್. ಲೇಔಟ್
ಬೆಂಗಳೂರು – ೫೬೦ ೧೦೨
ಮೊಬೈಲ್ : ೯೮೪೪೭೯೦೩೩೩

೩. **ಸುರೇಶ ಎಂ.**
ಸಂಶೋಧನ ವಿದ್ಯಾರ್ಥಿ
ಭಾಷಾ ವಿಜ್ಞಾನ ಅಧ್ಯಯನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೯೦೧೨೨೦೧೦೯

೪. **ಮಂಜುನಾಥ ಎಂ.**
ಸಂಶೋಧನ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾನಿಲಯ
ವಿದ್ಯಾರಣ್ಯ, ಹಂಪಿ

೫. **ಡಾ. ಜಿ.ಆರ್. ತಿಪ್ಪೇಸ್ವಾಮಿ**
ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೪೪೯೪೦೮೭೭೧

೬ **ಭಾರತಿ ಟಿ.ವಿ.**
ಸಂಶೋಧನ ವಿದ್ಯಾರ್ಥಿನಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೮೧೪೭೬೪೦೪೭೭

೭. **ಆಶಾ ಎಸ್.**
ಸಂಶೋಧನ ವಿದ್ಯಾರ್ಥಿನಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೭೮೨೯೨೪೦೪೪೨

೮. **ಶ್ರೀನಿವಾಸ**
ಸಂಶೋಧನ ವಿದ್ಯಾರ್ಥಿ
ಸಂಸ್ಕೃತ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೯೬೪೩೮೩೫೬೫

೯. **ಎಚ್.ಎಲ್. ರೇಖಾ**
ಸಂಶೋಧನ ವಿದ್ಯಾರ್ಥಿನಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

೧೦. **ಲೀಲಾವತಿ ಕೆ.**
ಸಂಶೋಧಕರು
ತತ್ತ್ವಶಾಸ್ತ್ರ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು

# ೧. ಜನಪದ ಸಾಹಿತ್ಯ : ಜನಪದರ ಸಾಮಾಜಿಕ ಸಂಕರದ ಕೇಂದ್ರ – 'ಹೆಣ್ಣು'

– ಡಾ. ಕುಶಾಲ ಬರಗೂರು

ಜನಪದ ಸಾಹಿತ್ಯವೆಂಬುದು ಭಾರತದಲ್ಲಿ ಸುಮಾರು ಏಳುನೂರಕ್ಕೂ ಹೆಚ್ಚಿರುವ ಆದಿವಾಸಿ ಬುಡಕಟ್ಟು ಸಮುದಾಯಗಳ ಜನರ ಜೀವನಾನುಭವ ಮತ್ತು ಭಾಷೆಗಳ ಬನಿ, ಧ್ವನಿಗಳ ಸತ್ವ–ತತ್ವಗಳ ಜೀವಂತಿಕೆಯ ಸಾಚಾತನದ ಜೀವನ ಸಮುದ್ರ. ಇದು ಕೂಡ ಕಾಲ ಕಾಲಕ್ಕನುಗುಣವಾಗಿ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ನಂಬಿಕೆಗಳ ಆಚಾರ–ವಿಚಾರಗಳ ಅನುಭವಗಳಿಂದ ಬದಲಾಗುತ್ತಾ ಬೆಳೆದು ಬಂದಿದೆ. ಇಂತಹ ದಾರಿಗಳಲ್ಲಿ ಕಾಲಕಾಲಕ್ಕೆ ಅಭಿವ್ಯಕ್ತಿಗೊಳ್ಳುತ್ತಿದ್ದ ಮೌಖಿಕ ಪರಂಪರೆಯಲ್ಲಿ ಮಹಿಳೆಯರ ಜೀವನ ಮತ್ತು ಅವರ ಧ್ವನಿ ಹೇಗಿತ್ತು ಎಂಬುದನ್ನು ಅರಸುವ ಕಿರು ಪ್ರಯತ್ನ ಇಲ್ಲಿಯದು. ಇದರ ಜೊತೆಯಲ್ಲಿ ಭಾರತದ ಸಾಮಾಜಿಕ ಸಂಕರದ ಕಾರ್ಯ ನಿರಂತರವಾಗಿ ನಡೆಯುತ್ತಾ ಬಂದಿರುವುದು ಗಮನಾರ್ಹ ಸಂಗತಿ.ಯಾಕೆಂದರೆ ಭಾರತವು ಬುಡಕಟ್ಟು ಆದಿವಾಸಿಗಳನ್ನೊಳಗೊಂಡ ಬಹುಸಮಾಜ ಸಂಸ್ಕೃತಿಗಳ ವಲಯ. ಹಾಗಾಗಿ ಈ ಜನರ ಸಹಬಾಳ್ವೆಯ ಒಳಗೆಯೇ ನಾನಾ ವೈರುಧ್ಯ ಸಂಘರ್ಷಗಳ ಜೊತೆಜೊತೆಯಲ್ಲಿಯೇ ವರ್ಣ ಸಂಕರಗಳೂ ನಡೆದಿವೆ. ಈ ಸಂಕರಕ್ಕೆ ಕೇಂದ್ರಬಿಂದು ಹೆಣ್ಣೇ ಆಗಿದ್ದಾಳೆ.

ನಿಜ ಹೇಳಬೇಕೆಂದರೆ, ಹೆಣ್ಣು ಭಾರತೀಯ ಸಂಸ್ಕೃತಿಯ ಮೂಲ ಬೇರೆಂದು ಪರಿಗಣಿತಳಾಗಿದ್ದಾಳೆ. ಆದ್ದರಿಂದಲೇ ಭಾರತದ ಪ್ರಾಚೀನ ಪೂರ್ವ ಕಾಲವನ್ನು ಮಾತೃಪ್ರಧಾನ ದೇಶವೆಂದು ಇತಿಹಾಸ ನಿರೂಪಿಸಿದೆ. ಹೆಣ್ಣು ತನ್ನ ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಕ್ಷೇತ್ರಗಳಲ್ಲಿ ಪ್ರಧಾನ ಪಾತ್ರ ವಹಿಸಿದ್ದಳು ಎಂಬುದು ಹೊಸ ಮಾತಲ್ಲ. ಅಷ್ಟೇ ಏಕೆ? ಇವೆಲ್ಲಕ್ಕೂ ಮೂಲವಾದ ಕೃಷಿಯ ಚಟುವಟಿಕೆಗಳಲ್ಲೂ ಇವಳೇ ಪ್ರಧಾನಳು. ಈ ಮಾತಿಗೆ ಸಾಕ್ಷಿ – ಈ ತ್ರಿಪದಿ.

**ಬೆಳಗಾಗ ನಾನೆದ್ದು ಯಾರ್ಯಾರ ನೆನೆಯಲಿ :**
**ಎಳ್ಳು ಜೀರಿಗೆ ಬೆಳೆಯೋಳ : ಭೂಮಿ ತಾಯಿ :**
**ಎದ್ದೊಂದು ಗಳಿಗೆ ನೆನೆದೇನು.**

ಭೂಮಿ ಮತ್ತು ಹೆಣ್ಣಿನ ನಡುವಿನ ಕ್ರಿಯಾಶೀಲ ಚಟುವಟಿಕೆಗಳ ಅವಿನಾಭಾವ ಸಂಬಂಧ ಈ ತ್ರಿಪದಿಯ ಮೂಲಕ ಮನದಟ್ಟಾಗುತ್ತದೆ. ಇದು ಗ್ರಾಮೀಣ ಪ್ರದೇಶದ ಮಹಿಳೆಯರು ಬೆಳಗ್ಗೆ ಎದ್ದು ರಾಗಿಬೀಸಿ, ಭತ್ತಕುಟ್ಟುವಾಗ ಭೂಮಿತಾಯಿಗೆ ಪ್ರಾರ್ಥನೆ ಸಲ್ಲಿಸಿ ಹಾಡುತ್ತಿದ್ದುದು ಪ್ರಕೃತಿ ಜೊತೆಗಿನ ತಾದಾತ್ಮ್ಯಭಾವದ ಧ್ವನಿಯಾಗಿದೆ.

ತನ್ನ ಬದುಕಿನ ಅನುಭವ, ಚಿಂತನೆಗಳ ಸಾಚಾತನವನ್ನೇ ಜನಪದ ಮಹಿಳೆ ತನ್ನ ಹಾಡುಗಳಲ್ಲಿ ತುಂಬಿ ಕೊಟ್ಟಿದ್ದಾಳೆ. ಹಾಗಾಗಿ ಹೆಣ್ಣನ್ನು ಜನಪದ ಸಾಹಿತ್ಯದ ಸೃಷ್ಟಿಕರ್ತೆ ಎಂದರೆ ಅತಿಶಯೋಕ್ತಿಯಲ್ಲ. ಇಷ್ಟಾದರೂ ಈ ಸಾಹಿತ್ಯ ಯಾವಾಗ? ಎಲ್ಲಿ? ಯಾರಿಂದ? ಹೇಗೆ? ಸೃಷ್ಟಿಯಾಗಿ ಬೆಳೆದು ಬಂದಿದೆ ಎಂಬುದಕ್ಕೆ ಎಲ್ಲಿಯೂ ನಿಖರ ಸಾಕ್ಷಿ ಆಧಾರಗಳಿಲ್ಲ. ಸಂಗ್ರಹಕಾರರ ದಾಖಲೆಗಳು ಹಾಗೂ ಕ್ಷೇತ್ರ ಕಾರ್ಯಕರ್ತರ ವಿವರಣಾತ್ಮಕ ಮಾಹಿತಿಗಳಿಂದ ಸಂಶೋಧನೆಗೆ, ಜನಪದ ಸಾಹಿತ್ಯ ಚರಿತ್ರೆಗೆ ಮಾಹಿತಿ ಲಭ್ಯವಾಗಿವೆ. ಕನ್ನಡ ಜನಪದ ಸಾಹಿತ್ಯಕ್ಕೆ ಹಲಸಂಗಿ ಸಹೋದರರು ಸಂಗ್ರಹಿಸಿ ಕೊಟ್ಟ ಸಾಹಿತ್ಯ ದಾಖಲೆಗಳಿವೆ. ಹಾಗೆಯೇ ವಿಶ್ವದಲ್ಲಿ ಅನೇಕ ರಾಷ್ಟ್ರಗಳು ಜನಪದ ಕಥೆಗಳ ಸಂಗ್ರಹರೂಪಿ ಅಧ್ಯಯನಕ್ಕೆ ಹತ್ತೊಂಬತ್ತನೇ ಶತಮಾನದ ಆದಿ ಭಾಗದಲ್ಲೆ ತೊಡಗಿಕೊಂಡಿದ್ದುದು ಗಮನಾರ್ಹ. ಅದರಲ್ಲೂ "ವಿಶ್ವದ ಜಾನಪದ ಅಧ್ಯಯನಕ್ಕೆ ವೈಜ್ಞಾನಿಕ ದೃಷ್ಟಿಯನ್ನು ಪ್ರಥಮಬಾರಿಗೆ ಮೂಡಿಸಿದವರು ಜರ್ಮನಿಯ ಗ್ರಿಮ್ ಸಹೋದರರು. ೧೮೧೨ ರಲ್ಲಿ ಪ್ರಕಟವಾದ ಅವರ Kindar and Hausmarchen (**ಕಿಂಡರ್-ಅಂಡ್ ಹೌಸಮರಚನ್**) ಫ್ರೆಂಚ್ ಮತ್ತು ಇಂಗ್ಲಿಷ್ ಭಾಷೆಗಳಿಗೆ Griums haus hold tales or graimms fairs tales (**ಗ್ರಿಮ್ಸ್ ಹೌಸ್ ಹೋಲ್ಡ್ ಟೇಲ್ಸ್ ಅಥವಾ ಗ್ರಿಮ್ಸ್ ಫೇರ್ಸ್ ಟೇಲ್ಸ್**) ಎಂದು ಅನುವಾದವಾಗಿ ಹೆಚ್ಚು ಜನಪ್ರಿಯವಾಯಿತು.

ಮಾರ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳಾಗಿದ್ದಾಗಲೇ ಜಾಕಬ್ ಮತ್ತು ವಿಲ್‌ಹೆಲ್ಮ್‌ಗ್ರಿಮ್ ಜನಪದ ಕಥೆಗಳ ಸಂಗ್ರಹ ಕಾರ್ಯವನ್ನು ಆರಂಭಿಸಿದ್ದರು. Dorothea Wild (**ಡೊರೊತೆ ವಿಲ್ಡ್**) ಎಂಬ ಹದಿನಾರರ ಹರೆಯದ ಕನ್ಯೆ ಒಳ್ಳೆಯ ಕಥೆಗಳನ್ನು ಈ ಸಹೋದರರಿಗೆ ಹೇಳಿದಳು. ಮುಂದೆ ವಿಲ್‌ಹೆಲ್ಮ್‌ಗ್ರಿಮ್ ಅವಳನ್ನೆ ಮದುವೆಯಾದ. ಜಾಕಬ್ ಬ್ರಹ್ಮಚಾರಿಯಾಗಿಯೇ ಉಳಿದ". (ಜೀ.ಶಂ. ಪರಮಶಿವಯ್ಯ, ಕನ್ನಡ ಜನಪದ ಕಥೆಗಳು, ಪು. lx, (೧೯೭೦). ಇದೇ ರೀತಿ

ಡಾ. ವೆರಿಯರ್ ಎಲ್ವಿನ್ ಅವರು ಭಾರತೀಯ ಜನಪದ ಕಥೆಗಳ ಸಂಗ್ರಹ ಕಾರ್ಯದಲ್ಲಿ ತೊಡಗಿ ಆದಿವಾಸಿ ಬುಡಕಟ್ಟು ಜನರೊಳಗೆ ಅವರಂತೆ ಬದುಕಿ, ಆ ಬುಡಕಟ್ಟು ಜನರ ಕಥೆಗಳನ್ನು ಹೇಳುತ್ತಿದ್ದ ಹೆಣ್ಣುಮಗಳನ್ನು ಮದುವೆಯಾಗಿ, ಅವರ ಜನಪದ ಮೌಖಿಕಸಾಹಿತ್ಯವನ್ನು ಸಂಗ್ರಹಿಸಿ, ವಿಶ್ಲೇಷಿಸಿದರು. ಇವರ ಕೃತಿಗಳು ಜನಪದ ಅಧ್ಯಯನಕ್ಕೆ ಭಾಷಾಶಾಸ್ತ್ರ ಮತ್ತು ಮಾನವಶಾಸ್ತ್ರ ಅಧ್ಯಯನಕ್ಕೆ ಪ್ರೇರಣೆಯಾಗಿವೆ. ಈ ಹಿನ್ನೆಲೆಗಳನ್ನೆಲ್ಲಾ ನೋಡಿದರೆ ಜನಪದ ಮೌಖಿಕ ಸಾಹಿತ್ಯದ ಮೂಲನೆಲೆ ಹೆಣ್ಣೇ ಆಗಿರುವುದು ತಿಳಿದುಬರುತ್ತದೆ. ಈ ಸಾಹಿತ್ಯದ ಅಧ್ಯಯನಗಳ ಪ್ರಸರಣ ಕಾರ್ಯದಲ್ಲಿ ಪುರುಷರು ಪ್ರಧಾನ ಪಾತ್ರ ವಹಿಸಿದರೂ ಪುರುಷರಿಗೆ ಸರಿಸಮಾನವಾಗಿ ಮಹಿಳೆಯರೂ ಜನಪದ ಸಾಹಿತ್ಯ ಸೃಷ್ಟಿಸಿ ಬೆಳೆಸುವಲ್ಲಿ ಹಿಂದೆ ಬಿದ್ದಿಲ್ಲ. ಪ್ರಕೃತಿಯ ಅಸಾಮಾನ್ಯ ವೈಚಿತ್ರ್ಯದೊಳಗಿರುವ ಅಸಂಖ್ಯ ಜೀವರಾಶಿಗಳಲ್ಲಿ ಮಾನವ ಒಂದು ಬಿಂದುವಾಗಿದ್ದಾನೆ. ಪ್ರಕೃತಿಯ ಈ ಚರಿತ್ರೆಯೊಳಗೆ ಸಾಗಿಬಂದ ಕಾಲ ಮತ್ತು ಆ ಕಾಲದೊಳಗಿನ ಮಾನವನ ತಿಳುವಳಿಕೆ, ಅನುಭವ (ದೃಶ್ಯ, ಶ್ರವಣ, ವಾಸನೆ, ಸ್ಪರ್ಶ, ರುಚಿ ಮತ್ತು ಆಲೋಚನೆಯ ತಿಳುವಳಿಕೆಗಳಿಂದ ಕೈಗೊಂಡ ಕಾರ್ಯ ಯೋಜನೆಗಳು) ಗಳಿಂದ ಚಿಂತನೆಯ ಸ್ವರೂಪಗಳಿಂದ ಮಾನವ ಬದಲಾವಣೆಯಾಗುತ್ತ ಬಂದಿದ್ದಾನೆ. ಪೂರ್ವ ಕಾಲದಲ್ಲಿದ್ದ ಹೆಣ್ಣಿನ ಶಕ್ತಿ (ಮಾನಸಿಕ ಮತ್ತು ದೈಹಿಕ) ಯನ್ನು ಬಳಸಿಕೊಂಡ ಗಂಡು, ಹೆಣ್ಣಿನ ಸ್ಪರ್ಶಾನುಭವದಿಂದಾದ ಅವನ ಮತ್ತು ಅವಳ ನಾನಾ ಬದಲಾವಣೆಗಳಿಂದ ಚಕಿತಗೊಂಡಿದ್ದಾನೆ. ಅದರಿಂದ ಅವನು ಕಾಲ ಬೆಳೆದಂತೆ ಹೆಣ್ಣನ್ನು ಮಾನಸಿಕ ಮತ್ತು ದೈಹಿಕವಾಗಿ ದುರ್ಬಲಗೊಳಿಸುವ ತತ್ವ ವಿಚಾರಗಳನ್ನು ಬಿತ್ತಿ ತನ್ನ ದೇಹ, ಮನಸ್ಸಿನ ಶಕ್ತಿಯ ಅಸ್ತಿತ್ವವನ್ನೆ ಪ್ರಬಲಗೊಳಿಸುತ್ತ ಬಂದಿದ್ದಾನೆ. ಹೀಗೆ ತನ್ನ ಚಿಂತನೆಯ ದಾರಿ ಮಾರ್ಗಗಳನ್ನು ಹೆಣ್ಣಿನ ಮೇಲೆ ಹೇರುತ್ತ ಕಾಲಕ್ರಮೇಣ ಅವಳನ್ನು ದುರ್ಬಲಗೊಳಿಸುತ್ತಾ ಬಂದ ಕಾರಣದಿಂದ ಹೆಣ್ಣು ಮಾನಸಿಕವಾಗಿ ಕುಸಿಯುತ್ತ ಬಂದಿದ್ದಾಳೆ.

ಈ ಕ್ರಿಯೆಯಲ್ಲಿ ಪ್ರಾಚೀನ ಕಾಲದ ಆದಿ ಮಾನವರಿಂದಲೂ ಹೆಣ್ಣಿಗೆ ಗಂಡು, ಗಂಡಿಗೆ ಹೆಣ್ಣು ಸಹಾಯಕರಾಗಿ ಸಾಗಿ ಬಂದಿರುವ ಸಂಬಂಧದ ಚಾರಿತ್ರಿಕ ದಾಖಲೆಗಳು ಮಾನವಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ, ಜಾನಪದ ಮತ್ತಿತರ ಅಧ್ಯಯನದಿಂದ ಕಂಡುಬಂದಿರುತ್ತದೆ. ಹಾಗೆ ನೋಡಿದರೆ, ಮಾನವರಲ್ಲಿ ಆಲೋಚನಾ ಕ್ರಮ ಕಾಲಕ್ರಮೇಣ ಬೆಳೆದಂತೆ ಹೆಣ್ಣು ತನಗೆ ಸಹಾಯಕನಾದ ಗಂಡಿಗೆ ಕೃತಜ್ಞತೆಯ ಭಾವದಿಂದ ನಡೆದುಕೊಂಡು ಬಂದಿದ್ದಾಳೆ. ಈಕೆ ಸ್ವಾಭಾವಿಕ ಎಂಬಂತೆ ತಾಳ್ಮೆ, ಸಹನೆ, ಕರುಣೆ, ಪ್ರೀತಿ–ವಾತ್ಸಲ್ಯ, ಮೈತ್ರಿಗುಣಗಳ ಅಸಾಮಾನ್ಯ ಶಕ್ತಿಯನ್ನು

ಮೈಗೂಡಿಸಿಕೊಂಡು ಬರುವಂತೆ ಮಾಡಲಾಯ್ತು. ಆದರೆ ಗಂಡಿನ ಸಂಬಂಧದಿಂದ ಮಕ್ಕಳನ್ನು ಹೆತ್ತು, ಹೊತ್ತು, ಸಾಕಿ, ಸಲಹಿದ ಭೂಮಿಗುಣದ ಹೆಣ್ಣಿಗೆ ಗಂಡಿನ ಮಾತಿನಲ್ಲಿ ವಂಚನೆಯ ಸೋಂಕು ಕಾಣಲಿಲ್ಲ. ಅದನ್ನೇ ನಿಜವೆಂದರಿತು, ಅವನನ್ನು ಮೆಚ್ಚಿ ಅನುಮಾನ ಪಡದೆ ಗಂಡಿನೊಂದಿಗೆ ಸಾಗಿ ಬಂದಳು. ಹೀಗೆ ಸಾಗಿ ಬರುವಾಗ ತನ್ನ ಮೇಲಾದ ಶೋಷಣೆಯ ಸ್ವರೂಪ ಹೆಣ್ಣಿಗೆ ತುಂಬ ತಡವಾಗಿ ಮನವರಿಕೆಯಾಯಿತು. ಇದನ್ನು ಅರಿಯಲಾಗದಂತೆ ಅವಳ ಮೇಲೆ ನಿರ್ಬಂಧ ಹೇರುತ್ತ ಬಂದದ್ದೇ ಪುರೋಹಿತ ವರ್ಗ. ಇದು ಭಾರತೀಯ ಮತ್ತು ಪಾಶ್ಚಾತ್ಯ ದೇಶಗಳ ಮೂಲ ಸಂಸ್ಕೃತಿಗೆ ವಿರುದ್ಧವಾಗಿ ಪಿತೃ ಸಂಸ್ಕೃತಿಯನ್ನು ಸದ್ದಿಲ್ಲದೆ ಹೆಣ್ಣಿನ ಮನದಲ್ಲಿ ಬಿತ್ತುತ್ತಾ ಆಕೆಯನ್ನು ಅದಕ್ಕೆ ಒಪ್ಪಿಸಿ ನಡೆದದ್ದರ ಪರಿಣಾಮ. ಹೆಣ್ಣು, ಗಂಡು ಹೆಣೆದ ಸಾಮಾಜಿಕ ಬಲೆಗೆ ಬಿದ್ದುದರ ಹಾಗೂ ಅದನ್ನೇ ಅಂಕೆ–ಸಂಖ್ಯೆಗಳಿಂದ ಬಳಸಿಕೊಂಡ ಪುರೋಹಿತ ಶೋಷಕ ಸಂಸ್ಕೃತಿಯ ಕಾರಣ ಕಥೆಯೇ ಜನಪದರ **'ಕೆರೆಗೆ ಹಾರ'**. ಪುರೋಹಿತರ ಮಾರ್ಗದರ್ಶನದಂತೆ ಊರ ಗೌಡ ತನ್ನ ಹಿರಿಸೊಸೆ ಬಿಟ್ಟು, ಕಿರಿಸೊಸೆಯನ್ನು ತಾನೆ ಕಟ್ಟಿಸಿದ ಕೆರೆಗೆ ಹಾರವಾಗಿಸಿದ ದುರಂತ ಕಥೆ ಜನಪದ ಸಾಹಿತ್ಯದಲ್ಲಿ ಜನಪ್ರಿಯವಾಗಿದೆ. ಇದನ್ನೇ ಶ್ರೇಷ್ಠವೆಂದು ಸಾರುವ ಪುರೋಹಿತರ ಹಿಂಸಾ ಸಂಸ್ಕ್ರತಿಯನ್ನೇ ಒಪ್ಪಿ ಜನಪದರ ನಂಬಿಕೆಯ ಲೋಕ ನಿರ್ಮಾಣವಾಗಿದೆ. ಹಿಂಸೆಯನ್ನೇ ಒಂದು ಧಾರ್ಮಿಕ ಸಂಸ್ಕೃತಿಯನ್ನಾಗಿ ತನ್ನ ಒಡಲಲ್ಲಿ ತುಂಬಿಕೊಂಡು ಶೂದ್ರ ಸಮುದಾಯವೂ ಸಾಗಿ ಬಂದಿದೆ. ಇದನ್ನು ಮೊದಲು ಧ್ವನಿಯೆತ್ತಿ ಪ್ರತಿಭಟಿಸಿದ ನಮ್ಮ ಜನಪದ ಹೆಣ್ಣಿನ ಪ್ರತಿಕ್ರಿಯೆ ಇಂತಿದೆ.

**ಹೆಣ್ಣಿನ ಗೋಳಟ್ಟಿ ಬನ್ನಿಯ ಮರಬೆಂದೊ :**
**ಅಲ್ಲಿ ಸನ್ಯಾಸಿ ಮಠ ಬೆಂದೊ : ಪುರೋಹಿತರ :**
**ಪಂಚಾಂಗ ಹತ್ತಿ ಉರಿದಾವ :**

ಇಲ್ಲಿ ಹೆಣ್ಣಿನ ಗೋಳಿನ ಅನುಭವಕ್ಕೆ ಆಕ್ರೋಶದ ಧ್ವನಿ ಪ್ರತಿಭಟನಾತ್ಮಕವಾಗಿಯೇ ಹುಟ್ಟಿಕೊಂಡಂತಹದ್ದು. ಅವಳ ಸಿಟ್ಟಿನ ಶಾಪದ ಪರಿಣಾಮ, ಅಲ್ಲೇ ಇದ್ದ ಸನ್ಯಾಸಿಮಠವು ಬೆಂದು ಪುರೋಹಿತರು, ಜ್ಯೋತಿಷ್ಯ ಹೇಳುತ್ತಿದ್ದ ಪಂಚಾಂಗವು ಸುಟ್ಟು ಹೋಯಿತಂತೆ. ಈ ಕ್ರಿಯಾತ್ಮಕ ಭಾವದಲ್ಲಿ ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ನೀಡಲಾಗಿದೆ. ಭಯ ಮತ್ತು ಎಚ್ಚರಿಕೆಯನ್ನು ಗಂಡಿಗೆ ನೀಡುವ ಧ್ವನಿ ಈ ತ್ರಿಪದಿಯಲ್ಲಿದೆ ಎಂಬುದು ಗಮನಾರ್ಹ.

ಎಲ್ಲಾ ಜನಪದೀಯ ಚಾರಿತ್ರಿಕ ಹಿನ್ನೆಲೆ ನೋಡಿದರೆ ಜಗತ್ತಿನ ಮೊದಲ ಶೋಷಿತೆಯಾದವಳು ಹೆಣ್ಣು ಎಂಬುದು ವಿದಿತವಾಗುತ್ತದೆ. ಅದೇ ರೀತಿ ಮೊದಲ ಶೋಷಕ ಸಂಸ್ಕೃತಿಯ ಪ್ರಧಾನ ಪಾತ್ರಧಾರಿ ಗಂಡು. ಇವನು ಈ ಶೋಷಣೆಯ

'ಕಿಂಗ್ ಮೇಕರ್' ಆಗಿ ನಿಂತು ನೇರವಾಗಿ ಹಾಗೂ ಯಾರಿಗೂ ಅರಿಯದಂತೆ ಹೆಣ್ಣಿನ ದೈಹಿಕ ಮತ್ತು ಮಾನಸಿಕ ಶೋಷಣೆ ಮಾಡುತ್ತ ಬಂದ ವೈದಿಕ ಸನ್ಯಾಸಿ, ಋಷಿ–ಮುನಿಗಳು ಮತ್ತು ಪುರೋಹಿತರು ರಾಮಾಯಣ–ಮಹಾಭಾರತ, ಪುರಾಣ ಕಥೆಗಳ ಪಾತ್ರಗಳೇ. ಹಾಗಾಗಿ ನಿಜವಾದ ರಾಕ್ಷಸರು ಇವರೇ ಹೊರತು ದೈತ್ಯ, ದಾನವರಲ್ಲ ಎಂಬುದನ್ನು ಜಾನಪದ, ಶಿಷ್ಟ ಸಾಹಿತ್ಯ, ಶಾಸ್ತ್ರ ಗ್ರಂಥ, ಪುರಾಣಗಳ ಪುನರ್ ವ್ಯಾಖ್ಯಾನದ ಮೂಲಕ ಸಿದ್ಧಮಾಡಬೇಕಾಗಿದೆ.

ಚಾರಿತ್ರಿಕ, ಸಾಂಸ್ಕೃತಿಕ, ಸಾಮಾಜಿಕ, ಸಾಹಿತ್ಯಿಕವಾದಗಳ ಆಧುನಿಕ ವೈಜ್ಞಾನಿಕ ಕಾಲವಿದು. ಈ ಮಾತಿಗೆ ಆಧಾರವಾಗಿ ಇಂದಿಗೂ ನಡೆಯುತ್ತಿರುವ ಆಧುನಿಕ ಸನ್ಯಾಸಿಗಳಾದ ನಿತ್ಯಾನಂದಸ್ವಾಮಿ, ರಾಘವೇಂದ್ರಸ್ವಾಮಿ ಮುಂತಾದವರ ಗುಣ, ಕಾರ್ಯಗಳ ಮತ್ತು ಅವುಗಳ ಪರಿಣಾಮಗಳನ್ನು ನೆನೆಯಬಹುದು. ಇವಲ್ಲದೆ ಅನಧಿಕೃತ ದಾಖಲೆಗಳು ಅಸಂಖ್ಯವಾಗಿವೆ. ಇವರಿಗೆ ಈ ಚರಿತ್ರೆ ಹೊಸದಲ್ಲ. ಇವರಿಗೆ ವೈದಿಕರ ಪುರಾಣ ಕಾವ್ಯಗಳ ಪಾರಂಪರಿಕ ಹಿನ್ನೆಲೆಯೇ ಪುಷ್ಟಿ ನೀಡಿವೆ. ಆದರೆ ನಮ್ಮ ಚಾರಿತ್ರಿಕ, ಸಾಮಾಜಿಕ ಪರಂಪರೆಯಲ್ಲಿ ಇಂತಹ ದುಷ್ಟ ಋಷಿ–ಮುನಿಗಳನ್ನು, ಪುರೋಹಿತರನ್ನು ವಿರೋಧಿಸಿ, ಪ್ರತಿಭಟಿಸಿದ ಜನರು ಮತ್ತು ಪ್ರಕೃತಿಪರ ರಕ್ಷಕರಾಗಿ ನಡೆದುಕೊಂಡ ರಾಜರನ್ನೇ ರಾಕ್ಷಸರನ್ನಾಗಿ ಚಿತ್ರಿಸಲಾಗಿದೆ. ಹೀಗೆ ಚಿತ್ರಿಸಿರುವ ಪುರಾಣ, ಶಾಸ್ತ್ರ, ಕಾವ್ಯಗಳ ಮೋಸದ ಜ್ಞಾನದಾಖಲೆಗಳು ಇಂದಿಗೂ ಚಾಲನೆಯಲ್ಲಿವೆ. ಇದು ಈ ದೇಶದ ಜನರ ತಿಳುವಳಿಕೆಯ ಮಿತಿಯೊಳಗೆ ಅವುಗಳನ್ನು ಬಿತ್ತುತ್ತಿರುವ ಪುರೋಹಿತರ ಪ್ರಭಾವದ ಪರಿಣಾಮ. ಇದರೊಂದಿಗೆ ಈ ವೈದಿಕ ಸಾಹಿತ್ಯ ಪರಿಕಲ್ಪನೆಯ ತಾತ್ವಿಕತೆಯನ್ನು ಈ ಕಾಲದಲ್ಲೂ ರಕ್ಷಿಸಲಾಗುತ್ತಿರುವುದು ವಿಪರ್ಯಾಸ. ಹಾಗೆ ನೋಡಿದರೆ ಇದಕ್ಕೂ ಒಂದು ಪರಂಪರೆಯಿದೆ. ಭಾರತೀಯ ಆದಿವಾಸಿ ಬುಡಕಟ್ಟು ಮಾತೃಮೂಲ ಸಂಸ್ಕೃತಿ, ನಂಬಿಕೆಗಳನ್ನು ಆರ್ಯಮೂಲ ವೈದಿಕ ಪುರೋಹಿತರು ಎತ್ತಿಕೊಂಡರು. ಆದಿವಾಸಿ ಜನಪದರ ಪುರಾಣ ಮೂಲ ಸ್ತ್ರೀ ಪಾತ್ರಗಳಾದ ಆದಿಶಕ್ತಿ, ಕಾಳಿ, ಚಾಮುಂಡಿ, ಮಾರಮ್ಮ ಮುಂತಾದವರಿಗೆ ತಮ್ಮ ಪುರಾಣದಲ್ಲಿ ದೈವೀರೂಪ ಕೊಟ್ಟು, ತಮ್ಮ ರಕ್ಷಣೆಗಾಗಿ ಕಥೆ ಕಟ್ಟಲಾಯ್ತು. ಆದಿಯಲ್ಲಿ ಪ್ರಬಲರಾಗಿದ್ದ ಆದಿವಾಸಿ ಬುಡಕಟ್ಟು ಜನರು ಕಾಲಕ್ರಮದಲ್ಲಿ ದುರ್ಬಲರಾದರು. ಅದೇ ರೀತಿ ದುರ್ಬಲರಾಗಿದ್ದ ಆರ್ಯ ವೈದಿಕರು ಪ್ರಬಲರಾಗಿ ಬೆಳೆದ ಮೇಲೆ, ತಾವೇ ಕಟ್ಟಿಕೊಟ್ಟ ಶಾಸ್ತ್ರ, ಪುರಾಣ ಕಥೆಗಳಲ್ಲಿ ಜನಪದರ ಜೀವನಾನುಭವದ ತತ್ವಾಂಶಗಳನ್ನು ತುಂಬಿ ಆ ಮೂಲಕ ಈ ಜನಪದರ ಮೇಲೆ ಪ್ರಭಾವ ಬೀರಿದರು. ಅಲ್ಲಿಂದೀಚೆಗೆ ಈ ಜನಪದರು

ವೈದಿಕ ಪುರಾಣಗಳನ್ನೇ ಅವಲಂಬಿಸಿ ತಮ್ಮ ಕಥೆ, ಕಾವ್ಯ, ಪುರಾಣಗಳಿಗೆ ಹೊಸ ರೂಪ ನೀಡುತ್ತಾ ಬಂದರು. ಇದಕ್ಕೆ ಸಾಕ್ಷಿಯಾಗಿ ಚಾಮುಂಡಿ–ಮಹಿಷಾಸುರ, ನಂಜುಂಡರನ್ನು ಕುರಿತ ಕಾವ್ಯಗಳಾದ ಚಾಮುಂಡೇಶ್ವರಿ ಮಹಿಮೆ, ನಂಜುಂಡೇಶ್ವರ ಕಾವ್ಯ, ಬೆಡಗುಗಾರನಂಜುಂಡ, ಚಾಮುಂಡಿ ಸಿರಿ ಚಾಮುಂಡಿ, ಚಾಮಚೆಲುವೆ, ಮಹಿಷಾಸುರ ಮರ್ದಿನಿಯಂತಹ ಹಲವಾರು ಜನಪದ ಕಾವ್ಯಗಳು ಇವೆ. ಇವೆಲ್ಲ ಚಾಮುಂಡಿ–ನಂಜುಂಡರ ಸಂಬಂಧ ಮತ್ತು ಚಾಮುಂಡಿ–ಮಹಿಷಾಸುರನ ಸಂಹಾರ ಮಾಡಿದ ಕಥೆಯನ್ನೇ ನಿರೂಪಿಸುತ್ತವೆ. ಇವುಗಳು ವೈದಿಕ ತತ್ವ, ತಂತ್ರಗಳನ್ನೇ ಕೇಂದ್ರ ಮಾಡಿಕೊಂಡು ಕಟ್ಟಿದ ಕಥೆಗಳಾಗಿವೆಯೇ ವಿನಾಃ ವಾಸ್ತವವಲ್ಲವೆಂಬುದು ಚಾಮುಂಡಿ – ಮಹಿಷಾಸುರ ಚಾರಿತ್ರಿಕ ಹಿನ್ನೆಲೆ ನೋಡಿದರೆ ಮನವರಿಕೆಯಾಗುತ್ತದೆ.

ಏಕೆಂದರೆ ಮಾತೃಮೂಲ ಸಮಾಜದ ಹೆಣ್ಣು ಯಾರನ್ನೂ ಕೊಂದ ಚಾರಿತ್ರಿಕ ದಾಖಲೆಗಳಿಲ್ಲ. ಮಹಿಷಾಸುರ ಕಾರಣವಿಲ್ಲದೆ ಚಾಮುಂಡಿಯನ್ನು ಕೆಣಕಿಲ್ಲ. ಅವನು ಕೆಣಕಿದರೂ ಆ ಹೆಣ್ಣಿನಿಂದ ಸಾವಾಗುವಂತೆ ಅವನ ಶೌರ್ಯ, ಸಾಹಸ, ಶಕ್ತಿಗಳು ದುರ್ಬಲವಾಗಿದ್ದವೆ? ಅದಕ್ಕೆ ಶಿವನಾಗಲಿ, ಬ್ರಹ್ಮನಾಗಲಿ ಯಾಕೆ ಕಾರಣರಾದರು? ಚಾಮುಂಡಿ ತನ್ನ ನಾಲಿಗೆ ಚಾಚಿ ಅದರ ಮೇಲೆ ಅವನನ್ನು ಕೊಲ್ಲಲು ಸಾಧ್ಯವಾಯಿತೆ? ಇವೆಲ್ಲ ವಾಸ್ತವತೆಯಿಂದ ದೂರವಾದ ಪುರಾಣ, ಜನಪದರುಗಳ ಕಲ್ಪನೆಗಳಾಗಿವೆ. ಹಾಗಾಗಿ ಮಹಿಷಾಸುರನ ಸಾವು ಸಹಜವಾಗಿ ಕಾಲಾಂತರದಲ್ಲಿ ಸಂಭವಿಸಿರಬಹುದು ಅಥವಾ ಮೋಸದಿಂದ ಸಂಹಾರ ಮಾಡಿರಬಹುದು. ಆದರೆ ಇದನ್ನು ಬಿಟ್ಟು ಈ ಕಾವ್ಯ ಪುರಾಣಗಳು ಚಾಮುಂಡಿಯಿಂದ ಸಂಹರಿಸಿರುವ ಕಥೆ ವಾಸ್ತವತೆಯನ್ನು ಮೀರಿದ್ದೆಂಬುದನ್ನು ಇವತ್ತಿನ ಸಮಾಜದ ಜನರು ಗ್ರಹಿಸಬೇಕಾಗಿದೆ.

ಚಾಮುಂಡಿ ಮಾತೃಮೂಲ ಸಮಾಜದ ಹೆಣ್ಣು ಹಾಗೂ ತಳಮೂಲ ಸಮುದಾಯದ ಹೆಣ್ಣು ಎಂಬುದು ಜನಪದ ಕಾವ್ಯದ ಮಾತುಗಳಿಂದಲೇ ತಿಳಿಯುತ್ತದೆ. ಜೊತೆಗೆ ಸಪ್ತ ಕನ್ನಿಕೆಯರಾಗಿ ಬಂದವರಲ್ಲಿ ಚಾಮುಂಡಿಯ ಅಕ್ಕಂದಿರು ೬ ಜನ. ಪಿರಿಯಾಪಟ್ಟಣದಮ್ಮ, ಕನ್ನಂಬಾಡಿ ಕಾಳಮ್ಮ, ಬನ್ನೂರು ಹೇಮಾದ್ರಮ್ಮ, ಸೋಸ್ಲೆ ಹೊನ್ನುದೇವಿ, ನಡುವಾಡು ಚೌಡೇಶ್ವರಿ, ಮೂಗೂರು ತಿಬ್ಬಾದೇವಿ, ಮೈಸೂರು ಬೆಟ್ಟದ ಚಾಮುಂಡಿ ಏಳನೆಯವಳು. ಉತ್ತನಹಳ್ಳಿ ಮಾರಮ್ಮ ತಂಗಿಯಾಗಿ ಸೇರಿಕೊಂಡವಳು. ಇವರೆಲ್ಲ ಅಕ್ಕತಂಗಿಯರಾಗಿ ಒಂದೊಂದು ಪ್ರದೇಶದ ಒಂದೊಂದು ಭಾಗದಲ್ಲಿ ಗ್ರಾಮದೇವತೆಗಳಾಗಿ ನೆಲೆನಿಂತಿದ್ದಾರೆ. ಇವರ್‍ಯಾರೂ ಯಾರನ್ನೂ ಕೊಲ್ಲದೆ, ಹಿಂಸಿಸದೆ, ಗ್ರಾಮರಕ್ಷಣೆಗಾಗಿ ನೆಲೆನಿಂತ ದೇವತೆಗಳೆಂದು ಪ್ರಸಿದ್ಧಿ ಪಡೆದಿದ್ದಾರೆಯೇ ಹೊರತು, ಕಾರಣರಹಿತವಾಗಿ ಇವರು ಯಾರನ್ನೂ

ಹತ್ಯೆ ಮಾಡಿರುವ ಯಾವ ಜನಪದ, ಶಿಷ್ಟ ಪುರಾಣಕಥೆಗಳು ಇಲ್ಲ. ಆದರೆ ಕೇವಲ ಚಾಮುಂಡೇಶ್ವರಿ(ಕಾಳಿ)ಯ ಮೇಲೆ ಮಾತ್ರ ಇಂತಹ ಸಂಹಾರರೂಪಿ ಕಥೆಯನ್ನು ಕಟ್ಟಲಾಗಿದೆ. ಅವಳು ಮಾನಸಿಕ, ದೈಹಿಕ ಶಕ್ತಿಯ ಕಪ್ಪುಸುಂದರಿಯಾದ ಕಾರಣ ವೈದಿಕ ಮನಸ್ಸು ಪುರಾಣದಲ್ಲಿ ಮಹಿಷಾಸುರನನ್ನು ಸಂಹಾರ ಮಾಡಿಸಿರುವ ಈ ಕೆಲಸ ವಿಪರ್ಯಾಸವೇ ಸರಿ. ಹೀಗಾಗಿ ಇಂದು ಯಾವ ಸಾಹಿತ್ಯ ಕೃತಿಯಾಗಿರಲಿ, ಚರಿತ್ರೆಯ ಯಾವ ಪಾತ್ರ, ಘಟನೆಗಳ ದಾಖಲೆಗಳಾಗಲಿ ಅವುಗಳ ಸತ್ಯವನ್ನು ಶೋಧಿಸುವಂತಹ; ಪುರಾಣ, ಚರಿತ್ರೆಯನ್ನು ಪ್ರಶ್ನಿಸುವಂತಹ, ವಾಸ್ತವ ನೆಲೆಯಲ್ಲಿ ಸಂಶೋಧನಾತ್ಮಕ ವಿಮರ್ಶೆಯ ಕೆಲಸ ಮಾಡುವ ಕಡೆ ಕಣ್ತೆರೆಯಬೇಕಾಗಿದೆ.

'ಚಾಮುಂಡೇಶ್ವರಿ ಕಾವ್ಯದಲ್ಲಿ ನಿಜವಾದ ದಬ್ಬಾಳಿಕೆಯಾಗಿರುವುದು ಇಬ್ಬರು ಹೆಂಡರನ್ನುಳ್ಳ ನಂಜುಂಡನಿಂದಲೇ ಹೊರತು ಮಹಿಷಾಸುರನಿಂದಲ್ಲ ಎಂಬುದು ಎಂಥಹವರಿಗೂ ಮನವರಿಕೆಯಾಗುವ ಸಂಗತಿ. ಚಾಮುಂಡಿಯ ನಿಜವಾದ ಶೋಷಕ, ದೌರ್ಜನ್ಯಕಾರ ನಂಜುಂಡನೇ ಆಗಿದ್ದಾನೆ. ಇವನು ಮೇಲ್ಜಾತಿಯವ. ಆದ್ದರಿಂದ ದೇವರು ಮಾಡಿ ಇವನನ್ನು ಪ್ರಶ್ನಿಸದಂತೆ ಮಾಡಿರುವುದೇ ವೈದಿಕ ತಂತ್ರ. ಇದೇ ರೀತಿ ಚಾಮುಂಡಿಯನ್ನೂ ಮಾಡಲಾಗಿದೆ. ತಳಮೂಲ ಸಮುದಾಯದಿಂದ ಬಂದ ಚಾಮುಂಡಿಯನ್ನು ಜನಪದ ಕಾವ್ಯಗಳು ಕಂಡ ರೀತಿ ಹೀಗಿದೆ : 'ನಂಜುಂಡ–ಚಾಮುಂಡಿ' ಜನಪದ ಕಾವ್ಯದಲ್ಲಿ, ಚಾಮಚೆಲುವೆಯಾದ ಚಾಮುಂಡಿಯು ನಂಜುಂಡನಿಗೆ 'ಉತ್ತರ ದೇಶದಿಂದ ಬಂದ ಬಿಜ್ಜಳರಾಯನ ಮಗಳು' ಎಂದು ಪರಿಚಯ ಮಾಡಿಕೊಡುತ್ತಾಳೆ. ಎಸ್. ಚಂದ್ರಶೇಖರ್ ಅವರ 'ಬೆಡಗುಗಾರ ನಂಜುಂಡ' ರೂಪಕದಲ್ಲಿ 'ನನ್ನ ಹೆಸರು ಚಾಮುಂಡಿ, ನಮ್ಮಪ್ಪ ಮಾಪುರಲಿಂಗಯ್ಯ' ಎನ್ನುತ್ತಾಳೆ. ಜೀ.ಶಂ. ಪರಮಶಿವಯ್ಯನವರು ಸಂಗ್ರಹಿಸಿದ 'ಹೆಳವರ ಹಾಡು' ಕಾವ್ಯದಲ್ಲಿ, ಕ.ರಾ.ಕೃ. ಸಂಪಾದಿತ ಕಾವ್ಯ ಭಾಗಗಳಲ್ಲಿ–

**"ನನ್ನ ಅಣ್ಣದಿರು ತಮ್ಮದಿರು**
**ಸುಣ್ಣವ ಮಾರುವರು:**
**ಅಕ್ಕತಂಗಿಯರೆಲ್ಲ ಶಿವನೆ**
**ಸತ್ತ ಸೀಗಡಿಯ ಮಾರುವರು;**
**ಹುಟ್ಟು ಬೆಸ್ತರು ನಾವು**
**ಗಂಗೆಯ ಮತ ನಮ್ಮಯ**
**ನನಗೆ ನಿನ್ನ ಸಂಗ ಬೇಡ ಶಿವನೆ:"**

(ಜೀ.ಶಂ. ಪರಮಶಿವಯ್ಯ, 'ಹೆಳವರು ಮತ್ತು ಅವರ ಕಾವ್ಯಗಳು', ಪು–೧೯೯) ಎನ್ನುತ್ತಾಳೆ. ಕಂಸಾಳೆ ಮಹಾದೇವಯ್ಯ ಹೇಳಿದ ಜನಪದ ಕಾವ್ಯ ಕಥೆಯಲ್ಲಿ–

"ಕರಿಯ ಕೋಳಿ ತಿನ್ನು ಕರಿಯ ಚಾಮುಂಡಮ್ಮ
ನೀವು ಲಿಂಗ ಜಂಗಮರು ಬರಬಹುದೇ?
ಮೀನು ಮಿಡಚಿ ತಿನ್ನೋ ಉಕ್ಕುರಿ ಚಾಮುಂಡಮ್ಮ
ನೀ ಹುಡುಗ ಜಂಗಮರು ಬರಬಹುದೇಮಾಸ್ವಾಮಿ
ನಾನ್ವೆಂಗೆ ಕದವ ತೆಗಿಯಾಲಿ"

(ಕ.ರಾ.ಕೃ. 'ಜನಪದ ಕಥನ ಗೀತೆಗಳು' ಪು–೨೮೩) ಎನ್ನುತ್ತಾಳೆ.

ಇವೆಲ್ಲ ತಳಮೂಲ ಜಾತಿ ಮತಗಳು ತಮ್ಮತಮ್ಮ ದೇವತೆಯನ್ನಾಗಿ ಮಾಡಿಕೊಂಡು ಅವಳನ್ನು ತಮ್ಮ ಕೌಟುಂಬಿಕ ಸಾಂಸ್ಕೃತಿಕ ಪಾತ್ರವನ್ನಾಗಿ ಮಾಡಿಕೊಂಡಿರುವುದು ಗಮನಾರ್ಹ. ಆದರೆ, ಇದೇ ಪಾತ್ರವನ್ನು ವೈದಿಕ ಪುರಾಣಗಳು ಕಂಡ ಬಗೆಯೇ ಬೇರೆ. ಅದರ ಕಥೆ ಹೀಗಿದೆ :

"ವರಹ ಪುರಾಣದಲ್ಲಿ ಸ್ವಾಯಂಭವ ಮನ್ವಂತರದಲ್ಲಿ ಗಾಯತ್ರಿ ದೇವಿಯು ಮಹಿಷನನ್ನು ಮಂದಾರಗಿರಿಯಲ್ಲಿ ಸಂಹರಿಸಿದಳೆಂದು, ಆ ನಂತರ ಮಹಿಷನು ಚೈತ್ರಾಸುರನಾದನೆಂದು, ಅವನ ಸಂಹಾರಕ್ಕಾಗಿ ದೇವಿಯು ನಂದಾ ಎಂಬ ಅಭಿದಾನದಿಂದ ವಿಂಧ್ಯ ಪರ್ವತದಲ್ಲಿ ಅವತರಿಸಿದಳೆಂದು ಹೇಳಿದೆ. ವಿದ್ಯಾವಾಸಿನಿ ಮತ್ತು ಪರಾಶಕ್ತಿಯ ತಮೋಗುಣವು ರೌದ್ರೀ ಚಾಮುಂಡಾ ಎಂದು, ರಾಜ ಸ್ವರೂಪವು ವೈಷ್ಣವೀ, ಸತ್ವರೂಪವು ಬ್ರಾಹ್ಮೀ ಎಂದೂ ಚಾಮುಂಡಾ ಪ್ರಭೇದಗಳು ೯ ಕೋಟಿ, ವೈಷ್ಣವಿ ಭೇದಗಳು ೧೮ ಕೋಟಿ, ಬ್ರಾಹ್ಮೀ ರೂಪಗಳಂತಹವೆಂದು ಉಕ್ತವಾಗಿವೆ. ಇವೆಲ್ಲಕ್ಕೂ ರುದ್ರನೆ ಪತಿ, ತಂತ್ರರಾಜ. ತಂತ್ರದಲ್ಲಿ ಬ್ರಹ್ಮಾದಿ ಅಷ್ಟಮಾತೃಕೆಯರು ಭೂ ಪುರತ್ರಯದ ಮಧ್ಯರೇಖೆಯಲ್ಲಿರುವರೆಂದು, ಬ್ರಾಹ್ಮೀಯ ಕಾಮ, ಮಹೇಶ್ವರಿಯ ಕ್ರೋಧ, ಕೌಮಾರಿಯ ಲೋಭ, ವೈಷ್ಣವಿಯ ಮೋಹ, ವಾರಾಹಿಯ ಮದ, ಇಂದ್ರಾಣಿಯ ಮಾತ್ಸರ್ಯ, ಚಾಮುಂಡಾ ಪಾಪ, ಮಹಾಲಕ್ಷ್ಮೀಯ ಪುಣ್ಯವನ್ನು ಸೂಚಿಸುವರೆಂದು ಹೇಳಿದೆ. ಮತ್ಸ್ಯಪುರಾಣ, ಪದ್ಮ ಮತ್ತು ದೇವಿಭಾಗವತಗಳಲ್ಲಿ ಮುಖ್ಯವಾಗಿ ಪ್ರಯೋಗದಲ್ಲಿ ಲಲಿತಾ, ವಿಂಧ್ಯದಲ್ಲಿ ವಿಂಧ್ಯವಾಸಿನೀ, ವಾರಣಾಸಿಯಲ್ಲಿ ವಿಶಾಲಾಕ್ಷೀ, ಕಿಷ್ಕಿಂದ ಪರ್ವತದಲ್ಲಿ ತಾರೆದೇವಿಯ ಅವತಾರಗಳೆಂದು ಹೇಳಿದೆ. ದುರ್ಗಾ ವಿಂಧ್ಯವಾಸಿನಿಯೇ ನಂದಾಭಗವತೀ ಮಹಿಷಮರ್ಧಿನಿ" (ಎಸ್. ಶ್ರೀಕಂಠಶಾಸ್ತ್ರಿ ಸಂಶೋಧನಾ ಲೇಖನಗಳು ಪುಟ–೩೮೨, ೧೯೭೫).

ಈ ಪುರಾಣದ ಸ್ತ್ರೀ ಪಾತ್ರಗಳು ರಾಜರನ್ನು ಸಂಹಾರ ಮಾಡಿರುವುದನ್ನು ದಾಖಲಿಸುತ್ತವೆ. ಇಲ್ಲಿ ಸ್ತ್ರೀ ಗುಣಗಳಾದ ಶಕ್ತಿ, ತಾಳ್ಮೆಯನ್ನು ಪುರುಷ ಶಕ್ತಿ, ಸಾಮರ್ಥ್ಯಗಳ ತಂತ್ರ ಮತ್ತು ದಿಟ್ಟತನದ ಮನೋಭಾವಗಳೊಡನೆ ಪರಸ್ಪರ ಮೇಳೈಸಿ ಪುರುಷ ಪ್ರಭಾವಿ ರಾಜರನ್ನು ಸಂಹಾರ ಮಾಡಿದ ಯಶಸ್ವಿ ಸ್ತ್ರೀ ಪಾತ್ರಗಳಿವೆ. ಇವು

ಮನಶಾಸ್ತ್ರಜ್ಞ ಸಿ.ಜೆ.ಯೂಂಗ್ ಹೇಳುವ ಪ್ರತಿಯೊಬ್ಬ ವ್ಯಕ್ತಿಯು ಉಭಯ ಲಿಂಗಿಯಾಗಿರುತ್ತಾನೆ. 'ಪುರುಷನಲ್ಲಿರುವ ಸ್ತ್ರೀ ಮುಖವು (ಅನಿಮ) ಆತನ ಸಾಮೂಹಿಕ ಸುಪ್ತ ಚೇತನದಲ್ಲೂ ಮತ್ತು ಸ್ತ್ರೀಯಲ್ಲಿರುವ ಪುರುಷ ಮುಖವು (ಅನಿಮ) ಆಕೆಯ ಸಾಮೂಹಿಕ ಸುಪ್ತ ಚೇತನದಲ್ಲೂ ಅಡಗಿರುತ್ತವೆ." (ಡಾ.ಕುಶಾಲ ಬರಗೂರು, ಧರೆಯೊಳಗಣ ಬೇರು, ಪು-೨೯)ಎನ್ನುವ ಮಾತು ಈ ಚಾಮುಂಡಿ, ಕಾಳಿಯಂತಹವರಿಗೆ ಒಪ್ಪಿತವಾಗಿದೆ. ಈ ಮಹಿಳಾ ಪಾತ್ರಗಳು ಅರ್ಧನಾರೀಶ್ವರನಿಗೂ ಹೋಲಿಕೆಯಾಗುತ್ತವೆ. ಜೊತೆಗೆ ಈ ಕಥೆ, ಕಾವ್ಯ, ಪುರಾಣಗಳು ಅಸುರರನ್ನು ಸಂಹಾರ ಮಾಡುವುದಕ್ಕಾಗಿಯೇ ಹುಟ್ಟಿಕೊಂಡು ಸಾಹಿತ್ಯ, ಪುರಾಣ, ಶಾಸ್ತ್ರ, ಗ್ರಂಥಗಳಾದಂತೆ ಕಾಣುತ್ತವೆ. ಅಷ್ಟರೊಳಗೆ ಮಾತೃ ಪ್ರಧಾನ ಸಂಸ್ಕೃತಿಯಿಂದ ಪಿತೃ ಪ್ರಧಾನ ಸಂಸ್ಕೃತಿಗೆ ಬದಲಾವಣೆಯಾಗಿದ್ದು, ಪ್ರಬಲಳಾದ ಹೆಣ್ಣನ್ನು ಬಳಸಿಕೊಂಡು ಅವಳಿಗೆ ಅರಿಯದಂತೆ ಅವಳ ಇನ್ನೊಬ್ಬ ದಾಯಾದಿಯನ್ನು ಕೊಲ್ಲಲು ಬಳಸಿಕೊಳ್ಳಲಾಗಿದೆ. ಅದು ಪುರಾಣಗಳಲ್ಲಿನ ಒಂದು ಸಾಂದರ್ಭಿಕ ಕಾಲ, ಇದಕ್ಕೂ ಮೊದಲು ಅಥವಾ ಮತ್ತೊಂದು ಕಡೆ ಇದೇ ತಳಮೂಲ ಸಮುದಾಯದ ಹೆಣ್ಣಿನ ಗಂಡ ಅಥವಾ ಮಗ ಮತ್ತು ಆಕೆಯ ದಾಯಾದಿ ದೂರ ಊರೊಂದರಲ್ಲಿ ಪ್ರಬಲ ರಾಜನಾಗಿ ಕೆಲಸ ಮಾಡುತ್ತಿದ್ದು, ಸುರರು ಮಾಯಾವತಾರ ತಾಳಿ ಮೋಸದಿಂದ ಅವರನ್ನು ಅಸುರರೆಂದು ಕೊಂದು ಹಾಕಿದ್ದಾರೆ. ಕೊಂದಂತಹ ಈ ಸುರರನ್ನೇ ಅವತಾರಿ, ಮಾಯಾವಿ ಎಂದೆಲ್ಲಾ ಕರೆಯಲಾಗಿದೆ. ಅವರೇ ದಶಾವತಾರಿಯಾಗಿದ್ದ ವಿಷ್ಣು ಮತ್ತು ಶಿವ ಇವರುಗಳು ವಿಸ್ತಾರ ಭೂಪ್ರದೇಶಗಳ ಆಳ್ವಿಕೆ ಮಾಡುತ್ತಿದ್ದ ಅಸುರ ರಾಜರನ್ನು ಮಾಯಾ ರೂಪದಲ್ಲಿ ಅವತಾರ ತಾಳಿ ಸಂಹಾರ ಮಾಡಿದ್ದಾರೆ ಹಾಗೂ ಸಣ್ಣಪುಟ್ಟ ಪ್ರದೇಶಗಳನ್ನು ನೋಡಿಕೊಳ್ಳುತ್ತಿದ್ದ ಆರ್ಯ ವಿರೋಧಿ ರಾಜರನ್ನು ಕೊಲ್ಲಲು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಪ್ರಬಲ ಹೆಣ್ಣನ್ನು ಆಯ್ಕೆ ಮಾಡಿ ಅವಳನ್ನು ಮೋಸಗೊಳಿಸಿ ಅವಳಿಗೆ ದೈವತ್ವದ ಆಸೆ ಹುಟ್ಟಿಸಿ ಅವಳಿಂದ ಅವರನ್ನು ಕೊಲ್ಲಿಸಲಾಯ್ತು. ಅಂತಹ ಸ್ತ್ರೀಯರೇ ಈ ಮೇಲೆ ಹೇಳಿದ ಪುರಾಣದ ಸ್ತ್ರೀ ಸಮುದಾಯದವರು. ಹಾಗೆ ನೋಡಿದರೆ ದಶಾವತಾರಿ ವಿಷ್ಣು ಮತ್ತು ನಾನಾ ರೂಪಿ ಶಿವ ಇವರು ಗಾಯಿತ್ರಿದೇವಿ, ಚಾಮುಂಡಿ, ಭಗವತೀ ಮುಂತಾದ ಸ್ತ್ರೀ ರೂಪಿಗಳಾಗಿ ಅಸುರರನ್ನು ಕೊಂದ ನಾಯಕಿಯರು. ಇವರು ನಾನಾ ಗಿರಿಪರ್ವತಗಳಲ್ಲಿ ಅವತಾರ ತಾಳಿ ಹುಟ್ಟಿ ಬಂದ ಸ್ತ್ರೀಯರು. ಆ ಪ್ರದೇಶದಲ್ಲಿ ಹತರಾದವರು ಅಸುರ ರಾಜರು ಹಾಗೂ ತಮ್ಮ ಜನರ ರಕ್ಷಣೆಗಾಗಿ ನಿಂತಿದ್ದ ದ್ರಾವಿಡ ಸಂಸ್ಕೃತಿಯ ರಾಜರು. ಇವರು ಆರ್ಯಸಂಸ್ಕೃತಿಯ ವಿರೋಧಿಗಳಾಗಿದ್ದರಿಂದ ಅವರನ್ನು ರಾಕ್ಷಸರನ್ನಾಗಿ ಚಿತ್ರಿಸಿ, ಹಲವು ಕಡೆ ತಾವೇ

ಸಂಹಾರ ಮಾಡಿ, ಇನ್ನೂ ಕೆಲವು ಕಡೆ ಸ್ತ್ರೀಯರಿಂದ ಸಂಹಾರ ಮಾಡಿಸಲು ಸುರರು ಬಳಸಿಕೊಂಡರು. ಇವರು ಆಧುನಿಕ ಭಯೋತ್ಪಾದಕರಿಗಿಂತ ಭಿನ್ನವಾಗಿ, ಜಾಣತನದಲ್ಲಿ ಈ ಕೆಲಸ ಮಾಡಿದ್ದಾರೆ. ಏಕೆಂದರೆ ಆಧುನಿಕ ಭಯೋತ್ಪಾದಕ ನಾಯಕರು ಗುಂಪು ಕಟ್ಟಿ ಯೋಜನೆ ಸಿದ್ಧಪಡಿಸಿ ಎಲ್ಲಿ, ಯಾರ ಮೇಲೆ, ಯಾವಾಗ ಹೇಗೆ ಬಾಂಬ್ ಸ್ಫೋಟಗೊಳಿಸಿ ಜನರನ್ನು ಸಾಯಿಸಬೇಕೆಂದು ಯೋಚಿಸಿ, ತೀರ್ಮಾನಿಸುತ್ತಾರೆ. ಅದಕ್ಕಾಗಿ ಕೆಲವು ಪ್ರವೀಣರನ್ನು ಆಯ್ಕೆ ಮಾಡಿ, ಅವರಿಗೆ ಧೈರ್ಯ ತುಂಬಿ ಸಾವನ್ನು ಲೆಕ್ಕಿಸದಂತೆ ಹೋರಾಡಿ ಮಣಿಯಲು ಕಳುಹಿಸುತ್ತಾರೆ. ಅಂತಹವುಗಳೇ ಇವತ್ತಿನ ಆತ್ಮಾಹುತಿ ಬಾಂಬಿನ ಘಟನೆಗಳು. ಆದರೆ ಪ್ರಾಚೀನ ಕಾಲದ ಆರ್ಯ ವೈದಿಕ ಪುರೋಹಿತ ವರ್ಗ, ಕಿಂಗ್‌ಮೇಕರ್ಸ್ ಆಗಿ, ಯೋಜನೆ ಸಿದ್ಧಪಡಿಸಿ, ಒಬ್ಬರೇ ವೇಷ ಮರೆಸಿಕೊಂಡು ಗೊತ್ತಾಗದಂತೆ ಮೋಸಗೊಳಿಸಿ ಅಸುರ ರಾಜರನ್ನು ಸಂಹಾರ ಮಾಡಿರುವುದು ಈ ಕಥೆ, ಪುರಾಣಗಳಲ್ಲಿ ಕಂಡುಬರುತ್ತದೆ. ಇಲ್ಲಿ ಸೃಷ್ಟಿಯಾಗಿರುವ ಈ ಮಿಥ್‌ಗಳ ಆಧಾರದ ಮೇಲೆ ಮಾಯಾ ಅವತಾರಿಗಳಾಗಿ ಸಂಹಾರ ಮಾಡಿರುವವರನ್ನು ಪ್ರಾಚೀನ ಭಯೋತ್ಪಾದಕ ನಾಯಕರೆಂಬುದಕ್ಕೆ ಸ್ಪಷ್ಟ ದಾಖಲೆಯಾಗಿ ವೈದಿಕ, ಸಾಹಿತ್ಯ, ಪುರಾಣಗಳೇ ಇವೆ. ಇಂತಹ ಅಸುರರ ಸಂಹಾರ ಘಟನೆಗಳು ಜನಪದ ಸಾಹಿತ್ಯದಲ್ಲಿ ಇಲ್ಲ, ಇದ್ದರೆ ಅದು ಮಹಿಷಾಸುರನನ್ನು ಸಂಹಾರ ಮಾಡಿದ ಚಾಮುಂಡಿ ಕಾವ್ಯ, ಕಥೆ, ಪುರಾಣ ಮಾತ್ರ. ಈ ಕಥೆ ಸ್ತ್ರೀ ಕೇಂದ್ರಿತ ಕಾವ್ಯವೆಂಬುದನ್ನು ಚಾಮುಂಡಿ, ಚಾಮಾಯಿ, ಚಾಮುಂಡೇಶ್ವರಿ, ಚಾಮಚೆಲುವೆ ಮುಂತಾದ ಜನಪ್ರಿಯ ಹೆಸರುಗಳಿಂದಲೇ ಗಮನಿಸಬೇಕು. ಇದೇ ರೀತಿ ಸಿರಿ ಕಾವ್ಯ, ಯಲ್ಲಮ್ಮನ ಕಾವ್ಯಗಳಿವೆ. ಇವೆಲ್ಲ ಮಾತೃ ಕೇಂದ್ರಿತ ಕಾವ್ಯಗಳಾದರೆ; ಮೈಲಾರಲಿಂಗ, ಬಿಳಿಗಿರಿರಂಗ, ಮಂಟೇಸ್ವಾಮಿ, ಮಲೆಮಹದೇಶ್ವರ, ಅರ್ಜುನಜೋಗಿ, ಕುಮಾರರಾಮನ ಕಾವ್ಯಗಳು ಪುರುಷ ಕೇಂದ್ರಿತ ಜನಪದ ಕಾವ್ಯಗಳಾಗಿವೆ. ಇವುಗಳಲ್ಲಿ ಸ್ತ್ರೀ ಪಾತ್ರಗಳಿದ್ದರೂ ಅವು ಪ್ರಧಾನ ಪಾತ್ರವಾಗಿಲ್ಲ. ಹೆಣ್ಣನ್ನು ಕಾವ್ಯ ನಾಯಕರು ಅದರಲ್ಲೂ ಮೇಲ್ಜಾತಿ ನಾಯಕರಾದ ಶೂದ್ರರು ತಳಮೂಲ ಸಮುದಾಯದ ಹೆಣ್ಣು ಮಕ್ಕಳನ್ನು ತಮ್ಮ ಕಾಮ ತೃಷೆಗಾಗಿ ಬಳಿಸಿಕೊಂಡದ್ದು ಗಮನಾರ್ಹ ಸಂಗತಿ. ಇದಕ್ಕೆ ಮನುಸ್ಮೃತಿಯ ಪು. **lx,** (ಸೂ-೯೪) "ಮುವತ್ತರ ಗಂಡು ತನಗೆ ಇಷ್ಟವಾದ ಹನ್ನೆರಡು ವರ್ಷದ ಹುಡುಗಿಯನ್ನು ಮದುವೆಯಾಗಬೇಕು. ಇಪ್ಪತ್ನಾಲ್ಕರ ಗಂಡು ಎಂಟು ವರ್ಷದವಳನ್ನು ವಿವಾಹವಾಗಬೇಕು" ಎಂಬ ಸೂತ್ರದ ನಿಯಮದಂತೆ ಭಾರತೀಯ ಜಾತಿ ಕೇಂದ್ರಿತ ಸಾಮಾಜಿಕ, ಸಾಂಸ್ಕೃತಿಕ ಪರಿಸರಕ್ಕನುಗುಣವಾಗಿ ಕಾವ್ಯ ಪುರಾಣಗಳು

ಅಭಿವ್ಯಕ್ತಗೊಳ್ಳುತ್ತ ಬಂದಿವೆ. ಈ ಹಿನ್ನೆಲೆಯಿಂದ ಮೈಲಾರಲಿಂಗ ಮತ್ತು ಬಿಳಿಗಿರಿ ರಂಗನ ಕಾವ್ಯಗಳು ಓದುಗನ ಗಮನ ಸೆಳೆಯುತ್ತವೆ.

ಮೈಲಾರಲಿಂಗನ ಕಾವ್ಯದಲ್ಲಿ ಬರುವ ಕುಸುಮಾಲೆ–ಮೈಲಾರಲಿಂಗರ ಪ್ರಣಯ ಪ್ರಸಂಗವುಳ್ಳ ಕೋಮಾಲೆ ಸಂಧಿಯ ಸಾಲುಗಳು ಮೇಲಿನ ಮಾತಿಗೆ ಪುಷ್ಟಿ ನೀಡುವಂತಿವೆ.

**ಆSS ಕೋಮಾಲಿ**
**ಸೀ ನೀರು ಬಾವಿ ದಾರಿ ಹಿಡಿದಾಳೂ**
**ದೇವಾರು ದೇವಾ :**

**ಪಿಲ್ಲಿ ಕಾಲುಂಗ**
**ಕಾಲೊಳಗೆ ಇಟಗೊಂಡು**
**ಘಲ್ಲು ಘಲ್ಲು ಎಂತಾ ಬರುತಾಳಾ**
**ದೇವಾರು ದೇವಾ :**

**ಕೋಮಾಲಿ ಬರುವುದಾ ಗೊರವಯ್ಯ**
**ಕಣ್ಣೆಟ್ಟು ಕಂಡನಲ್ಲೆ;**
**ಅತ್ತ ಇತ್ತ..................**
**ಮುಂಜಾನೆ ಬಂದೇವೋ**
**ಸಂಜ್ಯಾದ ರಾಗ್ಯಾವೋ**
**ಎತ್ತಪ್ಪ ನಮಗೆ ಕೊಡಗಾಳSS**
**ದೇವಾರು ದೇವಾ :**

**ಅಪ್ಪಪ್ಪಾ ಎಂದಾರೇSS**
**ನಾನೇಕೆ ಎತ್ತಾಲಿಸಸ**
**ನಿಮ್ಮ ಅಪ್ಪಗೆ ಅಳಿಯನೂSS**
**ದೇವಾರು ದೇವಾ :**

**ಒಳ್ಳೊಳ್ಳೆ ಮಾತುಗಳು**
**ನಾನೇನು ಆಡಿದರೇSS**
**ಕೆಟ್ಟಾ ಮಾತುಗಳಾ ನುಡಿಯುತ್ತೀಯಾ**
**ದೇವಾರು ದೇವಾ :**

**ಏSS ಮೈಲಾರಲಿಂಗ**
**ಮಕ್ಕಳ ಸಂತಾನ ನಿನಗಿಲ್ಲೇನೋ**
**ದೇವಾರು ದೇವಾ :**

**ಏ ಮೈಲಾರಲಿಂಗ**
**ನನ್ನಂತ ಹೆಣ್ಣುಮಗಳು ನಿನಗಿಲ್ಲೇನೋ**
**ದೇವಾರು ದೇವಾ :**

**ಮುಂಜೇಲಿ ಬಂದೇವು**
**ಸಂಜ್ಯಾದ ರಾದಾವೋ**

ಎತ್ತಣ್ಣ ನನಗೆ ಕೊಡಗಳೂ
ದೇವಾರು ದೇವಾ :

ಅಣ್ಣಣ್ಣಾ ಅಂದರೆ ನಾನ್ಯಾಕೆ ಎತ್ತಾಲಿ
ನಿಮ್ಮ ಅಣ್ಣರಿಗೆ ಬಾ ಮೈದಾನೂ
ದೇವಾರು ದೇವಾ :

ಕೋಮಾಲೇ
ನನ್ನಾ ನೀನು ಮದುವೆ ಮಾಡಿಕೋಬೇಕುSS
ದೇವಾರು ದೇವಾ :

ಏ ಕೋಮಾಲೇ
ಕಿರು ಬೆಟ್ಟಲೇ ಕೊಡಾ ಎತ್ತುತೀನಿ
ದೇವಾರು ದೇವಾ :

ಕಣ್ಣೆರಡು ಚೆಗ್ಯಾವಲ್ಲೋ
ಮುದಿಗೊರವಾ
ಗಲ್ಲೆರಡು ಸೊಕ್ಯಾವಲ್ಲೋ :
ಮುದಿಗೊರವಾ
ಹಲ್ಲೆರಡು ಬಿದ್ಯಾವಲೋ :

ಹಲ್ಲೆರಡು ಬಿದ್ಯಾವಲ್ಲೋ
ಮುದಿಮಲ್ಲ
ಮೀಸಿಗೆ ಸಿಂಬಾಳಲ್ಲೋ..

ಕರಿಯ ಕಂಬಳಿ
ಮುರುದು ಗದ್ದಿಗೆ ಮಾಡಿ
ಕರಿ ಆಲಕ ಶಿವನು ನೆಲೆಯಾ ನಿಂತನು
ದೇವಾರು ದೇವಾ :

ಭಂಡಾರದ ಚೀಲದಾಗ
ಬಲಗೈಯ ನಿಟ್ಟಾನೆ
ಒಂದಿಡಿ ಭಂಡಾರ ತಗೂದಾನೆ
ದೇವಾರು ದೇವಾ :

ಆSS ಮೈಲಾರಲಿಂಗ
ಹದಿನಾರು ವರುಷದ ಹಸುಮಗಾ
ದೇವಾರು ದೇವಾ :

ಆSS ಮೈಲಾರಲಿಂಗ
ಸೂರ್ಯ ಮಿಂಚಿದಾಂಗ ಮಿಂಚುತಾನ
ದೇವಾರು ದೇವಾ :

ಏನಂತ ತಾನೇ ನುಡಿಯುತಾಳಾ
ದೇವಾರು ದೇವಾ :

**ಏ ಮಾಯಿಕಾರ**
**ನಿನ್ನ ನಾ ಮದುವೆ ಮಾಡಿಕೊಂತೀನಿ**
**ದೇವಾರು ದೇವಾ :"**

(ಸಂ: ಮಂಜುನಾಥ ಬೇವಿನಕಟ್ಟೆ, ಮೈಲಾರಲಿಂಗನ ಕಾವ್ಯ, ಪು. ೧೪೪ – ೧೬೧)

ಈ ಕಾವ್ಯದಲ್ಲಿ ಮೈಲಾರಲಿಂಗ ಶೂದ್ರನಾಗಿ, ತನ್ನ ಸಮಜಾತಿಯ ಸಹೋದರಿಯರಾದ ಗಂಗೆಮಾಳಮ್ಮ, ತುಪ್ಪದ ಮಾಳಮ್ಮರನ್ನು ಮದುವೆಯಾಗಿದ್ದಾನೆ. ಆದರೂ ಬುಡಕಟ್ಟು ಮೂಲದ ಹೆಣ್ಣಾದ 'ಕುಸುಮ'ಳನ್ನು ಒಲಿಸಿಕೊಂಡು ಮದುವೆಯಾಗಲು ಹೂಡಿರುವ ತಂತ್ರ ಗಮನಾರ್ಹವಾಗಿದೆ. ಮೈಲಾರಲಿಂಗ ತನ್ನ ಕಾಲದಲ್ಲಿ ಏನೆಲ್ಲಾ ಪ್ರಸಿದ್ಧಿ ಪಡೆದ ನಾಯಕನಾಗಿದ್ದರೂ, ಅವನ ಕುರಿತ ಕಾವ್ಯ ಆ ಜನಾಂಗದ ಜನಪದ ಕಾವ್ಯವಾಗಿಲ್ಲ. ಈತ ಮಾಳಮ್ಮ ಸಹೋದರಿಯರನ್ನು ಮದುವೆಯಾದಾಗಲೂ ಇವರ್‍ಯಾರ ಜೀವನಾನುಭವ ಈ ಕಾವ್ಯದಲ್ಲಿಲ್ಲ. ಆದರೆ ಬುಡಕಟ್ಟು ಬಾಲೆ 'ಕುಸುಮಾಲೆ'ಯನ್ನು ಮದುವೆಯಾದಾಗ ಆ ಜನರ ಮನದೊಳಗೆ ಕುಸುಮಾಲೆ ಮತ್ತು ಮೈಲಾರಲಿಂಗರ ಜೀವನ ಸಂಬಂಧದ ಕಥೆಯ ಚರಿತ್ರೆಯನ್ನೆ ಹಾಡಾಗಿ ಹಾಡಿದ್ದು, ಮೌಖಿಕ ಸಾಹಿತ್ಯವಾಗಿ ಜನಪ್ರಿಯವಾಯ್ತು. ಇದೇ ರೀತಿ ಬಿಳಿಗಿರಿರಂಗನ ಕಾವ್ಯ ಮತ್ತು ಚಾಮುಂಡಿ ನಂಜುಂಡೇಶ್ವರರ ಕಾವ್ಯಗಳು ಒಂದೇಮಾದರಿಯಲ್ಲಿ ಹುಟ್ಟಿ ಬೆಳೆದಿವೆ. ಇವುಗಳು ವೈದಿಕ ಪುರಾಣ ಮತ್ತು ಮನುಸ್ಮೃತಿಯ ನಿಯಮಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡು ಬೆಳೆದು ಬಂದಿದ್ದರಿಂದಲೇ ವಯಸ್ಸಾದ ಮೈಲಾರಲಿಂಗ ತಾನು ಶೂದ್ರ ನಾಯಕನೆಂಬ ಅಹಂನಿಂದಲೇ ತಳ ಸಮುದಾಯದ ಹೆಣ್ಣು ಮಗಳಾದ ಸುಂದರಿ ಕುಸುಮಳನ್ನು ಒಲಿಸಿಕೊಂಡು ಮದುವೆಗೆ ಒಪ್ಪಿಗೆ ಪಡೆದುಕೊಳ್ಳುವುದು ಶಿವನ ಮಾಯಾರೂಪಿಯಾದ ಯುವಕನಾಗಿ ಎಂಬುದು ವಾಸ್ತವ ಸಂಗತಿ. ಇದೇ ಮಾದರಿಯಲ್ಲಿ ಬಿಳಿಗಿರಿರಂಗ ಕುಸ್ಮದೇವಿ, ನಂಜುಂಡ ಚಾಮುಂಡಿಯರ ಸಂಬಂಧ ಬೆಳೆದಿದೆ. ಇದರಿಂದ ಕೆಳಜಾತಿಯ ಹೆಣ್ಣು ಮಕ್ಕಳನ್ನು ಮೇಲ್ಜಾತಿಯ ಯಾರಾದರೂ, ಹೇಗಾದರೂ ಬಳಸಿಕೊಳುತ್ತಿದ್ದರೆಂಬುದು ತಿಳಿಯುತ್ತದೆ. ಆದರೆ ಈ ನಾಯಕರಿಗೆ ಯಾವ ಶಿಕ್ಷೆಯೂ ಇಲ್ಲದಂತೆ ಮಾಡಿ ಜನಪದ ಕಾವ್ಯ ಅವರನ್ನು ವೈಭವೀಕರಿಸಿರುವುದು ಆ ಕಾಲದ ಭಾವಜೀವಿ ಮೌಖಿಕ ಜನಪದರ ಮುಂದಾಲೋಚನೆ ಇಲ್ಲದ ಬೌದ್ಧಿಕ ದೌರ್ಬಲ್ಯದ ಸೂಚಕವಾಗಿದೆ.

ಇಷ್ಟಾದರೂ ಈ ಜನಪದ ಕಾವ್ಯಗಳು ತಮ್ಮ ಬುಡಕಟ್ಟು ಮೂಲದ ನೈಜ ಭಾಷೆ, ಭಾವ, ನೀತಿ, ತತ್ವದ ಕಟ್ಟುಪಾಡುಗಳನ್ನು ಉಳಿಸಿಕೊಂಡು ಬಂದಿವೆ. ಇವು

ಹೆಣ್ಣು-ಗಂಡಿನ ಸಂಬಂಧದಲ್ಲಿ ತಮ್ಮ ಕಟ್ಟುಪಾಡುಗಳನ್ನು ಮೀರಿವೆ. ವೈದಿಕ ಪುರಾಣ ಮತ್ತು ಸಮಾಜಗಳ ಪ್ರಭಾವದಿಂದ ಈ ತಳಮೂಲ ಸಮುದಾಯಗಳ ಜನರ ಸಾಂಸ್ಕೃತಿಕ ಬೇರಿಗೆ ಬಿಸಿನೀರೆರೆದಂತಾಗಿದೆ. ಇವರು ಇವತ್ತಿಗೂ ತಮ್ಮ ಸ್ವಂತಿಕೆಯನ್ನು ಕಳೆದುಕೊಂಡು ಕಟ್ಟಾ ವೈದಿಕ ಬ್ರಾಹ್ಮಣರಾಗಿ ಬದಲಾಗಿದ್ದಾರೆ. ಇದರ ಹಿನ್ನೆಲೆಯನ್ನು ಅರಸುತ್ತಾ ಹೋದರೆ ಮನುವಿನ ಪ್ರಕಾರ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ಅವರ ಸಮಜಾತಿಯ ಹೆಣ್ಣುಗಳನ್ನು ವಿವಾಹವಾಗಬೇಕು. ಆದರೆ ಇವರಿಗೆ ತಳಜಾತಿ ಹೆಣ್ಣು ಮಕ್ಕಳನ್ನು ತಮ್ಮ ದೈಹಿಕ ಸುಖಕ್ಕೆ ಬಳಸಿಕೊಳ್ಳುವ ಸ್ವಾತಂತ್ರ್ಯವನ್ನು ನೀಡಿದ್ದರಿಂದಲೇ ಅವರಿಗೆ ವಯಸ್ಸಿನ ಯಾವ ಅಂತರವೂ ಇಲ್ಲದೆ, ಈ ಹೆಣ್ಣು ಮಕ್ಕಳಿಗೆ ಬಾಲ್ಯ ವಿವಾಹವು ಮೇಲ್ಜಾತಿಯ ಪುರುಷರಿಗಾಗೇ ರೂಢಿಗೆ ಬಂದಂತೆ ಕಂಡುಬರುತ್ತದೆ. ಇದಕ್ಕೆಲ್ಲಾ  ಮನುಸ್ಮೃತಿ ಅವಕಾಶ ನೀಡಿತ್ತು. ಅದೇ ಮೇಲ್ಜಾತಿ ಜನರಿಗೆ ಅಂತರ್ಜಾತಿ, ವರ್ಣ, ವರ್ಗಗಳ ವಿವಾಹ ನಿಷೇಧವಿತ್ತು. ಅದೇ ರೀತಿ ಶೂದ್ರ ಪುರುಷರು ವೈಶ್ಯ, ಕ್ಷತ್ರಿಯ, ಬ್ರಾಹ್ಮಣ ಹೆಣ್ಣು ಮಕ್ಕಳನ್ನು ವಿವಾಹವಾದರೆ ಅಪರಾಧವಾಗಿ ದಂಡ ಮತ್ತು ಸಾವು ಎರಡು ಸಂಭವಿಸುತ್ತಿದ್ದ ಕಾಲವಿತ್ತು. ಆದ್ದರಿಂದಲೇ ಮಹಿಷಾಸುರನು ಶೂದ್ರನಾದ ಕಾರಣ ಚಾಮುಂಡಿಯನ್ನು ವೈದಿಕ ಪುರಾಣಗಳು ಬ್ರಾಹ್ಮಣ ಹೆಣ್ಣು ಮಗಳೆಂದು ಪರಿಭಾವಿಸಿ, ಚಾಮುಂಡಿ-ಮಹಿಷಾಸುರರ ಸಂಬಂಧವನ್ನು ಒಪ್ಪದೆ ತಿರಸ್ಕರಿಸಿ, ನಂಜುಂಡನ ಸಂಬಂಧವನ್ನು ಪುರಸ್ಕರಿಸಿ ಮಹಿಷನನ್ನು ಸಂಹರಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಈ ಕಾವ್ಯಗಳು ಬುಡಕಟ್ಟು ಜನಪದ ದ್ರಾವಿಡರ ಬೌದ್ಧಮೂಲ ಜನರನ್ನು ಶೈವಮತಕ್ಕೆ ಪರಿವರ್ತನೆಯಾಗುತ್ತಿದ್ದ ಹನ್ನೊಂದನೇ ಶತಮಾನದಿಂದ ಆರಂಭವಾದ ಆ ಕಾಲದ ಸಾಂಕೇತಿಕ, ಸಾಂಸ್ಕೃತಿಕ ವರ್ಣ ಸಂಕರ ಕಾವ್ಯಗಳಾಗಿವೆ. ಇದು ಶಂಕರಾಚಾರ್ಯರ ಕಾಲದ ಬದಲಾವಣೆಯು ಆಗಿರಬಹುದು. ಇದರ ನಂತರ ಶೈವರು ಮಾಡಿದ ಕಾರ್ಯವನ್ನರಿತು ಜಾಗೃತರಾದ ವೈಷ್ಣವ ಮತ ಚಿಂತಕರು ತಮ್ಮ ಮತದ ಪರಿವರ್ತನೆಯ ದಾರಿಹಿಡಿದು, ಬೌದ್ಧ ಮೂಲ ತಳಮೂಲ ಸಮುದಾಯದವರನ್ನು ಅವರ ಏಳಿಗೆ, ಉದ್ಧಾರದ ಹೆಸರಿನಲ್ಲಿ ಮಾಡಿದ ಮತಾಂತರ ಕಾರ್ಯ ತಣ್ಣನೆ ಯಾರ ಗಮನಕ್ಕೂ ಬಾರದಂತೆ ಸಾಗಿಬಂದಿದೆ. ಪ್ರಧಾನ ಮತಚಿಂತಕರಾದ ರಾಮಾನುಜಾಚಾರ್ಯ, ಮಧ್ವಾಚಾರ್ಯರ  ಕಾರ್ಯಗಳೇ ಆ ಕಾಲದಲ್ಲಿ ಹೆಚ್ಚು ಪ್ರಸಿದ್ಧಿ ಪಡೆದಿವೆ. ಈ ದಾರಿಹಿಡಿದು ಪರಿವರ್ತನೆಯಾದ ಬೇಲೂರ ಚೆನ್ನ, ಚೆನ್ನಕೇಶವನಾದುದು, ಮೇಲುಕೋಟೆ ಚೆಲುವ, ಚೆಲುವರಾಯನಾದ ಇತಿಹಾಸದ ಬೆಳವಣಿಗೆಗಳು ನಮ್ಮ ಕಣ್ಣ ಮುಂದೆಯೇ ಇವೆ.

ಈ ಬದಲಾವಣೆಯಿಂದಾಗಿಯೇ ಇವತ್ತಿಗೂ ಬುಡಕಟ್ಟು ಮೂಲ ಪರಿಶಿಷ್ಟಜಾತಿ/ವರ್ಗ ಮತ್ತು ಹಿಂದುಳಿದ ಜಾತಿಗಳು, ಶೈವ ಮತ್ತು ವೈಷ್ಣವ ಪಂಥದ ಸಾಂಪ್ರದಾಯಿಕ ಸಮುದಾಯಗಳಾಗಿರುವುದನ್ನು ಯಾರೂ ಮರೆಯುವಂತಿಲ್ಲ. ಈ ಹಿನ್ನೆಲೆಯಲ್ಲಿ ಬಿಳಿಗಿರಿರಂಗನ ಕಾವ್ಯವನ್ನು ಪರಿಶೀಲಿಸಬಹುದು. ಇದರಲ್ಲಿ ಮೇಲಿನ ಮಾತುಗಳಿಗೆ ಪೂರಕವಾಗಿ ಬಿಳಿಗಿರಿರಂಗಯ್ಯ (ನಾರಾಯಣ)ನಿಗೆ ಈಗಾಗಲೆ ಲಕ್ಷ್ಮೀದೇವಿ, ತುಳಸಿ ಎಂಬ ಇಬ್ಬರು ಹೆಂಡತಿಯರಿದ್ದರೂ, ಸೂಳೆ ರಂಗಿಯ ಸಹವಾಸವಿದ್ದು, ಅವರನ್ನು ಬಿಟ್ಟು, ಸೋಲಿಗರ ಹೆಣ್ಣಾದ ಕುಸ್ಮದೇವಿಯನ್ನು ಒಲಿಸಿಕೊಳ್ಳುವ ಪರಿಯನ್ನು ಜನಪದರು ಕಂಡ ದರ್ಶನರೂಪವೇ ವಿಶಿಷ್ಟವಾದುದು.

"ಮೂಗಿಗೆ ಬಟ್ಟೆ ಮುಚ್ಕೊಂಡು ತೆಕ್ಕೋ ದಾಸಪ್ಪ ಅಂದ್ಳು  
ಏಯ್ ಆರೋ? ನೀನು ಆರ್ ನೀನು?  
ಸೋಲುಗ್ರ ಬೊಮ್ಮೆಗೌಡ್ನ ಮಗ ಕುಸ್ಮದೇವಿ ನಾನೇ ದಾಸಪ್ಪ  
ಯೆಣ್ಣೇ ದುಡ್ಡಿಗೆ ಬಂದಿಲ್ಲ.  
ಕಾಸಿಗೆ ಬಂದಿಲ್ಲ ಯೆಣ್ಣೇ ನಿನ್ನಾಗಿ ಬಂದಿದ್ದೀನಿ  
ನಿನ್ನಾಗಿ ಬಂದಿನಿ ಕುಸ್ಮಾಲಿ  
ಸೋಲಿಗರ ಬೊಮ್ಮನ ಮಗಳಿಗೆ :ತಂದಾನ:  
ಅಕ್ಕ ಆವ್ರ್ಯಾವ ದಾಸಯ್ಯ ಮುಳುವಾದ ದಾಸಯ್ಯ  
ಮೋರೆಯ ಮ್ಯಾಗೆ ತಿಮಿರವ್ವ :ತಂದಾನ:  
ನೀನು ಯಾವೂರ ದಾಸಯ್ಯ ಯಾವ್ ಮತದ ದಾಸಯ್ಯ  
ಕುಲವೇನು ಮುದುಕಯ್ಯ :ತಂದಾನ:  
ಅಪ್ಪ ದಾಸಪ್ಪ ಯಾವೂರ್ ನೀನು?  
ಯಾವ್ ಕೇರಿ?  
ಕುಲ ಯಾವ್ದು?  
ನಿನ್ ಮತ ಯಾವ್ದು ಅಂದ್ರು  
ಏಯ್ ಸೋಲುಗ್ರ ಬೊಮ್ಮೇಗೌಡ್ನ ಮಕ್ಳೆ  
ನಾನು ಕ್ಷತ್ರಿ ಕುಲ್ದವ್ನು  
ಸೂರ್ಯವಂಶ ನಾಮದ ಕುಲ್ದ ನಾರಾಯ್ಣ  
ಈ ಸೋಲುಗ್ರ ಐಕ ನನ್ಗೆ ಬಾಮೈಕ ಅಂದರೆ :ತಂದಾನ.......

ಎತ್ತಲಾಗದ ಗೆಣ್ಸು ಮುಳ್ಳು ಗೆಣ್ಸನ್ನು ತೆಗ್ದು......  
ಏಯ್ ಈ ಗೆಡ್ಡೆ ಗೆಣ್ಸ್ ಎತ್ತಿದ್ರೆ ನನ್ಗೆನಾಯ್ತು ಯೇಳೆಣ್ಣೆ ಅಂದ್ರು  
ಮಂಡಿಗೆತ್ತಿ ಕೊಟ್ಬುಟ್ರೆ ಮಗಳಾಯಿ  
ತಲೆಗೆತ್ತಿ ಕೊಟ್ಬುಟ್ರೆ ತಾಯಿ ಆಯ್ತಿನಿ  
ಯೇಗಲ್ಗೆ ಎತ್ತಿ ಕೊಟ್ಬುಟ್ರೆ ತಂಗಿಯಾಯ್ತಿನಿ ಅಂದ್ಲು......  
ಏಯ್ ನನ್ನ ಇಷ್ಟುದ್ದ ಎತ್ಗಂಡು ವೋದ್ರೆऽऽ  
ಬಾಳ ಪುಣ್ಯ ಬತ್ತದೆ :ತಂದಾನ: ......  
ಟುಮ್ಮ ಟುಮ್ಮೆ ಸ್ವಾಮಿ ಕುಣಿಯುತ್ತಾನೆ :ತಂದಾನ:

ಆಗ ನೋಡುದ್ರೆ ಕಾರೆಂಬ ಕತ್ಲೆ ಆಗ್ಬುಡ್ತು
ಬೋರೆಂಬ ಮಳೆ ಬಂದ್ಬುಡ್ತು
ಕಂಬ್ರಿ ಗುಡ್ಡಲ್ಲಿ ಕಾ ಅಂದ್ರ ಕಾಗೆ ಸಬ್ದವಿಲ್ಲ
ಗೂ ಎಂಬ ಗೂಗೆ ಸಬ್ದವಿಲ್ಲ
ಅಯ್ಯೋ ನಾನೇನಪ್ಪ ಮಾಡ್ಬೇಕು ಅಂದ್ರೆ
ಸೋಲಿಗರ ಬೊಮ್ಮೇಗೌಡ್ನ ಮಕ್ಕಿಲ್ಲಾ ಪೋಡು ಸೇರ್ಲಿಲ್ಲ :ತಂದಾನ:
ಸ್ವಾಮಿಯವ್ರು ಕನಕದಾಸರ ಗವಿಗೆ
        ಕುಸ್ಮದೇವಿ ಕರ್ಕಂಡು ಉಗ್ನ ಕಾರಾಚಿ ಉಲ್ಲ ಆಸ್ಗೆ ಮಾಡ್ಬುಟ್ಟು
ಸಂಕ ಚಕ್ರ ಎಡ್ಗಡೆ ಬಲ್ಗಡೆ ಇಟ್ಬುಟ್ಟು
        ಕುಸ್ಮಾಲೆ ಕಟ್ಕೊಂಡು ಬಂದಿದು.....
ನಿಮ್ಮ ಕುಸ್ಮದೇವಿಗೆ ಏನು ಅಪಾಯ ಆಗಿಲ್ಲ
ಅಲ್ಲಿ ದಾಸಯ್ಯನ ವಾಸಂತೆ ಆಗಿದಾಳೆsss :ತಂದಾನ:"

(ಸಂ. ಡಾ.ಕೇಶವನ್‌ಪ್ರಸಾದ್, ಸೋಲಿಗರು ಹಾಡಿದ ಬಿಳಿಗಿರಿ ರಂಗನ ಕಾವ್ಯ, ಪು-೫೧-೬೩)

ಈ ಕಾವ್ಯದೊಳಗೆ ಹಿಂದೆ ನಡೆದ ರಂಗಯ್ಯ ಕುಸ್ಮದೇವಿಯವರ ಜೀವನ ಕುರಿತ ದಾಖಲೆಗಳ ನಿರೂಪಣೆಯಾಗಿದೆ. ಅಂದು ವೈದಿಕ ಸಾಂಸ್ಕೃತಿಕ, ಸಾಮಾಜಿಕ ಶೋಷಣೆಯೊಳಗೆ ಸಿಕ್ಕಿ ನರಳಿದ ಈ ಬುಡಕಟ್ಟುಸಮುದಾಯದ ಹೆಣ್ಣುಮಕ್ಕಳ ಶೋಷಣೆ, ದಬ್ಬಾಳಿಕೆ, ಹಿಂಸೆಗಳು ಅವರಿಗರಿವಿಲ್ಲದಂತೆ ಸಾಗಿ ಬಂದಿರುವುದಕ್ಕೆ ಇಂತಹ ಕಾವ್ಯಗಳೆ ಸಾಕ್ಷಿ. ಇದರಲ್ಲಿ ಕನಕದಾಸರ ಗವಿಯ ಪ್ರಸ್ತಾಪವಾಗಿರುವುದನ್ನು ನೆನೆದರೆ, ಈ ಕಾವ್ಯ ೧೬-೧೭ನೇ ಶತಮಾನದಲ್ಲಿ ಕಟ್ಟಲ್ಪಟ್ಟು ರೂಢಿಗೆ ಬಂದಿರಬಹುದೆನಿಸುತ್ತದೆ. ಏಕೆಂದರೆ ೧೬-೧೮ನೇ ಶತಮಾನದಲ್ಲೇ ವೈಷ್ಣವ ಮತ ಪ್ರಚಾರ ಹೆಚ್ಚು ನಡೆದಿದ್ದನ್ನು ಇತಿಹಾಸ ದಾಖಲಿಸಿದೆ. ಈ ಹಿನ್ನೆಲೆಯಿಂದಲೇ ಹುಟ್ಟಿ ಬೆಳೆದ ಜನಪದ ಕಾವ್ಯಗಳು ವೈಷ್ಣವ ಕಾವ್ಯಗಳಾಗಿ ಮಾರ್ಪಟ್ಟಿವೆ. ಇಲ್ಲೆಲ್ಲಾ ಹೆಚ್ಚಾಗಿ ವೈದಿಕ ವೈಷ್ಣವರ ಚಾರಿತ್ರಿಕ ದಾಖಲೆಗಳೇ ಪ್ರಧಾನವಾಗಿದೆಯೇ ಹೊರತು, ಈ ಬುಡಕಟ್ಟು ತಳಮೂಲ ಸಮುದಾಯಗಳ ಚಾರಿತ್ರಿಕ ದಾಖಲೆಗಳು ಪ್ರಧಾನವಾಗಿಲ್ಲದಿರುವುದನ್ನು ಸೂಕ್ಷ್ಮವಾಗಿ ಗಮನಿಸಬೇಕಾಗಿದೆ.

ಈ ಕಾವ್ಯಗಳ ಚಾರಿತ್ರಿಕ ನಾಡಿಮಿಡಿತವನ್ನು ಹಿಡಿದರೆ ಪೂರ್ವದಿಂದ ಬಂದ ಆರ್ಯ ವೈದಿಕಧರ್ಮ ಬ್ರಾಹ್ಮಣಧರ್ಮವಾಗಿ ಅದರೊಳಗಿನ ಅಸಮಾನತೆ, ಅಸ್ಪೃಶ್ಯತೆಯ ಬೇಧ-ಭಾವಗಳ ವೈರುಧ್ಯದಿಂದ ನಲುಗಿ ಹೋಗಿದ್ದುದು ತಿಳಿಯುತ್ತದೆ. ಭಾರತೀಯ ಬೌದ್ಧ, ಜೈನಮೂಲ ಸಮುದಾಯದ ಜನರನ್ನು ಪರಿವರ್ತಿಸಿ ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಮೂಲಕ ತನ್ನ ಅಲ್ಪ ಸಮುದಾಯವನ್ನು ಬಹು ಸಮುದಾಯವನ್ನಾಗಿ ಮಾಡಿಕೊಳ್ಳುವ ಸಲುವಾಗಿ ಹಿಂದೂ ಧರ್ಮದ ಹೆಸರಿನಲ್ಲಿ ಮುನ್ನಡೆಯುತ್ತಿದೆ. ಇದರಿಂದ ವೈದಿಕರ

ಅನಿಷ್ಟ ಪದ್ಧತಿ, ಪ್ರವೃತಿಗಳನ್ನು ಬೌದ್ಧ ಮೂಲದ ಹಿಂದೂ ಅವಲಂಬಿತ ಜನರ ಆಚಾರ–ವಿಚಾರ, ನಡವಳಿಕೆಗಳ ಕಟ್ಟು ಸಂಸ್ಕೃತಿಗೆ ವಿಸ್ತರಿಸಲಾಗಿದೆ. ಆದರೂ ಭಾರತೀಯ ಬುಡಕಟ್ಟು ತಳಮೂಲ ದ್ರಾವಿಡ ಸಮುದಾಯದ ಜನರು ಇವತ್ತಿಗೂ ತಮ್ಮ ಬೌದ್ಧ ನೆಲೆಯ ಸಾಂಸ್ಕೃತಿಕ ಆಚಾರ–ವಿಚಾರಗಳೊಂದಿಗೆ ಬ್ರಾಹ್ಮಣ ಸಂಸ್ಕೃತಿಯನ್ನು ಸಂಕರಗೊಳಿಸಿಕೊಂಡು ಜೀವನ ಮಾಡುತ್ತಿರುವುದು ವರ್ತಮಾನ ಸಮಾಜದ್ದಾಗಿದೆ. ಭಾರತೀಯ ಇಂತಹ ಸಂಕರ ಸಮಾಜದೊಳಗಿನ ಸಂಘರ್ಷದ ಕಾಲದಲ್ಲಿ ನಾನಾ ರೀತಿ ಮಾತೃಮೂಲ ಶಾಂತಿ, ಪ್ರೀತಿ, ಸಹಬಾಳ್ವೆಯ ಧ್ವನಿಪೂರ್ಣ ಸಾಹಿತ್ಯ ನಿರ್ಮಾಣಗೊಳ್ಳುತ್ತಿವೆ. ಅಂತಹ ಕೃತಿಗಳೊಳಗೆ ಸುಜಾತಅಕ್ಕಿಯವರ ಜಾನಪದಮೂಲ ನಾಟಕವಾದ 'ಚಾಮಚೆಲುವೆ'ಯೂ ಒಂದು. ಇದರಲ್ಲಿ ಚಾಮುಂಡಿ ಪಾತ್ರವನ್ನು ಇವತ್ತಿನ ಮಹಿಳಾವಾದ, ಸಮತಾವಾದದ ಪ್ರತಿನಿಧಿಯಾಗಿ ಕಟ್ಟಿಕೊಡಲಾಗಿದೆ. ಇದು ಮಾತೃಪ್ರಧಾನ ಸಮಾಜದ ಬೌದ್ಧನೆಲೆಯ ಮೈತ್ರೀಭಾವದ ಪ್ರಾತಿನಿಧಿಕ ಪಾತ್ರವೂ ಆಗಿರುವುದು ಗಮನಾರ್ಹ ಸಂಗತಿ. ಚಾಮುಂಡಿ (ಚಾಮಚೆಲುವೆ) ಒಪ್ಪಿತ ಸಮಾಜದೊಂದಿಗೆ ಶಿವ (ನಂಜುಂಡ) ನಲ್ಲಿ ಸೇರಿದಾಗ ನಾಟಕದಲ್ಲಿ ಅವನಾಡುವ ಮಾತು ಓದುಗರನ್ನು ನಾಳೆಯ ದ್ರಾವಿಡ ಜನಪದರ ಮಾತೃ ಸಂಸ್ಕೃತಿಯ ಬೌದ್ಧರ ನಾಡಿಗೆ ಕರೆದೊಯ್ಯುವಂತೆ ಅಭಿವ್ಯಕ್ತಿಗೊಂಡಿದೆ.

**"ಗದ್ದಿಗೆ ಗದ್ದಿಗೆ**
**ಸಿಂಹದ ಗದ್ದಿಗೆ**
**ಸಿಂಹಾಸನ ಗದ್ದಿಗೆ**
**ಶಿವಭಕ್ತರ ಗದ್ದಿಗೆ**

**ನಾನು ನೀನು ಜೊತೇಲಿ ಕೂಡೋ**
**ಮುತ್ತಿನ ಗದ್ದಿಗೆ ನನ್ನ ಗದ್ದಿಗೆ ಬಿಟ್ಟು**
**ನಿನ್ನ ಗದ್ದಿಗೆಗೆ ಸರಿ ಚಾಮಚೆಲುವೆ"**

(ಸುಜಾತಅಕ್ಕಿ, ಚಾಮಚೆಲುವೆ ಪು–೧೦೧)

ಈ ಮಾತಿನ ಮೂಲಕ ಸಾಮಾಜಿಕ ಸಂಕರದ ಸಾಂಸ್ಕೃತಿಕ ಚಕ್ರ ಉರುಳುತ್ತಾ ಸಾಗಿ, ಮತ್ತೆ ಮೌರ್ಯ ಸಾಮ್ರಾಜ್ಯದ ವರ್ಣ, ಲಿಂಗ ಬೇಧರಹಿತ ಸಮಸಮಾಜದ ಸಾಂಸ್ಕೃತಿಕ ಪ್ರಜಾಪ್ರಭುತ್ವದ ಆಶಾವಾದವಿದೆ. ನಾಳೆಯ ಜನಪದ ಸಾಹಿತ್ಯವು ಪುನರ್ ರೂಪುಗೊಂಡು, ಎಲ್ಲಾ ಶಾಸ್ತ್ರ, ಸಾಹಿತ್ಯ, ಪುರಾಣ, ಇತಿಹಾಸಗಳ ಮಾತೃಮೂಲ ಬೇರು ಮತ್ತೊಮ್ಮೆ ಚಿಗುರೊಡೆದು **'ಹಳೇ ಬೇರು ಹೊಸ ಚಿಗುರಾಗಲಿ'** ಎಂದು ಈ ಶತಮಾನದ ಯುವ ಮನಸ್ಸುಗಳ ಆಶಾವಾದದ ಕನಸು.

❑❑❑

# ೨. ಕನಕದಾಸರ 'ನಳಚರಿತ್ರೆ'ಯ ಕೆಲವು ಪದ್ಯಗಳ ಪಾಠ ಪರಿಷ್ಕರಣ

*– ಡಾ. ಕೆ. ಗೋಕುಲನಾಥ್*

ಕನಕದಾಸರ ನಳಚರಿತ್ರೆಯು ಭಾಮಿನಿ ಷಟ್ಪದಿಯ ಛಂದಸ್ಸಿನಲ್ಲಿರುವ ಒಂದು ಪ್ರಸಿದ್ಧ ಕನ್ನಡ ಭಾಷೆಯ ಕಾವ್ಯವಾಗಿದೆ. ಈ ಕಾವ್ಯವನ್ನು ಈ ಕೆಳಕಂಡ ವಿದ್ವಾಂಸರು ಸಂಪಾದಿಸಿರುವ ಕೃತಿಗಳನ್ನು ಪರಿಶೀಲನೆಗೆ ಸ್ವೀಕರಿಸಿದ್ದೇನೆ.

ಪ್ರೊ|| ದೇ. ಜವರೇಗೌಡ

ಡಾ|| ಎ.ವಿ. ನಾವಡ

ನಳಚರಿತ್ರೆಯನ್ನು ಅರ್ಥಾನು ಸಂಧಾನದ ದೃಷ್ಟಿಯನ್ನಿಟ್ಟುಕೊಂಡು ಮರು ಓದು ನಡೆಸಿದಾಗ ಕೆಲವು ಪದ್ಯಗಳ ಪಾಠ ಪರಿಷ್ಕರಣ ಅಗತ್ಯವೆನಿಸಿತು. ಅವುಗಳ ವಿವರ ಹೀಗಿವೆ :

೧. ನಳಚರಿತ್ರೆಯ ಮೊದಲನೆಯ ಸಂಧಿಯ ಐದನೆಯ ಪದ್ಯ ಎಲ್ಲ ಮುದ್ರಿತ ಪುಸ್ತಕಗಳಲ್ಲಿ ಹೀಗಿದೆ :

**ನಾರಿನಳಿನದಳಾಕ್ಷಿ ಜಂ
ಭಾರಿನುತೆ ಚತುರಾನನ ಪ್ರಿಯೆ
ಭೂರಿಶುಭಗುಣಭರಿತೆ ಭಕ್ತಾಶ್ರಿತ ಜನಾಧಾರೆ
ನೀರೆ ನಿಗಮ ವಿಚಾರೆ ಘನಶೃಂ
ಗಾರೆ ಭಕ್ತರಿಗೊರೆವ ಕೊಡುವ ಉ
ದಾರೆ ಶಾರದೆ ನಲಿದೊಲಿದು ನೆಲಸೆನ್ನ ಜಿಹ್ವೆಯಲಿ**

ಈ ಪದ್ಯದ ನಾಲ್ಕನೆಯ ಸಾಲಿನಲ್ಲಿ 'ಭಕ್ತರಿಗೊರೆವ' ಎಂಬ ಸಮಸ್ತ ಪದದ ಅರ್ಥಾನುಸಂಧಾನ ಈ ಸಂದರ್ಭದಲ್ಲಿ ಕೊಡುವುದಿಲ್ಲ. ಭಕ್ತರಿಗೆ + ಒರೆವ ಎಂಬುದಾಗಿ ಮಾತ್ರ 'ಭಕ್ತರಿಗೊರೆವ' ಎಂಬ ಪದವನ್ನು ಬಿಡಿಸಬಹುದಷ್ಟೆ (ಲೋಪ ಸಂಧಿ). ಸರಸ್ವತಿಯು ಭಕ್ತರಿಗೆ ಇಲ್ಲಿ ಯಾವ ಸಂದೇಶವನ್ನೂ ಕೊಡುತ್ತಿಲ್ಲ. 'ಒರೆವ' ಎಂದರೆ ಹೇಳುವ ಎಂದರ್ಥ. ಪ್ರೊ|| ದೇ.ಜ.ಗೌ. ಮತ್ತು ಪ್ರೊ|| ಎ.ವಿ. ನಾವಡ

ಅವರ ಸಂಪಾದಿತ ನಳಚರಿತ್ರೆ ಗ್ರಂಥದಲ್ಲಿ ಪಾಠಾಂತರಗಳಿಲ್ಲ. ಇದು ಗ್ರಂಥ ಸಂಪಾದನಾ ಶಾಸ್ತ್ರಾನುಸಾರ 'ಕಿವಿತಪ್ಪಿ'ನಿಂದ ಸಂಭವಿಸಿರಬಹುದಾದ ಸ್ಖಾಲಿತ್ಯ. ಇಲ್ಲಿ 'ಭಕ್ತರಿಗೊರೆವ ಕೊಡುವ ಉದಾರೆ' ಎಂದರೆ ಸರಸ್ವತಿಯು ಭಕ್ತರಿಗೆ ಹೇಳಿಕೊಡುವ ಉದಾರೆ' ಎಂದು ಅರ್ಥವಾಗುತ್ತದೆ. ಇಲ್ಲಿ ಪಾಠ ಕ್ಲೇಶವಿದೆ. ಈ ಸಾಲಿನ ಪದ್ಯಭಾಗವನ್ನು 'ಭಕ್ತರಿಗೆ ವರ ಕೊಡುವ ಉದಾರೆ" ಎಂದು ಊಹಾತ್ಮಕ ಪಾಠ ಪರಿಷ್ಕರಣ ಮಾಡಿದರೆ ಛಂದಸ್ಸು ರಕ್ಷಿತಗೊಂಡು ಪಾಠ ಕ್ಲೇಶ ನಿವಾರಣೆಯಾಗುತ್ತದೆ. ಸರಸ್ವತಿಯ ಔದಾರ್ಯವನ್ನು ಕವಿ ಕನಕದಾಸರು ಆಕೆಯು 'ಭಕ್ತರಿಗೆ ವರ ಕೊಡುವು'ದರಲ್ಲಿ ಗುರುತಿಸಿದ್ದಾರೆ. ಇಲ್ಲಿ ಆಕೆ 'ಒರೆವ' ಹೇಳುವ ಮಾತುಗಳು ಯಾವುದೂ ವ್ಯಕ್ತವಾಗಿಲ್ಲ. ಆದ್ದರಿಂದ ಉತ್ತರಾರ್ಧ ಪದ್ಯದ ಪರಿಷ್ಕೃತ ಪಾಠ ಹೀಗಾಗುತ್ತದೆ :

**ನೀರೆ ನಿಗಮ ವಿಚಾರೆ ಘವಶ್ಯಂ**
**ಗಾರೆ ಭಕ್ತರಿ[ಗೆವರ] ಕೊಡುವ ಉ**
**ದಾರೆ ಶಾರದೆ ನಲಿದೊಲಿದು ನೆಲಸೆನ್ನಾ ಜಿಹ್ವೆಯಲಿ**

೩. ನಳಚರಿತ್ರೆಯ ಸಂಧಿ–೨; ಪದ್ಯ ೩೮ ರ ಪಾಠ ಹೀಗಿದೆ :

**ಪರಮ ಗುಣನಿಧಿ ಪಕ್ಷಿ ಕೇಳು ಬಾ**
**ಹಿರನು ಪಾತಕಿ ಮದನನೆಲೆ ನಿ**
**ಷ್ಠುರ ದೊಳೆಸೆಯಲು ಪುಷ್ಪ ಬಾಣದಿನೊಂದುದೆನ್ನೊಡಲು**

ಹಂಸ ಪಕ್ಷಿಯು ನಳನ ಅತಿಶಯವಾದ ರೂಪವನ್ನು ವರ್ಣಿಸಿದಾಗ ದಮಯಂತಿಯು ತನ್ನ ಮನಸ್ಸನ್ನು ಸಂಪೂರ್ಣವಾಗಿ ನಳನಿಗೊಪ್ಪಿಸುತ್ತಾಳೆ. ನಳನೊಡನೆ ತನ್ನ ವಿವಾಹವನ್ನು ಮಾಡಿಸಬೇಕೆಂದು ಕೇಳುವ ಪ್ರಸಂಗ ಇಲ್ಲಿದೆ : ಹಂಸವನ್ನು 'ಪರಮ ಗುಣನಿಧಿ' ಎಂದು ಹೊಗಳಿ "ಮನ್ಮಥನು ನನ್ನ ಪರವಾಗಿ ನಿಂತಿಲ್ಲ; ಅವನು ಹೊರಗಿನವನು; ಮನ್ಮಥ ಪರಮ ಪಾಪಿ ಅವನು ನಿಷ್ಠುರದಿಂದ ನನ್ನ ಮೇಲೆ ಹೂ ಬಾಣಗಳನ್ನು ಬಿಟ್ಟಿದ್ದಾನೆ, ನನ್ನ ಮನಸ್ಸು ನೊಂದಿದೆ ಎಂಬುದು ಈ ಸಾಲುಗಳ ತಾತ್ಪರ್ಯ. ಇಲ್ಲಿ ಮದನನು + ಎಲೆ – ಮದನನೆಲೆ (ಲೋಪಸಂಧಿ) ಎಂಬ ಪಾಠವಿದೆ. ಎಲೆ ಎಂಬ ಸಂಬೋಧನಾರ್ಥಕ ಪದ ಇಲ್ಲಿ ಕೂಡುವುದಿಲ್ಲ. ಇದು 'ಮದನನೆಲೆ' ಆಗಬೇಕು. 'ಪಾತಕಿ ಮದನನು ಅಲ್ಲವೆ' ಎಂಬುದು ಇದರ ತಾತ್ಪರ್ಯ. ಆದ್ದರಿಂದ ಈ ಅರ್ಧ ಷಟ್ಪದಿಯ ಪಾಠ ಹೀಗಾಗಬೇಕು.

**ಪರಮ ಗುಣನಿಧಿ ಪಕ್ಷಿ ಕೇಳ್ ಬಾ**
**ಹಿರನು ಪಾತಕಿ ಮದನ[ನ]ಲೆ ನಿ**
**ಷ್ಠುರ ದೊಳೆಸೆಯಲು ಪುಷ್ಪಬಾಣದಿ ನೊಂದುದೆನ್ನೊಡಲು.**

□□□

# ೩. ಚಾಮರಾಜನಗರ ಜಿಲ್ಲೆಯ ಕನ್ನಡ ಪದಗಳ ವೈಶಿಷ್ಟ್ಯ

– ಸುರೇಶ. ಎಂ

ಭಾಷೆ ಮಾನವನಿಗೆ ಅತ್ಯಗತ್ಯವಾದ ಮತ್ತು ಆತ ಬಳಸುವ ಶಕ್ತಿಶಾಲಿ ಸಂಪರ್ಕ ಮಾಧ್ಯಮ. ಭಾಷೆಯ ಇತಿಹಾಸ ಮಾನವನ ಇತಿಹಾಸದಷ್ಟೆ ಪ್ರಾಚೀನವಾದದು. ಮಾತನಾಡುವ ಶಕ್ತಿಯಿರುವುದರಿಂದಲೇ ಮನುಷ್ಯ ಉಳಿದ ಜೀವಿಗಳಿಗಿಂತ ಮುಂದುವರೆದಿರುವ ಇಂದಿನ ನಾಗರಿಕಯುಗದ ಎಂತಹ ಸಂಕೀರ್ಣ ಸಮಸ್ಯೆಯನ್ನಾದರೂ ಅತಿ ಸುಲಭವಾಗಿ ಬಗೆಹರಿಸುವ ಶಕ್ತಿ ಭಾಷೆಗೆ ಇದೆ. ಈ ರೀತಿಯಾಗಿ ಮನುಷ್ಯನ ಜೀವನದ ಸರ್ವಕ್ಷೇತ್ರಗಳಿಗೆ ಭಾಷೆ ಅಗತ್ಯವಾಗಿ ಬೇಕು. ಜನಿಸಿದ ಮಗುವು ತನ್ನ ತಾಯಿಯ ಮಡಿಲಲ್ಲಿ ಸಹಜವಾಗಿ ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಬದಲಾವಣೆಯುಂಟಾಗುತ್ತದೆ. ಭೌಗೋಳಿಕ ಪ್ರತಿ ೪೦-೪೫ ಕಿಲೋಮೀಟರ್‌ಗೆ ಒಂದು ಭಾಷೆಯ ಪದಗಳ ಉಚ್ಚಾರ ಶೈಲಿಯಲ್ಲಿ ಸೂಕ್ಷ್ಮ ವ್ಯತ್ಯಾಸಗಳನ್ನು ಭಾಷಾಶಾಸ್ತ್ರಜ್ಞರು ಗುರುತಿಸಿದ್ದಾರೆ. ಜಾತಿ, ಧರ್ಮ, ವೃತ್ತಿ ಮತ್ತು ಪರಿಸರಕ್ಕೆ ಅನುಗುಣವಾಗಿಯೂ ಉಪಭಾಷೆಗಳು ರೂಪುಗೊಂಡಿರುತ್ತವೆ. ಒಂದು ಪ್ರದೇಶದ ಜನರಾಡುವ ಭಾಷೆಯನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಾ ಹೋದರೆ ಊರಿಗೊಂದು, ಜಾತಿಗೊಂದು ಉಪಭಾಷೆಗಳು ಗೋಚರವಾಗುತ್ತವೆ. ಭಾವನೆಗಳನ್ನು ಭಾಷೆಯಲ್ಲಿ ವ್ಯಕ್ತಪಡಿಸುವಷ್ಟು ಸುಲಲಿತವಾಗಿ ಮತ್ತು ಅರ್ಥಪೂರ್ಣವಾಗಿ ಬೇರೆ ಯಾವ ಮಾಧ್ಯಮದಿಂದಲೂ ಸಾಧ್ಯವಿಲ್ಲ.

ಚಾಮರಾಜನಗರ ಜಿಲ್ಲೆಯು ಬಹುತೇಕ ಗ್ರಾಮೀಣ ಪ್ರದೇಶಗಳಿಂದ ಆವೃತವಾದ ಪ್ರದೇಶವಾಗಿದೆ. ಈ ಜಿಲ್ಲೆಯಲ್ಲಿ ನಗರ ಪ್ರದೇಶಗಳು, ಕೈಗಾರಿಕಾ ಪ್ರದೇಶಗಳು ಬಹುತೇಕ ಕಡಿಮೆ, ಗ್ರಾಮೀಣ ಮತ್ತು ನಗರದಲ್ಲಿ ವಾಸಮಾಡುವ ಜನರು ಎಲ್ಲರು ಸಹ ಸಹಜವಾದ ಆಡುಭಾಷೆಯನ್ನು ಮಾತನಾಡುತ್ತಾರೆ. ಈ ಪ್ರದೇಶದಲ್ಲಿರುವ ಜನರು ವ್ಯಾವಹಾರಿಕವಾಗಿ ಮಾತನಾಡುವ ಕನ್ನಡವೂ ಬೇರೆ ಪ್ರದೇಶದ ಜನರಿಗೆ ಒರಟಾಗಿ ಕಾಣಿಸುತ್ತದೆ.

| ಚಾ. ನಗರದ ಕನ್ನಡ ಭಾಷೆಯ ವೈಶಿಷ್ಟ್ಯ ಪದಗಳು | | ಶಿಷ್ಟ ಕನ್ನಡ ಪದಗಳು |
|---|---|---|
| kaëëu | ಕಳ್ಳು | ಕರಳು |
| beëëu | ಬೆಳ್ಳು | ಬೆರಳು |
| baëëu | ಬಳ್ಳು | ಬರಳು |
| maëëu | ಮಳ್ಳು | ಮರಳು |
| kirdu | ಕಿರ್ದು | ಚಿಕ್ಕದು |
| guëëu | ಗುಳ್ಳು | ಗುಡಿಸಲು |
| gundi | ಗುಂದಿ | ಪೊದೆ |
| baclu | ಬಚ್ಲು | ಚರಂಡಿ |
| po:ni | ಪೋನಿ | ಕಿರುದಾರಿ |
| ko:ëëi | ಕೊಳ್ಳಿ | ಕೊಡಲಿ |
| aruòa | ಅರುಣ | ಊಟದ ತಟ್ಟೆ |
| so:ëëu | ಸೊಳ್ಳು | ದೀಪ |
| ya:nóa | ಯಾಂಡ | ಏನು |
| paëëi | ಪಳ್ಳಿ | ಶಾಲೆ |
| su:lu | ಸೂಲು | ಉಸಿರು |
| ca:kna | ಚಾಕ್ನ | ಒಣ ಮಾಂಸ |
| badi | ಬದಿ | ಕೆಸರು |
| meñre | ಮೆಟ್ರೆ | ಕತ್ತು |
| rañe | ರಟ್ಟೆ | ತೋಳು |
| ku:ëu | ಕೂಳು | ಅನ್ನ |
| pouóe | ಪೌಡೆ | ಬಟ್ಟೆ |
| toppe | ತೊಪ್ಪೆ | ಸಗಣಿ |
| naëëi | ನಳ್ಳಿ | ಏಡಿ |
| bi:ñe | ಬೀಟೆ | ಬಿಲ |
| ambli | ಅಂಬ್ಲಿ | ಗಂಜಿ |
| uëëi | ಉಳ್ಳಿ | ಹುರುಳಿ |
| taóka | ತಡ್ಕ | ಬಿದಿರಿನ ಬಾಗಿಲು |
| vata:re | ವತಾರೆ | ಬೆಳಿಗ್ಗೆ |
| miëëa | ಮಿಳ್ಳ | ಕಂಚಿನ ತಂಬಿಗೆ |

3

| | | |
|---|---|---|
| gumchaki | ಗುಮ್ಚಕಿ | ಗುಬ್ಬಚ್ಚಿ |
| bo:si | ಭೋಸಿ | ಪಾತ್ರೆ |
| kose | ಕೊಸೆ | ಜಡೆ |
| kaëëaka:yi | ಕಳ್ಳಕಾಯಿ | ಕಡಲೆಕಾಯಿ |
| aññu | ಅಟ್ಟು | ಓಡಿಸು |

**ಭಾಷಾ ವ್ಯತ್ಯಾಸಕ್ಕೆ ಕಾರಣಗಳು**

ಆಡುಭಾಷೆಯಲ್ಲಿ ಮಾತ್ರ ಬದಲಾವಣೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಭಾಷೆಯು ವ್ಯತ್ಯಾಸಗೊಳ್ಳಲು ಕಾರಣವಾಗುವ ಎಲ್ಲ ಅಂಶಗಳನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟದ ಕೆಲಸ. ಆದರೂ ಭಾಷಾ ವಿಜ್ಞಾನಿಗಳು ಸಾಮಾನ್ಯವಾಗಿ ಒಪ್ಪುವ ಕೆಲವು ಕಾರಣಗಳಿವೆ. ಭಾಷಾ ವ್ಯತ್ಯಾಸಕ್ಕೆ ಪ್ರಮುಖ ಕಾರಣವೆಂದರೆ ಒಂದು ಭಾಷೆಯನ್ನು ಬಳಸುವ ಜನ ಪರಸ್ಪರ ದೂರವಾದಾಗ ಭಾಷೆಯಲ್ಲಿ ಬದಲಾವಣೆಗಳಾಗುತ್ತವೆ.

**ಭಾಷೆಯ ಸೌಲಭ್ಯಕಾಂಕ್ಷೆ** – ಮಾಡುವ ಕೆಲಸವನ್ನು ಸುಲಭಗೊಳಿಸಿಕೊಳ್ಳಬೇಕು. ಆದಷ್ಟು ಕಡಿಮೆ ಶ್ರಮವನ್ನು ಬಳಸಿ ಹೆಚ್ಚಿನ ಫಲ ಪಡೆಯಬೇಕೆಂಬುದು ಮಾನವನ ಒಂದು ಸಹಜ ಗುಣ, ಇದರಿಂದಾಗಿ ಉಚ್ಚರಿಸಲು ಕಷ್ಟವಾದ ಶಬ್ದಗಳನ್ನು ಸುಲಭಗೊಳಿಸಿ ದಿನ ನಿತ್ಯದ ಜೀವನದಲ್ಲಿ ಮಾತನಾಡುವುದನ್ನು ನಾವು ಕಾಣುತ್ತೇವೆ. ಉಚ್ಚಾರಣೆಯ ಸೌಲಭ್ಯಕ್ಕಾಗಿ ಭಾಷೆಯಲ್ಲಿ ಬದಲಾವಣೆಗಳನ್ನು ಕಾಣಬಹುದು.

**ಅನ್ಯ ಭಾಷಾಸಂಪರ್ಕ** – ಯಾವುದೇ ಒಂದು ಭಾಷಾ ಸಮುದಾಯವು ದೀರ್ಘಕಾಲದವರೆಗೆ ಇನ್ನಿತರ ಭಾಷಾ ಸಮುದಾಯಗಳಿಂದ ಪ್ರತ್ಯೇಕವಾಗಿ ಏಕಾಂಗಿಯಾಗಿ ಉಳಿಯುವುದು ಸಾಧ್ಯವಿಲ್ಲ. ಅದು ತನ್ನ ಸುತ್ತಮುತ್ತಲಿನ ಭಾಷಾ ಸಮುದಾಯಗಳ ಜತೆಯಲ್ಲಿ ಒಂದಲ್ಲ ಒಂದು ಬಗೆಯ ವ್ಯಾವಹಾರಿಕ ವಿನಿಮಯದಲ್ಲಿ ತೊಡಗಿಕೊಂಡಿರುತ್ತದೆ. ಅಂತಹ ಸಂದರ್ಭಗಳಲ್ಲಿ ಒಂದು ಭಾಷೆಯ ಪ್ರಭಾವವು ಮತ್ತೊಂದು ಭಾಷೆಯ ಮೇಲೆ ಆಗುವುದು ಅನಿವಾರ್ಯ. ಭಾಷೆಗಳ ಪರಸ್ಪರ ಸಂಪರ್ಕ ಪ್ರಭಾವವು ಹೆಚ್ಚಾಗಿ, ಒಂದು ಭಾಷೆಯು ಮತ್ತೊಂದು ಭಾಷೆಯಿಂದ ಯಾವ ಯಾವ ಬಗೆಗಳಲ್ಲಿ ಶಬ್ದಗಳನ್ನು ಸ್ವೀಕರಿಸುತ್ತದೆ ಎಂಬುದನ್ನು, ಜನರು ಆಡುವ ಭಾಷೆಯಿಂದ ತಿಳಿಯಬಹುದು.

**ಧ್ವನಿ ವ್ಯತ್ಯಾಸ** – ಒಂದು ಭಾಷೆಯ ಧ್ವನಿಗಳಲ್ಲಿ ನಡೆಯುವ ವ್ಯತ್ಯಾಸಗಳನ್ನು ಧ್ವನಿ ವ್ಯತ್ಯಾಸ ಎಂದು ಕರೆಯುತ್ತಾರೆ. ಪರಸ್ಪರ ಸಂಬಂಧವುಳ್ಳ ಎರಡು ಭಾಷೆಗಳನ್ನು ಮಾತನಾಡುವ ಇಬ್ಬರು ಭಾಷಿಕರನ್ನು ಗಮನಿಸಿದಾಗ ಒಂದೇ ಪದಕ್ಕೆ ಅವರಿಬ್ಬರೂ ಬೇರೆ ಬೇರೆ ಧ್ವನಿಗಳನ್ನು ಬಳಸಿದರೆ ಆ ಪದದಲ್ಲಿ ಧ್ವನಿ ವ್ಯತ್ಯಾಸವಿದೆ ಎಂದು

ಗುರುತಿಸಲಾಗುತ್ತದೆ. ಉದಾ : ಮೂಲ ದ್ರಾವಿಡದ ಪದಾದಿಯ 'ಪ' ಕಾರ ತಮಿಳ್, ತೆಲುಗಿನಲ್ಲಿ 'ಪ' ಕಾರವಾಗಿಯೇ ಉಳಿದಿದ್ದರೆ ಕನ್ನಡದಲ್ಲಿ 'ಹ' ಕಾರವಾಗಿದೆ.

| ಕನ್ನಡ | ತಮಿಳ್ | ತೆಲುಗು |
|---|---|---|
| ಹಾಲು | ಪಾಲ್ | ಪಾಲು |
| ಹಾವು | ಪಾಂಬು | ಪಾವು |

**ಶಿಷ್ಟ –ಗ್ರಾಮ್ಯ ಸಂಪರ್ಕ** – ಯಾವುದೇ ಭಾಷೆಯನ್ನು ವಿದ್ಯಾವಂತರಾದ ನಗರವಾಸಿಗಳು ಆಡುವ ಭಾಷೆಗೂ ಅವಿದ್ಯಾವಂತರಾದ ಗ್ರಾಮೀಣರು ಆಡುವ ಭಾಷೆಗೂ ವ್ಯತ್ಯಾಸವಿದ್ದೇ ಇರುತ್ತದೆ. ಸಾಮಾನ್ಯವಾಗಿ ಹಳ್ಳಿಯ ಜನ ಪಟ್ಟಣದವರೊಡನೆ ಮಾತನಾಡುವಾಗ ತಮಗೆ ಸಹಜವಾದ ಶಬ್ದಗಳನ್ನು, ಉಚ್ಚಾರಗಳನ್ನು ಕೈಬಿಟ್ಟು ನಗರದ ಜನರು ಮಾತಾಡುವ ಶೈಲಿಯಲ್ಲಿ ಭಾಷೆಯನ್ನು ಅನುಕರಿಸುತ್ತಾರೆ. ಅಪರೂಪಕ್ಕೆ ಕೆಲವೊಮ್ಮೆ ನಗರವಾಸಿಗಳು ಸಹ ಹಳ್ಳಿಯ ಜನರಾಡುವ ಭಾಷೆಯನ್ನು ಕೆಲವು ಸಂದರ್ಭಗಳಲ್ಲಿ ಒಂದೆರಡು ಶಬ್ದಗಳನ್ನು ಅನುಕರಣೆ ಮಾಡುವುದು ಉಂಟು.

**ಭೌಗೋಳಿಕ ಕಾರಣಗಳು**– ಜನರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋದಾಗ, ಒಂದು ಪ್ರದೇಶದ ಜನರಾಡುವ ಭಾಷೆ ಇನ್ನೊಂದು ಪ್ರದೇಶದ ಭಾಷೆಯ ಮೇಲೆ ಪ್ರಭಾವ ಬೀರುತ್ತದೆ. ವೃತ್ತಿಗಳು, ವ್ಯವಹಾರ ಪರಸ್ಪರ ಸಂಪರ್ಕಕ್ಕೆ ಬಂದಾಗ ಭಾಷೆಯೂ ಒಂದರ ಜತೆ ಇನ್ನೊಂದು ಬೆರೆಯುತ್ತದೆ. ಭಾಷೆಯ ಧ್ವನಿ, ವ್ಯಾಕರಣ ಮತ್ತು ಶಬ್ದಕೋಶ ಇವುಗಳು ಒಂದರ ಮೇಲೆ ಇನ್ನೊಂದು ಪ್ರಭಾವವನ್ನು ಬೀರುತ್ತದೆ. ಇತ್ತೀಚೆಗೆ ಜನರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಚಲಿಸುವುದು ಹೆಚ್ಚು ಸುಲಭವಾಗಿರುವುದರಿಂದ ಈ ವ್ಯತ್ಯಾಸಗಳು ಹೆಚ್ಚಾಗುತ್ತಿವೆ.

**ಸಾಮಾಜಿಕ ಪ್ರತಿಷ್ಠೆ**– ವ್ಯಕ್ತಿಗಳು ಸಮಾಜದಲ್ಲಿ ತಾವು ಗುರುತಿಸುವ, ಆರಾಧಿಸುವ ವ್ಯಕ್ತಿಗಳ ರೀತಿ ಮಾತನಾಡಲು ಪ್ರಯತ್ನಿಸುತ್ತಾರೆ. ಹಳ್ಳಿಯವರು ಮಾತಾಡುವ ವಸಿ, ಇಕ್ಕು, ಏಟು ಎಂಬ ಪದಗಳಿಗೆ ನಗರದವರು ಸ್ವಲ್ಪ, ಇಡು, ಎಷ್ಟು ಎಂದು ಬಳಸುತ್ತಾರೆ. ಇದನ್ನೇ ಗ್ರಾಮೀಣ ಜನರು ಅನುಕರಿಸಲು ಪ್ರಯತ್ನಿಸುತ್ತಾರೆ.

**ಅರ್ಥದಲ್ಲಾಗುವ ಬದಲಾವಣೆ** – ಒಂದು ಪದವನ್ನು ಒಂದು ಕಾಲಘಟ್ಟದ ಸನ್ನಿವೇಶದಲ್ಲಿ ಬಳಸುತ್ತಿದ್ದು ಕಾಲನಂತರದಲ್ಲಿ ಅದೇ ಪದವನ್ನು ಇನ್ನೊಂದು ಸನ್ನಿವೇಶದಲ್ಲಿ ಬಳಸಲಾರಂಭಿಸಿದಾಗ ಆ ಪದದ ಅರ್ಥದಲ್ಲಿ ವ್ಯತ್ಯಾಸ ಕಂಡುಬಂದರೆ, ಮೂಲಾರ್ಥವನ್ನು ಬಿಟ್ಟು ಬೇರೆ ಅರ್ಥ ಪಡೆದರೆ ಆ ಪದವು ಅರ್ಥ ವಿಸ್ತಾರ

ಪಡೆಯಿತು ಎಂದರ್ಥವಾಗುತ್ತದೆ. ಅರ್ಥ ವ್ಯತ್ಯಾಸದಲ್ಲಿ ಹಿಂದೆ ಇದ್ದಂತಹ ಪದಗಳು ಬೇರೊಂದು ಕಾಲಘಟ್ಟದಲ್ಲಿ ಉತ್ತಮಾರ್ಥ ಅಥವಾ ಹೀನಾರ್ಥವನ್ನು ಪಡೆದುಕೊಳ್ಳುವುದು.[೨]

ಮೆಟ್ಟು – ತುಳಿ ಎಂಬ ಅರ್ಥವಿದ್ದದು, ಈಗ ಪಾದರಕ್ಷೆ ಎಂಬ ಅರ್ಥವಿದೆ.

| | | |
|---|---|---|
| ಕನ್ನಡ | ಪೆದ್ದ (ಹೀನಾರ್ಥ) | ದಡ್ಡ, ಏನನ್ನು ಹರಿಯದವ, ಮಂದ ಬುದ್ಧಿ. |
| ತೆಲುಗು | ಪೆದ್ದ (ಉತ್ತಮಾರ್ಥ) | ದೊಡ್ಡದು, ಹಿರಿಯ. |

**ಭಾಷೆಯಲ್ಲಿ ಸರಿ ತಪ್ಪು–** ಭಾಷೆ ನಮ್ಮ ಸ್ವತ್ತು ಎಂದು ತಿಳಿದು ಎಲ್ಲರೂ ಭಾಷೆಯನ್ನು ವ್ಯಾಖ್ಯಾನಿಸುವ ನಿರ್ದಿಷ್ಟ ಅಭಿಪ್ರಾಯವನ್ನು ಹೊಂದುವ ಹಕ್ಕು ತಮಗಿದೆಯೆಂದು ತಿಳಿಯುತ್ತಾರೆ. ಶಿಕ್ಷಣ ಮಾಧ್ಯಮ ಯಾವುದಾಗಬೇಕು, ನಮ್ಮ ಶಾಲೆಗಳಲ್ಲಿ ಯಾವ ಭಾಷೆ ಕಲಿಸಬೇಕು. ವಾರ್ತಾ ಪ್ರಸಾರದಲ್ಲಿ ಹೇಗೆ ಭಾಷೆಯನ್ನು ಉಚ್ಚರಿಸಬೇಕು ಎಂಬ ಪ್ರಶ್ನೆಗಳನ್ನು ಚರ್ಚಿಸತೊಡಗಿದ ಕೂಡಲೇ ಪರ ವಿರೋಧ ಅಭಿಪ್ರಾಯ ನಮ್ಮೆಡೆಗೆ ಬರುತ್ತದೆ, ಕಲಿಸುವ ಭಾಷೆ ವಿಚಾರವಾಗಿ ವಾಗ್ವಾದ ಪ್ರಾರಂಭವಾಗುತ್ತದೆ. ವ್ಯಕ್ತಿಗಳಿಗೂ ಅವರು ಬಳಸುವ ಭಾಷೆಯ ಸ್ವರೂಪಕ್ಕೂ ಒಂದು ಬಗೆಯ ನಂಟಿದೆಯೆಂದು ನಾವು ತಿಳಿಯುವುದರಿಂದಾಗಿ ವ್ಯಕ್ತಿಗಳನ್ನು ಹೊಗಳಲು, ನೋಯಿಸಲು, ಉದ್ವಿಗ್ನಗೊಳಿಸಲು ಅವರ ಭಾಷಾ ಬಳಕೆಯ ವಿಶಿಷ್ಟಾಂಶಗಳನ್ನು ಬಳಸುತ್ತೇವೆ.

ಭಾಷೆಯನ್ನು ವ್ಯಾವಹಾರಿಕವಾಗಿ ದಿನನಿತ್ಯವೂ ಬಳಸುವುದು ಮೊದಲ ಹಂತ, ಭಾಷೆಯ ಸ್ವರೂಪವನ್ನು ಅರಿತವರಂತೆ ಕೆಲವು ನಿರ್ಣಯಗಳಿಗೆ ಕಟ್ಟು ಬೀಳುವುದು ಎರಡನೆಯ ಹಂತ. ಕನ್ನಡವನ್ನು ದಿನನಿತ್ಯವೂ ಬಳಸುತ್ತೇವೆ, ಕನ್ನಡದ ಮೂಲಕವೆ ಮಕ್ಕಳಿಗೆ ಶಿಕ್ಷಣ ನೀಡುವುದು ಸೂಕ್ತವಾದುದು. ಕನ್ನಡದ ಬದಲು ಬೇರೆ ಯಾವುದೇ ಭಾಷೆಯನ್ನು ಶಿಕ್ಷಣ ಮಾಧ್ಯಮ ಮಾಡಿದಾಗ ಅಥವಾ ಮಾತೃಭಾಷೆಯ ಮೂಲಕ ಕಲಿಯುತ್ತಾರೆ. ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಅಡ್ಡಿಯೆಂದು ಯಾರಾದರೂ ವಾದಿಸಿದಾಗ ವಾಗ್ವಾದಕ್ಕಿಳಿಯುವುದು, ತಪ್ಪುಗಳಿಗೆ ಪರ್ಯಾಯವಾಗಿ ಸರಿಯಾದ ಪ್ರಯೋಗಗಳನ್ನು ಸೂಚಿಸುತ್ತಾರೆ. ಹೀಗೆ ತಪ್ಪುಗಳನ್ನು ತಿದ್ದಿಕೊಂಡಾಗ ಭಾಷೆಯ ಬಳಕೆ ಶುದ್ಧವಾಗುತ್ತದೆ. ಒಂದು ಭಾಷೆಯಲ್ಲಿ ದಿನವಹಿ ನಡೆಯುತ್ತಿರುವ ತಿದ್ದುಪಾಡುಗಳಿಗಿಂತ ಹೆಚ್ಚಾಗಿ ದಿನದಿನವೂ ದೋಷಗಳು ಸಂಭವಿಸುತ್ತವೆ, ತಿದ್ದುವ ಹೊಣೆಯನ್ನು ಹೊತ್ತ ಶಿಕ್ಷಕರು ಸರಿಯಾದ ರೀತಿಯಲ್ಲಿ ತಿದ್ದುವ ಕಾರ್ಯವನ್ನು ನಿರ್ವಹಿಸುತ್ತಿಲ್ಲ. ಭಾಷೆ ಅಪರಿಪೂರ್ಣವಾಗಿದ್ದರೂ ಚಿಂತೆಯಿಲ್ಲ. ನಿರಂತರವಾಗಿ ಪರಿವರ್ತನೆಯಾಗುವುದನ್ನು ತಡೆಯಬೇಕು.

ಇಂದಿನ ತಲೆಮಾರಿನವರು ತಮಗಿಂತ ಕಿರಿಯರ ಭಾಷಾ ಬಳಕೆಯನ್ನು ಕೇಳಿ ಭಾಷೆಗೆ ಒದಗಿರುವ ದುಃಸ್ಥಿತಿಯನ್ನು ಹೇಳಿಕೊಂಡು ಮರುಗುತ್ತಾರೆ. ಶಾಲೆಗಳಲ್ಲಿ ಮಕ್ಕಳಿಗೆ ಉತ್ತಮ ಭಾಷಾ ಲಕ್ಷಣಗಳನ್ನು ಬೋಧಿಸುತ್ತಿಲ್ಲವೆಂದು ಹೇಳುತ್ತಾರೆ. ಜನ ಸಂಪರ್ಕ ಮಾಧ್ಯಮಗಳ ಭಾಷಾಬಳಕೆಯಲ್ಲಿ ಭಾಷಾಮಟ್ಟ ಕೆಳಗಿಳಿದಿದೆ ಎಂದು ವಾದಿಸುತ್ತಾರೆ. ಜನ ಭಾಷೆಯಲ್ಲಾಗುವ ಪರಿವರ್ತನೆಗಳನ್ನು ಎಷ್ಟೇ ವಿರೋಧಿಸಿದರೂ ಅವು ಸಂಭವಿಸುತ್ತಲೇ ಇರುತ್ತವೆ. ಇಂಥ ಪರಿವರ್ತನೆಗಳನ್ನು ಅಸಹನೆಯಿಂದ ನೋಡಿ ತಿರಸ್ಕರಿಸಲು ದೂರವಿಡಲು ಯತ್ನಿಸಿದರೂ ಭಾಷೆ ನಿರಂತರವಾಗಿ ಬದಲಾಗುವುದನ್ನು ತಡೆಯುವುದು ಕಷ್ಟವಾದುದಾಗಿದೆ.

ಎಲ್ಲಾ ಕಾಲದಲ್ಲೂ ಭಾಷೆಯ ಪರಿವರ್ತನೆಗಳನ್ನು ವಿರೋಧಿಸುವ ಯತ್ನಗಳು ನಡೆದಿವೆ. ಪ್ರಮಾಣ ಹಾಗೂ ಸ್ವರೂಪಗಳು ಭಿನ್ನವಾಗಿರಬಹುದು. ಬದಲಾವಣೆಗಳು ಹೀಗೆ ನಡೆಯುತ್ತಾ ಹೋದರೆ ಮುಂದೊಂದು ದಿನ ಭಾಷೆ ನಶಿಸಿ ಹೋಗುವುದೆಂದು ಕೆಲವರ ವಾದವಾಗಿದೆ. ಬದಲಾವಣೆ ಹೊಂದುವುದರಿಂದಲೇ ಭಾಷೆ ನಾಶವಾಗುವುದೆಂಬ ನಂಬಿಕೆಗೆ ಯಾವುದೇ ಆಧಾರಗಳಿಲ್ಲ. ಬದಲಾಗುವುದು ಭಾಷೆಯ ಮುಖ್ಯ ಲಕ್ಷಣ. ಭಾಷೆಯಲ್ಲಿ ನಡೆಯುತ್ತಿರುವ ಬದಲಾವಣೆಗಳು ಧ್ವನಿ ಉಚ್ಚಾರಣೆ, ಪದಕೋಶ, ವ್ಯಾಕರಣ ಹೀಗೆ ಯಾವುದೇ ಹಂತದಲ್ಲಿಯಾದರೂ ಸಂಭವಿಸಲಿ ಅವುಗಳನ್ನು ಒಪ್ಪಿ ಅಳವಡಿಸಿ ಕೊಳ್ಳುವ ಮನೋಭಾವವನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಭಾಷೆಯನ್ನು ಜೀವಂತ ವ್ಯವಸ್ಥೆಯೆಂದು ಪರಿಗಣಿಸುವ ಕೆಲವರು ಜೀವಂತ ವ್ಯವಸ್ಥೆಯ ಹುಟ್ಟು, ಬೆಳವಣಿಗೆ, ಸಾವು ಸರಣಿಯನ್ನು ಭಾಷೆಗೂ ಅನ್ವಯಿಸುತ್ತಾರೆ.

ಪ್ರಪಂಚದ ಎಲ್ಲಾ ಭಾಷೆಗಳಲ್ಲೂ ಭಾಷಿಕ ಬದಲಾವಣೆ ಸಹಜವಾದುದು. ಈ ಪ್ರಾದೇಶಿಕ ರೂಪದ ಹಲವಾರು ಧ್ವನಿಗಳಲ್ಲಿ ವ್ಯತ್ಯಾಸವುಂಟಾಗಿರುವುದನ್ನು ಗಮನಿಸಬಹುದು, ಕೆಲವು ಸಾರಿ ಒಂದೇ ಪದದಲ್ಲಿ ಅನೇಕ ಧ್ವನಿ ಬದಲಾವಣೆಗಳಾಗಿರುವುದನ್ನು ಕಾಣಬಹುದು. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಒಂದೇ ಭಾಷೆಯ ಪದಗಳು ವಿಶಿಷ್ಟವಾಗಿರುವುದನ್ನು ಕಾಣುತ್ತೇವೆ.

**ಅಡಿಟಿಪ್ಪಣಿಗಳು**

೧. ರಾಮಕೃಷ್ಣ ಆರ್., ಭಾಷಾಸಂಪದ. ಪುಟ – ೧೩೧.

೨. ಸೆಲ್ವಕುಮಾರಿ, ಭಾಷೆಯಲ್ಲಿ ಬದಲಾವಣೆ, ಭಾಷೆ, ಕ.ವಿ.ವಿ., ವಿಶ್ವಕೋಶ–೧೧, ಪುಟ. ೨೯೫–೩೦೧.

□□□

# ೪. ಯಳಂದೂರು ತಾಲೂಕು ಪರಿಸರದ ಶಾಸನ ಲಿಪಿಕಾರರು

– ಮಂಜುನಾಥ ಎಂ

ಕ್ರಿಪೂ. ೩ನೆಯ ಶತಮಾನದಲ್ಲಿ ಅಶೋಕ ಚಕ್ರವರ್ತಿಯು ಗಾಂಧಾರ ಪ್ರದೇಶದ ಚಪಡನೆಂಬ ಲಿಪಿಕಾರನನ್ನು ರಾಜ್ಯದ ದಕ್ಷಿಣದ ಗಡಿಗೆ ಕಳುಹಿಸಿ ತನ್ನ ಸಾಮಾಜಿಕ ಸಂದೇಶವನ್ನು ಬ್ರಾಹ್ಮಿಲಿಪಿ, ಪ್ರಾಕೃತ ಭಾಷೆಯಲ್ಲಿ ಬಂಡೆಗಲ್ಲುಗಳ ಮೇಲೆ ಕೊರೆಯಿಸಿದನು. ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ದಾಪುರ, ಜಟಿಂಗ ರಾಮೇಶ್ವರದಲ್ಲಿ ಅಶೋಕನ ಕಿರು ಸಂದೇಶವನ್ನು ಕಂಡರಿಸಿ ಕೊನೆಯಲ್ಲಿ ಲಿಪಿಕರೇಣ ಎಂದು ಖರೋಷ್ಠಿ ಲಿಪಿಯಲ್ಲಿ ಬರೆದನು. ಈ ಕಾಲದಲ್ಲಿ ಶಾಸನಗಳನ್ನು ಬರೆಯುವರನ್ನು 'ಲಿಪಿಕಾರ'ನೆಂದು, ಲಿಪಿಸುವ ಕ್ರಿಯೆಯನ್ನು 'ಲಿಪಿಕರೇಣ' ಎಂದು ಕರೆಯಲಾಗುತ್ತಿತ್ತು. ಕವಿಗಳು ಶಾಸನದ ನಕಲು ಪ್ರತಿಗಳನ್ನು ತಯಾರಿಸಿಕೊಟ್ಟರೆ ಲಿಪಿಕಾರ ಲೋಹ, ಶಿಲೆಗಳ ಮೇಲೆ ಕೊರೆದು ಅವುಗಳಿಗೆ ಶಾಶ್ವತತೆಯನ್ನು ದೊರಕಿಸಿಕೊಟ್ಟಿದ್ದಾರೆ. ಶಾಸನಗಳನ್ನು ಕೊರೆಯಿಸುವ ಲಿಪಿಕಾರರ ಇತಿಹಾಸವು ಚಪಡನಿಂದ ಆರಂಭವಾಗಿ ಮುಂದೆ ಶಾತವಾಹನರು, ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟರ ಕಾಲದಲ್ಲಿ ಹಲವಾರು ಶಾಸನ ಶಿಲ್ಪಿಗಳು, ಲಿಪಿಕಾರರು ತಮ್ಮ ಹೆಸರನ್ನು ಬಿಟ್ಟು ಹೋಗಿದ್ದಾರೆ.

ಶಾಸನ ಶಿಲ್ಪಿಗಳನ್ನು ಶಾಸನದ ಪರಿಭಾಷೆಯಲ್ಲಿ ಶಿಲ್ಪಿ, ಸೂತ್ರಧಾರ, ರೂವಾರಿ, ವಿಶ್ವಕರ್ಮ, ಅಕ್ಕಸಾಲಿ, ಸರಸ್ವತಿ ಗಣಪುತ್ರ, ಸರಸ್ವತಿ ಗಣದಾಸರೆಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು. ಲಿಪಿಕಾರರು ತಮ್ಮದೇಯಾದ ಲೇಖನ ವಿಧಾನಗಳನ್ನು, ವಿನ್ಯಾಸಗಳನ್ನು ರೂಪಿಸಿಕೊಂಡು ಅವುಗಳನ್ನು ಶಿಲೆ, ಲೋಹಗಳ ಮೇಲೆ ಕೆತ್ತುತ್ತಿದ್ದರು. ಗಂಗ, ಚೋಳ, ಹೊಯ್ಸಳ, ವಿಜಯನಗರ, ಮೈಸೂರು ಒಡೆಯರ ಆಳ್ವಿಕೆಯ ಕಾಲದಲ್ಲಿ ಶಾಸನಗಳಲ್ಲಿ ಅಕ್ಷರಗಳನ್ನು ಸುಂದರವಾಗಿ, ಅಲಂಕಾರಯುತವಾಗಿ ಬರೆದಿರುವುದನ್ನು, ಲಿಪಿಕಾರರನ್ನು ಯಳಂದೂರು ತಾಲೂಕು ಪರಿಸರದಲ್ಲಿ ಗುರುತಿಸಬಹುದಾಗಿದೆ.

ತ್ವಷ್ಟರು ಮರಗೆಲಸ, ಕಂಚುಗಾರಿಕೆಯನ್ನು ವೃತ್ತಿಯನ್ನಾಗಿಸಿಕೊಂಡು ಹಲವು ಶಾಸನಗಳನ್ನು ಬರೆದು ತಮ್ಮ ಹೆಸರನ್ನು ನಮೂದಿಸಿದ್ದಾರೆ. ಸಂಸ್ಕೃತ, ಕನ್ನಡ, ತಮಿಳು ಭಾಷೆಯನ್ನು ರೂಢಿಸಿಕೊಂಡಿದ್ದು, ಕನ್ನಡ, ತಮಿಳು ಲಿಪಿಯಲ್ಲಿ ಪ್ರೌಢಿಮೆ ಸಾಧಿಸಿ ಹಲವು ತಾಮ್ರಪಟಗಳು, ಶಿಲೆಗಳ ಮೇಲೆ ತಮ್ಮ ಅಕ್ಷರವನ್ನು ಮೂಡಿಸಿ ತಟ್ಟಾಕರೇಣ, ತ್ವಷ್ಟಕರೇಣ ಎಂಬ ಪದಗಳಿಂದ ಗುರುತಿಸಿಕೊಂಡಿದ್ದಾರೆ. ಗುಂಡ್ಲುಪೇಟೆ ತಾಲೂಕಿನ ಕೆಲಸೂರಿನ ಜೈನ ಬಸದಿಯಲ್ಲಿರುವ ೧೦ ಸಾಲುಗಳ ಶಿಲಾಶಾಸನವನ್ನು ತಟ್ಟಾನ್ ರಾಜಾಚಾರಿಯ ಮಗ ಮಾಣಕ್ಯಾಚಾರಿಯು ಬರೆದಿದ್ದಾನೆ.[೧] ಈ ಶಾಸನ ತಮಿಳು ಭಾಷೆ, ಲಿಪಿಯಲ್ಲಿದ್ದು ೧೨ನೇ ಶತಮಾನಕ್ಕೆ ಸೇರಿದೆ. ಮಾಣಿಕ್ಯಚಾರಿಯು ತಮಿಳು ಭಾಷೆ, ಲಿಪಿಯ ಮೇಲೆ ಪ್ರಭುತ್ವವನ್ನು ಹೊಂದಿರುವ ಸ್ಥಳೀಯ ಲಿಪಿಕಾರನಿರಬಹುದು. ತ್ರಿಯಂಬಕಪುರದ ತ್ರಿಯಂಬಕೇಶ್ವರ ದೇವಾಲಯದಲ್ಲಿ ೧೬ನೇ ಶತಮಾನದ ತಾಮ್ರ ಶಾಸನವನ್ನು ತ್ವಷ್ಟಾ ಶ್ರೀ ವೀರಣಾಚಾರ್ಯರು ವ್ಯಲಿಖಿಸಿದ್ದಾನೆ.[೨] ಮೂರು ತಾಮ್ರದ ಹಲಗೆಗಳು, ೧೧೪ ಸಾಲುಗಳನ್ನು ಹೊಂದಿರುವ ಈ ಶಾಸನ ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿದೆ. ತನ್ನನ್ನು ಮಲ್ಲಣಾತ್ಮಜನೆಂದು ಹೇಳಿಕೊಂಡಿದ್ದಾನೆ. ಶ್ರೀಕೃಷ್ಣದೇವರಾಯನ ಸಭಾಪತಿ ಶಾಸನದ ಸ್ವರೂಪವನ್ನು ರಚಿಸಿದ್ದಾನೆ. ಆದರೆ ಸಭಾಪತಿಯ ಹೆಸರಿನ ಉಲ್ಲೇಖವಿಲ್ಲ. ಇದೇ ಹೆಸರಿನ ಲಿಪಿಕಾರ ತಿರುಮಲಾರ್ಯನ ಸಭಾಪತಿಯಾಗಿದ್ದು ನಂಜನಗೂಡಿನ ರಾಘವೇಂದ್ರ ಮಠದಲ್ಲಿರುವ ೯೫ ಸಾಲುಗಳ ತಾಮ್ರ ಶಾಸನವನ್ನು ಕಂಡರಿಸಿದ್ದಾನೆ. ವೀರಣ್ಣನೆಂಬುವವನು ಈತನ ತಂದೆಯಾಗಿದ್ದನು.

ತ್ವಷ್ಟರಂತೆ ಶಾಸನವನ್ನು ಬರೆದವರಲ್ಲಿ ವಿಶ್ವಕರ್ಮರ ಹೆಸರುಗಳು ನಮ್ಮ ತಾಲೂಕು ಪರಿಸರದಲ್ಲಿ ಕಾಣಸಿಗುತ್ತದೆ. ತೆಳ್ಳನೂರಿನ ೧೮ ಸಾಲುಗಳ ಶಿಲಾಶಾಸನವನ್ನು ವಿಶ್ವಕರ್ಮ ಕೊಂಗುಣಿಯರ ಮಾಯಣಚಾರಿಯ ಮಗ ಕೇತಚಾರಿಯು ಕಂಡರಿಸಿದ್ದಾನೆ.[೩] ಕ್ರಿ.ಶ. ೧೧೬೯ ಕ್ಕೆ ಸೇರಿದ ಈ ಶಾಸನ ಹೊಯ್ಸಳ ದೊರೆ ೧ನೇ ನರಸಿಂಹನ ಕಾಲದ್ದು. ಕೇತಚಾರಿಯ ತಂದೆ ಗಂಗ ಸಾಮ್ರಾಟ ಸ್ಥಾಪಕನ ಹೆಸರನ್ನು ತನ್ನ ಹೆಸರಿನೊಂದಿಗೆ ಸೇರಿಸಿಕೊಂಡು ಕೊಂಗುಣಿಯರ ಮಾಯಣಾಚಾರಿಯೆಂದು ಕರೆದುಕೊಂಡಿದ್ದಾನೆ. ಈ ಮನೆತನದವರು ಗಂಗರಾಜರ ಆಳ್ವಿಕೆಯ ಕಾಲದಿಂದಲೂ ಶಾಸನವನ್ನು ಕಂಡರಿಸುವ ಕೆಲಸವನ್ನು ನಿರ್ವಹಿಸುತ್ತಾ ಬಂದಿರುವುದು ಕೊಂಗುಣಿ ಹೆಸರಿನಿಂದ ಗುರುತಿಸಬಹುದು. ಆದರೆ ಈತನು ತನ್ನ ಈ ಕಾರ್ಯಕ್ಕೆ ಪಡೆದುಕೊಂಡಿರುವ ದತ್ತಿಯ ವಿವರಗಳು ಶಾಸನದಲ್ಲಿ ಇಲ್ಲ. ಎಲಕ್ಕೂರಿನ ೧೬ ಸಾಲುಗಳ ಶಿಲಾಶಾಸನವನ್ನು ಶ್ರೀಮತ್ ಇಮ್ಮಡಿ ಪೆರ್ಮಾಡಿಚಾರ್ಯರ ಮಗ ಬರ್ದ್ದೆಮಯ್ಯನು ಬರೆದಿದ್ದಾನೆ.[೪] ಪೆರ್ಮಾಡಿ ಗಂಗ

ದೊರೆಗಳು ಪಾಂಡ್ಯರನ್ನು ಸೋಲಿಸಿದ ಜ್ಞಾಪಕಾರ್ಥ ಹೊಂದಿದ್ದ ಬಿರುದ್ದಾಗಿತ್ತು. ಈ ಶಾಸನ ಕಿ.ಶ. ೯೭೧ – ೭೨ರ ಕಾಲಕ್ಕೆ ಸೇರಿದೆ. ಗಂಗ ದೊರೆ ಎರೆಯಂಗನ ಕಾಲದಲ್ಲಿ ವಿಶ್ವಕರ್ಮ ಹೆಸರಿನ ಲಿಪಿಕಾರನು ಕೆರೆಹಳ್ಳಿಯ ೯೪ ಸಾಲುಗಳ ತಾಮ್ರ ಶಾಸನವನ್ನು ಕಂಡರಿಸಿದ್ದಾನೆ.[೫] ಶಾಸನದ ಕೊನೆಯಲ್ಲಿ "ಚಿತ್ರ ವಿನ್ಯಾಸ ವಿಶ್ವಕರ್ಮ ಶಾಸನಂ ಲಿಖಿತಂ" ತನ್ನ ಹೆಸರನ್ನು ನಮೂದಿಸಿದ್ದಾನೆ. ಈ ಶಾಸನ ಸ್ರಗ್ಧರೆ, ಶಾರ್ದೂಲ, ವಿಕ್ರೀಡಿತ, ಉತ್ಪಲಮಾಲ, ವಸಂತ ತಿಲಕ ಛಂದಸ್ಸಿನಲ್ಲಿದೆ. ಕ್ರಿ.ಶ. ೧೧ನೇ ಶತಮಾನದ ಕುಲೊತ್ತುಂಗನ ಪ್ರಶಸ್ತಿ ಶಾಸನ ಅದರ ಗ್ರಾಮದಲ್ಲಿದ್ದು ೯ ಸಾಲುಗಳನ್ನು ಹೊಂದಿದೆ. ಈ ಶಾಸನವನ್ನು ತಟ್ಟಾನ್ ಸಿಜ್ಜಲಾನ್ತಕ ಎಂಬುವವನು ಬರೆದಿದ್ದಾನೆ.[೬]

ಶಾಸನವನ್ನು ಬರೆಯುತ್ತಿದ್ದ ಕೆಲವು ಲಿಪಿಕಾರರು ತಮ್ಮನ್ನು ಆಚಾರ್ಯರೆಂದು ಗುರುತಿಸಿಕೊಂಡಿದ್ದಾರೆ. ಆಚಾರ್ಯ ಎಂದರೆ ಗುರು, ಶ್ರೇಷ್ಠ, ಜ್ಞಾನಿ ಎಂಬ ಅರ್ಥಗಳಿವೆ. ತಾವು ಕುಸುರಿಕೆಲಸದವರು ಮಾತ್ರವಲ್ಲ ಅಕ್ಷರಸ್ತರು ಕೂಡ ಎಂಬುದನ್ನು ತೋರಿಸಿಕೊಂಡು ಸಾಮಾಜಿಕ ಸ್ಥಾನಮಾನವನ್ನು ಕಾಪಾಡಿಕೊಳ್ಳುವುದು ಅವರ ಉದ್ದೇಶವಾಗಿತ್ತೆಂದು ಎಸ್.ಶೆಟ್ಟರ್ ಅಭಿಪ್ರಾಯಪಡುತ್ತಾರೆ.[೭] ಶಾನಸ ಬರೆಯುವ ಕಾರ್ಯವನ್ನು ವಿಶ್ವಕರ್ಮದಂತೆ ಬೇರೆ ವರ್ಗದವರು ನಿರ್ವಹಿಸುತ್ತಿದ್ದರು. ಆದರೆ ವಿಶ್ವಕರ್ಮಿಯರು ಇವರೆಲ್ಲರಿಗಿಂತಲೂ ತಾವು ಶ್ರೇಷ್ಠರು ಎಂಬುವುದನ್ನು ತೋರಿಸಿಕೊಳ್ಳಲು ತಮ್ಮ ಹೆಸರಿನ ಜೊತೆ ಆಚಾರ್ಯರೆಂಬ ವಿಶೇಷಣವನ್ನು ಸೇರಿಸಿಕೊಳ್ಳುತ್ತಿದ್ದ ಸಾಧ್ಯತೆಯು ಇದೆ. ಗಂಗರಿಂದ ಮೈಸೂರಿನ ಒಡೆಯರವರೆಗೆ ಒಂದು ಸಹಸ್ರಮಾನಕಾಲ ಶಾಸನವನ್ನು ಕಂಡರಿಸುವ ಕೆಲಸವನ್ನು ವಿಶ್ವಕರ್ಮ ಆಚಾರಿಗಳು ನಿರ್ವಹಿಸುತ್ತಾ ಬಂದಿದ್ದಾರೆ. ಇದಕ್ಕೆ ಪ್ರತಿಫಲವಾಗಿ ಅರಸರಿಂದ ಭೂಮಿ, ಇತರ ಕಾಣಿಕೆಗಳನ್ನು ಪಡೆದುಕೊಂಡಿದ್ದಾರೆ. ಬಾಗುಳಿಯ ೨೪ ಸಾಲುಗಳ ಶಿಲಾಶಾಸನವನ್ನು ನಿರ್ಗುಂದ ನಾಡಿನ ಶಿಲ್ಪಿ ವಟ್ಟಚಾರಿ ಕಂಡರಿಸಿದ್ದಾನೆ.[೮] ೩ನೆಯ ವೀರಬಲ್ಲಾಳನ ಕಾಲದಲ್ಲಿ ಹಳೇಆಲೂರಿನಲ್ಲಿ ೧೯ ಸಾಲುಗಳ ಶಿಲಾಶಾಸನವನ್ನು ದೇಶಿಯಾಚಾರಿಯ ಮಗ ನಾರಾಯಣಚಾರಿ ಬರೆದಿದ್ದಾನೆ.[೯] ಈ ಆಚಾರಿಗಳು ಶಾಸನವನ್ನು ಬರೆಯುವುದರ ಜೊತೆಗೆ ಶಿಲ್ಪಗಳನ್ನು ರೂಪಿಸುವ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಗುಂಬಳ್ಳಿಯಲ್ಲಿ ನಾಗತಿಮ್ಮಯ್ಯನ ಮಗ ಮಲ್ಲಯ್ಯನು ಕಲ್ಲಾಚಾರಿ ಎಂಬ ರೂವಾರಿಯಿಂದ ವಾಲಬ್ಬೆಯನ್ನು ನಿರ್ಮಿಸಿದ್ದಾನೆ.[೧೦] ಹೆಸರೇ ಸೂಚಿಸುವಂತೆ ಕಲ್ಲಾಚಾರಿ ಕಲ್ಲುಟಿಗೆ ಕೆಲಸವನ್ನು ನಿರ್ವಹಿಸುತ್ತಿದ್ದನೆಂದು ಊಹಿಸಬಹುದು. ೧೯ನೇ ಶತಮಾನದಲ್ಲಿ ಬಿಳಿಗಿರಿರಂಗನಬೆಟ್ಟದ ಗರುಡವಾಹನವನ್ನು ವೀರಾಚಾರಿಯ ಮಗ ನಂಜುಡಚಾರಿಯು ರೂಪಿಸಿದ್ದಾನೆ.[೧೧]

ವಿಶ್ವಕರ್ಮ ಜನಾಂಗದವರಂತೆ ಶಾಸನ ಕೊರೆಯುವ ಕೆಲಸವನ್ನು ಅಧಿಕೃತವಾಗಿ ನಿರ್ವಹಿಸಬೇಕಾಗಿದ್ದವರು ಆ ಪ್ರದೇಶದ ಸೇನುಭೋವರು, ಗ್ರಾಮ ಲೆಕ್ಕಾಧಿಕಾರಿಗಳಾದ ಇವರು ಅರಸನ ಆಜ್ಞೆ, ದಾನ, ದತ್ತಿಗಳನ್ನು ಶಾಸನದಲ್ಲಿ ಬರೆದು ಅಥವಾ ಬರೆಯಿಸಿ ಪ್ರಜೆಗಳಿಗೆ ತಿಳಿಯುವಂತೆ, ಬಹುಕಾಲ ಉಳಿಯುವಂತೆ ನೋಡಿಕೊಳ್ಳಬೇಕಾಗಿತ್ತು. ಕ್ರಿ.ಶ. ೧೪೧೩ರಲ್ಲಿ ಮೂಡಲ ಅಗ್ರಹಾರದ ೭೮ ಸಾಲುಗಳ ಶಿಲಾಶಾಸನವನ್ನು ಸೇನಭೋವ ಸಂಕಣ್ಣ, ಸಿದ್ದಣ್ಣರು ಬರೆದಿದ್ದಾರೆ.[೧೨] ೧ನೇ ದೇವರಾಯನ ಕಾಲದಲ್ಲಿ ಸಿಂಗನಲ್ಲೂರಿನಲ್ಲಿ ಸೇನುಭೋವನಾಗಿದ್ದ ರಾಯಪ್ಪ, ವೀರಣ್ಣ ೮೫ ಸಾಲುಗಳ ಶಿಲಾ ಶಾಸನಗಳನ್ನು ಕಂಡರಿಸಿ ಈ ಕಾರ್ಯಕ್ಕಾಗಿ ಹಳಿಹಿರಿಂಯೂರಿನಲ್ಲಿ ಗದ್ದೆ, ಬೆದ್ದಲು ತೋಟವನ್ನು ಪಡೆದುಕೊಂಡಿದ್ದಾರೆ.[೧೩] ಬರಹಗಾರ ರಾಯಪ್ಪನಿಗೆ ನಾಡ ಸೇನುಭೋವಿಗೆಯನ್ನು ಅಚಂದ್ರಾರ್ಕವಾಗಿ ನಡೆಸಿಕೊಂಡು ಹೋಗುವಂತೆ ಶಾಸನದಲ್ಲಿ ನಮೂದಿಸಿದೆ.

ರೂವಾರಿಗಳಲ್ಲಿ ಹನ್ನಿಬೋಜನ ಹೆಸರು ಕೆಂಪನಪುರ ಶಾಸನದಲ್ಲಿದೆ.[೧೪] ೨೦ ಸಾಲುಗಳ ಈ ಶಿಲಾಶಾಸನ ಹೊಯ್ಸಳ ದೊರೆ ೧ನೇ ನರಸಿಂಹನ ಕಾಲದ್ದು. ಕನ್ನಡ ಭಾಷೆ, ಲಿಪಿಯಲ್ಲಿದ್ದು, ಕಲ್ಲೂರು ವಾದ್ದಲಗೋತ್ರದ ನಾರಣದೇವನ ಮಗ ಚಂದ್ರಶೇಖರ ವಾರಾಯ ಭೂಮಿಯನ್ನು ಖರೀದಿಸಿದ ಕ್ರಯಪತ್ರದ ವಿವರವನ್ನೊಂದಿದೆ. ಚೋಳರ ಆಗಮನದೊಂದಿಗೆ ಈ ಪ್ರದೇಶ ತಮಿಳು ಭಾಷೆಯ ಪ್ರಭಾವಕ್ಕೊಳ್ಳಪಟ್ಟಿದ್ದು ಹೊಯ್ಸಳ ಕಾಲದಲ್ಲಿಯೂ ತಮಿಳು ಆಡಳಿತ ಭಾಷೆಯಾಗಿ ಮುಂದುವರೆದಿದೆ. ಈ ಕಾಲದಲ್ಲಿ ಬರೆಯಿಸಲ್ಪಟ್ಟ ಹೆಚ್ಚಿನ ಶಾಸನಗಳು ತಮಿಳು ಭಾಷೆ, ಲಿಪಿಯಲ್ಲಿಯೇ ಇವೆ. ಆದರೆ ಹನ್ನಿಬೋಜನ ಈ ಶಾಸನ ಕನ್ನಡ ಭಾಷೆ, ಲಿಪಿಯಲ್ಲಿದ್ದು ಆಡುಭಾಷೆಯಂತಿರದೆ ಕೆಲವು ಕಡೆ ಸಾಹಿತ್ಯದ ಸೊಗಡನ್ನು ಹೊಂದಿದೆ. ೧೧ನೇ ಶತಮಾನದಲ್ಲಿ ಎಡೂರಿನ ೨೪ ಸಾಲುಗಳ ಶಿಲಾಶಾಸನವನ್ನು ಮಲ್ಲೋಜನ ಮಗ ದೊಡ್ಡೋಜನು ಬರೆದಿದ್ದಾನೆ.[೧೫] ದೇವಲಿಂಗದೇವನು ಇಲ್ಲಿ ಕೆರೆಯ ನಿರ್ಮಾಣದ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿದ್ದರಿಂದ ಕೆರೆಯ ಕೆಳಗಿನ ೨೦೦ ಮಣ್ಣು ಭೂಮಿಯನ್ನು ಪಡೆದುಕೊಂಡ ವಿವರ ಶಾಸನದಲ್ಲಿದೆ.

ಕ್ರಿ.ಶ. ೧೩೮೦ ಬುಕ್ಕರಾಯನ ಉಲ್ಲೇಖವಿರುವ ಹೊಮ್ಮದ ೨೭ ಸಾಲುಗಳ ಶಿಲಾಶಾಸನವನ್ನು ಗೋಪಣ್ಣನು ಕಂಡರಿಸಿದ್ದಾನೆ.[೧೬] ಶಾಸನದ ಕೊನೆಯಲ್ಲಿ ತನ್ನನ್ನು ಅಕ್ಷರದ ಗೋಪಣ್ಣನೆಂದು ಕರೆದುಕೊಂಡಿದ್ದಾನೆ. ಇದರಿಂದ ಗೋಪಣ್ಣನು ಶಾಸನವನ್ನು ಬರೆದವನು ಮಾತ್ರವೇ ಆಗಿದ್ದು, ಶಾಸನದ ಮೂಲ ಪಾಠವನ್ನು ಸಿದ್ಧಪಡಿಸಿದವರು ಬಹುಶಃ ಬೇರೆಯವರೇ ಆಗಿರಬಹುದು. ಶಾಸನದಲ್ಲಿ ಪುಲ್ಲೂರ

ಅಲಘಪೆರುಮಾಳರ ಉಲ್ಲೇಖವಿದೆ. ಇವರು ಚತುರ್ವೇದ ಪಂಡಿತರಾಗಿದ್ದು, ವ್ಯಾಕರಣ, ಛಂದಸ್ಸು ನಾನಾ ವಿಷಯಗಳಲ್ಲಿ ಪ್ರವೀಣರೆಂದು ಹೇಳಿದೆ. ಶಾಸನವು ಸ್ರಗ್ಧರೆ, ಮತ್ತೇಭ ವಿಕ್ರೀಡಿತ, ಮಹಾಸ್ರಗ್ಧರೆ, ಕಂದ, ಚಂಪಕಮಾಲಾ, ಉತ್ಪಲಮಾಲಾ ಛಂದಸ್ಸಿನಲ್ಲಿರುವುದರಿಂದ ಅಳಘಪೆರುಮಾಳರೆ ಶಾಸನದ ಮೂಲಪಾಠವನ್ನು ಸಿದ್ಧಪಡಿಸಿರಬಹುದು. ೧೦೮ ವೃತ್ತಿಯ ಮಹಾಜನರು ಹೊಮ್ಮದ ಮೂಲಸ್ಥಾನೇಶ್ವರ ದೇವರ ಅಮೃತಪಡಿ ಪೂಜೆಗೆ ಭೂಮಿಯನ್ನು ದತ್ತಿ ನೀಡಿದ ಉಲ್ಲೇಖ ಶಾಸನದಲ್ಲಿದೆ.

ಹರದನಹಳ್ಳಿಯ ತಾಮ್ರ ಶಾಸನವು ೯೧ ಸಾಲುಗಳನ್ನು ಹೊಂದಿದ್ದು, ಕೃಷ್ಣದೀಕ್ಷಿತರು ಶಾಸನದ ಪಾಠವನ್ನು ರಚಿಸಿದ್ದಾರೆ.[೧೭] ತಮ್ಮನ್ನು ಕಾಶ್ಯಪಗೋತ್ರಕ್ಕೆ ಸೇರಿದವರೆಂದು ಹೇಳಿಕೊಂಡಿದ್ದಾರೆ. ಅರಕಲವಾಡಿಯ ೯೫ ಸಾಲುಗಳ ಶಿಲಾಶಾಸನವನ್ನು ರಂಗರಾಜಯ್ಯನೆಂಬ ರೂವಾರಿಯು ಕಂಡರಿಸಿದ್ದಾನೆ.[೧೮] ಯಳಂದೂರಿನ ಗೌರೀಶ್ವರ ದೇವಾಲಯದಲ್ಲಿರುವ ೯೫ ಸಾಲುಗಳ ಶಿಲಾಶಾಸನವನ್ನು ಬರೆದವನು ಬೊಮ್ಮಣ್ಣ ಪಂಡಿತ. ತನ್ನನ್ನು ವರತನಯಂ ರಸಿಕ ಪಂಡಿತನೆಂದು ಹೇಳಿಕೊಂಡಿದ್ದು ಸರಸಕವಿಯೆಂದು ಪ್ರಸಿದ್ಧನಾಗಿದ್ದ ಸಾಸಲಯ್ಯನು ಶಾಸನದ ಪಾಠವನ್ನು ಸಿದ್ಧಪಡಿಸಿದ್ದಾನೆ.[೧೯] ಈ ಶಾಸನವು ಕನ್ನಡ ಭಾಷೆ ಮತ್ತು ಲಿಪಿಯಲ್ಲಿದೆ.

**ಅಡಿ ಟಿಪ್ಪಣಿಗಳು**

೧. ಎಪಿಗ್ರಾಫಿಯ ಕರ್ನಾಟಿಕ ಸಂ. ೩, ಗುಂಡ್ಲುಪೇಟೆ, ಶಾಸನ ಸಂಖ್ಯೆ ೧೦೨, ಕೆಲಸೂರು ಕ್ರಿ.ಶ. ೧೨ನೇ ಶತಮಾನ, ಪುಟ ೭೭.

೨. ಅದೇ, ಶಾಸನಸಂಖ್ಯೆ ೧೪೭, ತ್ರಿಯಂಬಕಪುರ, ಕ್ರಿ.ಶ. ೧೪೪೩, ಪುಟ ೧೦೪.

೩. ಎ.ಕ.ಸಂ.೪, ಚಾಮರಾಜನಗರ, ಶಾ.ಸಂ. ೧೨೨, ತೆಳನೂರು, ಕ್ರಿ.ಶ. ೧೧೬೯, ಪುಟ ೭೦.

೪. ಅದೇ, ಶಾ.ಸಂ. ೭೯, ಎಲ್ಲೂರು, ಕ್ರಿ.ಶ. ೯೭೧, ಪುಟ ೪೭.

೫. ಅದೇ, ಶಾ.ಸಂ. ೩೫೪, ಕೆರೆಹಳ್ಳಿ, ಕ್ರಿ.ಶ. ೯೦೪, ಪುಟ ೨೨೭.

೬ ಅದೇ, ಯಳಂದೂರು, ಶಾ.ಸಂ. ೯೭, ಅಗರ, ಕ್ರಿ.ಶ. ೧೧ನೇ ಶತಮಾನ, ಪುಟ ೩೨೪.

೭. ಹಳೆಗನ್ನಡ, ೨೦೧೩, ಎಸ್. ಶೆಟ್ಟರ್, ಅಭಿನವ ಪ್ರಕಾಶನ, ಬೆಂಗಳೂರು, ಪುಟ ೪೭.

೮. ಎ.ಕ.ಸಂ.೪, ಚಾಮರಾಜನಗರ, ಶಾ.ಸಂ. ೧೧೫, ಬಾಗಳಿ, ಕ್ರಿ.ಶ. ೧೦ನೇ ಶತಮಾನ ಪುಟ ೬೬.

೯. ಅದೇ, ಶಾ.ಸಂ. ೧೮೭, ಹಳೇಆಲೂರು, ಕ್ರಿ.ಶ. ೧೨೦೭, ಪುಟ ೧೧೫.

೧೦. ಅದೇ, ಯಳಂದೂರು, ಶಾ.ನಂ.೧೮೬, ಗುಂಬಳ್ಳಿ, ಕ್ರಿ.ಶ.೧೦ನೆಯ ಶತಮಾನ, ಪುಟ ೩೮೨.

೧೧. ಅದೇ, ಶಾ.ಸಂ. ೧೯೭, ಬಿಳಿಗಿರಿರಂಗನಬೆಟ್ಟ, ಕ್ರಿ.ಶ. ೧೯ನೆಯ ಶತಮಾನ, ಪುಟ ೩೮೭.

೧೨. ಅದೇ, ಚಾಮರಾಜನಗರ, ಶಾ.ಸಂ. ೧೦೪, ಮೂಡಲ ಅಗ್ರಹಾರ, ಕ್ರಿ.ಶ. ೧೪೧೨, ಪುಟ ೫೩.

೧೩. ಅದೇ, ಕೊಳ್ಳೆಗಾಲ, ಶಾ.ಸಂ. ೫೬, ಸಿಂಗನಲ್ಲೂರು, ಕ್ರಿ.ಶ. ೧೪೦೩, ಕ್ರಿ.ಶ. ೪೩೪.

೧೪. ಅದೇ, ಚಾಮರಾಜನಗರ, ಶಾ.ಸಂ. ೧೪೩, ಕೆಂಪನಪುರ, ಕ್ರಿ.ಶ. ೧೧೬೯ ಪುಟ ೮೬.

೧೫. ಅದೇ, ಶಾ.ಸಂ. ೧೨೯, ಎಡೂರು, ಕ್ರಿ.ಶ. ೧೩೮೯, ಪುಟ ೭೫.

೧೬. ಅದೇ, ಶಾ.ಸಂ. ೧೪೮, ಹೊಮ್ಮ, ಕ್ರಿ.ಶ. ೧೩೮೦, ಪುಟ ೯೨.

೧೭. ಅದೇ, ಶಾ.ಸಂ. ೨೯೧, ಹರಪನಹಳ್ಳಿ ಕ್ರಿ.ಶ. ೧೭೪೪, ಪುಟ ೧೮೦.

೧೮. ಅದೇ, ಚಾಮರಾಜನಗರ, ಶಾ.ಸಂ. ೩೦೧, ಅರಕಲವಾಡಿ, ಕ್ರಿ.ಶ. ೧೫೫೫, ಪುಟ ೨೭೪.

೧೯. ಅದೇ, ಯಳಂದೂರು, ಶಾ.ಸಂ. ೧, ಯಳಂದೂರು, ಕ್ರಿ.ಶ. ೧೬೫೪, ಪುಟ ೨೭೪.

# ೫. ಪ್ರಭುಶಂಕರರ ಜೀವನ ಚರಿತ್ರೆಗಳು : ಮೌಲ್ಯಗಳನ್ನು ಎತ್ತಿಹಿಡಿಯುವ ಬರಹಗಳು

*– ಡಾ. ಜಿ.ಆರ್. ತಿಪ್ಪೇಸ್ವಾಮಿ*

೧೬೮೩ರಲ್ಲಿ ಡ್ರೈಡನ್ ಪ್ರಥಮ ಬಾರಿಗೆ ಜೀವನ ಚರಿತ್ರೆ ಎಂಬುದಕ್ಕೆ Biography ಎಂಬ ಪದವನ್ನ ಪ್ರಯೋಗ ಮಾಡಿದ. ಜೀವನಕಥೆಯೆಂದರೆ ನಿರ್ದಿಷ್ಟ ವ್ಯಕ್ತಿಗಳ ಬದುಕಿನ ಕಥೆಯೆಂದ. ಜೀವನ ಕಥೆಯ ಸೃಷ್ಟಿಗೂ ಹಲವಾರು ಕಾರಣಗಳಿರುತ್ತವೆ. ಅವುಗಳಲ್ಲಿ ಪ್ರಮುಖವಾಗಿ ಎರಡು : ೧. ಒಂದು ಕಾಲದ ಜನಜೀವನದಲ್ಲಿ ವಿಶಿಷ್ಟ ಕೆಲಸ ಅಥವಾ ವ್ಯಕ್ತಿತ್ವ ಪ್ರಭಾವ ಬೀರಿರುತ್ತದೆ. ೨. ಅಂತಹ ವ್ಯಕ್ತಿ ಅವರ ಕೆಲಸ ಮುಂದಿನ ಜನಾಂಗಕ್ಕೆ ಉಳಿಯಬೇಕಾದರೆ ಜೀವನ ಕಥೆಗಳ ಅವಶ್ಯಕತೆಯಿದೆ.

ಜೀವನ ಕಥೆ ಕೇಂದ್ರವಾಗುವ ವ್ಯಕ್ತಿಯ ಪ್ರಾಮಾಣಿಕ ಚಿತ್ರವಾಗಿರಬೇಕಾಗುತ್ತದೆ. ಆತನ/ಆಕೆಯ ಒಳ್ಳೆಯ ಹಾಗೂ ಕೆಟ್ಟ ಗುಣಗಳನ್ನು ಯಾವುದೇ ಭಾವಾವೇಶವಿಲ್ಲದೆ ನಿರೂಪಿಸುವುದು ಜೀವನ ಕಥೆಯ ಉದ್ದೇಶವಾಗಿರುತ್ತದೆ. ಅದು ಸಾಹಿತ್ಯ ಕೃತಿ ಎನಿಸಿಕೊಳ್ಳುವುದೇ ಅದರ ನಿರೂಪಣಾ ಸಾಮರ್ಥ್ಯದಿಂದ. ಉದ್ದೇಶಿತ ವ್ಯಕ್ತಿಯ ಗುಣಗಾನಕ್ಕಷ್ಟೇ ಸೀಮಿತವಾದ ಜೀವನ ಚರಿತ್ರೆಗಳೂ ಇವೆ. ವ್ಯಕ್ತಿ ಚಿತ್ರಗಳೂ ಇವೆ. ಕೇವಲ ಅಂತಹ ಮನೋಭಾವ ಕಡಿಮೆಯಾಗಿ ವಸ್ತುನಿಷ್ಠತೆಯನ್ನ ಕಾಪಾಡಿಕೊಂಡ ಕೃತಿಗಳೂ ಹೊರಬಂದಿವೆ. ಈ ಮಾತಿಗೆ ತಕ್ಕ ಉದಾಹರಣೆಗಳೆಂದರೆ ಪ್ರಭುಶಂಕರರು ರಚಿಸಿದ ಜೀವನ ಚರಿತ್ರೆಗಳು.

'ಖಲೀಲ್ ಗಿಬ್ರಾನ್', 'ಕುವೆಂಪು', 'ಬೆರಗು', 'ಸ್ವಾಮಿ ವಿವೇಕಾನಂದ', 'ಸೋದರಿ ನಿವೇದಿತ', 'ಸ್ವಾಮಿತ್ಯಾಗೀಶಾನಂದ', 'ಅಲ್ಲಮಪ್ರಭು', 'ಪಡುಬಿದರೆ ಅಮ್ಮ' – ಇತ್ಯಾದಿ ಕೃತಿಗಳನ್ನ ಪ್ರಭುಶಂಕರರು ಹೊರತಂದಿದ್ದಾರೆ. ಇವರಿಗಿಂತಲೂ ಹಿಂದೆ ಹಲವಾರು ವ್ಯಕ್ತಿಚಿತ್ರಗಳನ್ನ ಕಟ್ಟಿಕೊಟ್ಟವರಿದ್ದಾರೆ. ತಮ್ಮ 'ಜ್ಞಾಪಕಚಿತ್ರಶಾಲೆ' ಯಲ್ಲಿ ಡಿ.ವಿ. ಗುಂಡಪ್ಪ ಅವರು ಹಲವರ ವ್ಯಕ್ತಿತ್ವಗಳನ್ನು ಚಿತ್ರಿಸಿದ್ದಾರೆ, ಸಾಂಸ್ಕೃತಿಕ

ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ. ಅವೆಲ್ಲ ಒಂದು ಗ್ರೂಫ್ ಫೋಟೋ ಇದ್ದ ಹಾಗೆ ಕಾಣಿಸುತ್ತವೆ. ಆದರೆ ಪ್ರಭುಶಂಕರರ ಬರವಣಿಗೆಯನ್ನು ಗಮನಿಸಿದರೆ ತಾವು ಯಾರನ್ನ ಪರಿಚಯಿಸುತ್ತಿದ್ದಾರೋ ಯಾರ ವ್ಯಕ್ತಿತ್ವಗಳನ್ನ ಕಡೆದು ನಿಲ್ಲಿಸುತ್ತಿದ್ದಾರೋ ಅಂಥವರ ಜೊತೆ ತಾವೂ ನಿಲ್ಲುವುದು ಒಂದು ವಿಶೇಷ ಸಂಗತಿ. ಅಂದರೆ ತಮ್ಮ ಜೊತೆಯಲ್ಲಿ ಬೇರೆಯವರ ವ್ಯಕ್ತಿತ್ವ ಮತ್ತು ಹಿರಿಮೆಗಳನ್ನ ಎತ್ತಿ ತೋರಿಸುತ್ತಾರೆ. ಇದು ಪ್ರಭುಶಂಕರರ ಜೀವನಚರಿತ್ರೆಗಳ ಒಂದು ವೈಶಿಷ್ಟವೆನ್ನಬಹುದು. ಕುವೆಂಪು ಪ್ರಿಯಶಿಷ್ಯರಲ್ಲಿ ಒಬ್ಬರಾಗಿದ್ದುಕೊಂಡು ಅವರಿಂದ ಸ್ಫೂರ್ತಿ ಪಡೆದ ಪ್ರಭುಶಂಕರ ಅವರಿಗೆ ಆದರ್ಶ ವ್ಯಕ್ತಿಗಳು ಹೇಗಿದ್ದರು? ಅವರನ್ನ ಹತ್ತಿರಕ್ಕೆ ತೆಗೆದುಕೊಳ್ಳುವ ರೀತಿ ಯಾವುದು ಎಂಬುದು ಬಹಳ ಮುಖ್ಯವಾಗುತ್ತದೆ. ಹಾಗಾಗಿ ಅವರಿಗೆ ಪ್ರಿಯವಾಗುವುದು ನೈತಿಕ ಮೌಲ್ಯಗಳು, ಆಧ್ಯಾತ್ಮಿಕ ಚಿಂತನೆಗಳು, ಇವನ್ನ ಉಳಿಸಿಕೊಂಡು ಕಾಪಾಡಿಕೊಂಡು ಬಂದ ವ್ಯಕ್ತಿಗಳು, ವ್ಯಕ್ತಿತ್ವಗಳು. ಹಾಗಾಗಿ ಬುದ್ಧ, ಬಸವಣ್ಣ, ಅಲ್ಲಮಪ್ರಭು, ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿವಿವೇಕಾನಂದರ ಚಿಂತನೆಗಳನ್ನ ಬರಹದಲ್ಲಿ ಮೂಡಿಸಿ ಕನ್ನಡಿಗರು ಬೆರಗಾಗುವಂತೆ ಮಾಡಿದರು. ಆದ್ದರಿಂದಲೇ ನೈತಿಕತೆಯೇ ಅವರ ಸಾಹಿತ್ಯದ ಪ್ರಮುಖ ಕೇಂದ್ರವಾಗಿಬಿಡುತ್ತದೆ.

"ಒಬ್ಬ ವ್ಯಕ್ತಿಯನ್ನು ಕುರಿತು ಬರೆಯುವಾಗ ಭಾಷೆಯಲ್ಲಿ ಎಷ್ಟು ಲವಲವಿಕೆ, ಮೂರ್ತತೆ, ಸ್ಫುಟತ್ವ ಇರಬಹುದು. ಕೆಲವೇ ವಾಕ್ಯಗಳಲ್ಲಿ ಇಡೀ ವ್ಯಕ್ತಿತ್ವವನ್ನು ಹೇಗೆ ಸೆರೆಹಿಡಿಯಬಹುದು ಎಂಬುದಕ್ಕೆ ನಿದರ್ಶನವಾಗಿ" ಅವರ ಜೀವನ ಚರಿತ್ರೆಗಳಿವೆ. 'ಕನ್ನಡದ ಗದ್ಯ ಎಂತಹ ಕಳೆಯನ್ನ ಸ್ಫುಟತ್ವವನ್ನು ಪ್ರಸನ್ನತೆಯನ್ನ ಸಾಧಿಸಿದೆ ಎಂಬುದಕ್ಕೆ ನಿದರ್ಶನವಾಗಿ ಅವರ ಮಾತುಗಳಿವೆ, ವಾಕ್ಯಸರಣಿ ಇದೆ'. ಭಾರತದ ನವನಿರ್ಮಾಣ ಚಿಂತಕರಲ್ಲೊಬ್ಬರಾದ ಸ್ವಾಮಿ ವಿವೇಕಾನಂದರ ಜೀವನ ಸಾಧನೆಯನ್ನ ಕುರಿತು ಪ್ರಭುಶಂಕರ್ ಹೀಗೆ ಬರೆದಿದ್ದಾರೆ : "ನಾನು ಬರೆಯುತ್ತಿರುವುದು ಇದು ದೊಡ್ಡ ಜೀವದ ಕತೆ. ಭರತಖಂಡಕ್ಕಾಗಿ ಎದೆಯ ರಕ್ತವನ್ನು ಬಸಿದ ಉಜ್ವಲ ದೇಶಭಕ್ತನ ಕತೆ. ಸನಾತನ ಧರ್ಮವನ್ನು ಸಿಂಹಗರ್ಜನೆಯಿಂದ ದೇಶವಿದೇಶಗಳಲ್ಲಿ ಸಾರಿದ ವೇದಾಂತ ಕೇಸರಿಯ ಕತೆ. ಆತ್ಮಾನುಭವದ ಆನಂದದಲ್ಲಿ ಹಗಲಿರುಳೂ ತನ್ಮಯರಾಗಿದ್ದೂ ಜಗತ್ತಿಗೆ ಆ ಅನುಭವವನ್ನು ಸೂರೆಚೆಲ್ಲಿದ ಮಹಾಯೋಗಿಯಕತೆ". ವಿವೇಕಾನಂದರ ದೇಶಪ್ರೇಮ, ಧರ್ಮಪ್ರಸಾರ, ಆತ್ಮಾನುಭೂತಿ – ಈ ಮೂರು ಮುಪ್ಪುರಿಗೊಂಡ ಅವರ ವ್ಯಕ್ತಿತ್ವವನ್ನು ಸ್ವಾಮಿ ವಿವೇಕಾನಂದ ಕೃತಿಯಲ್ಲಿ ಅತ್ಯಂತ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಪ್ರಭುಶಂಕರರು ಮೂರು ರೀತಿಯ ಭಾವಚಿತ್ರಗಳನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ : "ಒಂದು ದೇಶ ಪ್ರೇಮಿಯ ಚಿತ್ರ, ಕಾವಿಯ

ಬಟ್ಟೆಯನ್ನುಟ್ಟು ಅದೇ ಬಣ್ಣದ ಬಟ್ಟೆಯನ್ನು ಹೊದೆದು ದಂಡವನ್ನೂ ಹಿಡಿದು ಧೀರನಿಲುವಿನಲ್ಲಿ ನಿಂತ ಬೋಳು ಮಂಡೆಯ ಭವ್ಯವ್ಯಕ್ತಿತ್ವವನ್ನು ಅಲ್ಲಿ ಕಾಣುತ್ತೇವೆ. ಸ್ವಾಮಿ ವಿವೇಕಾನಂದರು ತಮ್ಮ ತಾಯ್ನಾಡಿನ ಮೇಲಣ ಅಪಾರ ಪ್ರೇಮದಿಂದ, ಈ ದೇಶದ ಉದ್ದಗಲಗಳನ್ನೂ ಬರಿಗಾಲಿನಲ್ಲಿ ಸುತ್ತಿ ಅದರ ಹೃದಯದ ಮಿಡಿತವನ್ನು ಅರಿತ ದಿನಗಳ ಚಿತ್ರ. ಎರಡನೆಯದು ತಲೆಗೆ ಪೇಟ ಸುತ್ತಿ ಕೈಕಟ್ಟಿ ವೇದಾಂತ ತತ್ವಗಳನ್ನು ಮೊಳಗಲು ನಿಂತ ಧೀರಭಂಗಿ. ಮೂರನೆಯದು ಕಮಲದ ದಳಗಳಂತಹ ತಮ್ಮ ಕಣ್ಣುಗಳನ್ನು ಮುಚ್ಚಿ ಸಾಕ್ಷಾತ್ ಶಿವನಂತೆ ಸಮಾಧಿಯಲ್ಲಿ ಮಗ್ನರಾಗಿ ಕುಳಿತ ಚಿತ್ರ. ಸ್ವಾಮಿ ವಿವೇಕಾನಂದರ ಬಹುಮುಖ ವ್ಯಕ್ತಿತ್ವಗಳಲ್ಲಿ ಅತ್ಯಂತ ಮುಖ್ಯವಾದ ಈ ಮಾತು ವ್ಯಕ್ತಿತ್ವಗಳನ್ನು ಆ ಮೂರೂ ಚಿತ್ರಗಳು ಎತ್ತಿ ತೋರಿಸುತ್ತವೆ" (ಪ್ರವೇಶ). ಸಾಧನೆ, ತಪಸ್ಸು, ಮಾನವ ಪ್ರೇಮ, ದೈವದ ಹಂಬಲ, ದೈವದರ್ಶನ – ಇತ್ಯಾದಿಗಳಿಂದ ತಾವು ಹೊಂದಿದ ಆನಂದವನ್ನು ಇತರರಿಗೆ ಹಂಚಿದ ರೀತಿಯಿಂದ ಅವರು ಅತಿಮಾನವತನಕ್ಕೆ ಬೆಳೆದು ನಿಂತದ್ದನ್ನು ಕಾಣುತ್ತೇವೆ. ಅಂಥ ಮಹತ್ವದ ಘಟನೆ, ಸನ್ನಿವೇಶಗಳ ನಿಕಟ ಪರಿಚಯವನ್ನು ಪ್ರಭುಶಂಕರ್ 'ಸ್ವಾಮಿ ವಿವೇಕಾನಂದ' ಕೃತಿಯಲ್ಲಿ ಮಾಡಿಕೊಟ್ಟಿದ್ದಾರೆ. ಸ್ವಾಮಿ ವಿವೇಕಾನಂದರ ದೇಶಭಕ್ತಿ, ಗುರುಭಕ್ತಿ, ಸಮಾಜದ ಬಗೆಗಿನ ಕಳಕಳಿ, ಶಿಕ್ಷಣದ ಬಗೆಗಿನ ಕಾಳಜಿ, ವಿಚಾರಗಳ ಪ್ರಸ್ತುತತೆ – ಹೀಗೆ ಅವರ ವ್ಯಕ್ತಿತ್ವದ ಹಲವಾರು ಮುಖಗಳನ್ನು ಆ ಕೃತಿಯಲ್ಲಿ ಅನಾವರಣಗೊಳಿಸಿರುವುದು ಮಹತ್ವದ ಸಂಗತಿ.

ವಿಶಾಲವಾಗಿರುವ ಜಗತ್ತಿನಲ್ಲಿ ವೈವಿಧ್ಯಮಯವಾದ ಚಿಂತನ ಮಾದರಿಗಳಿವೆ. ಅವೆಲ್ಲವನ್ನ ಒಳಗೊಂಡ ಗದ್ಯದ ಮಾದರಿಗಳನ್ನು ಕನ್ನಡಿಗರಿಗೆ ಪರಿಚಯಿಸಬೇಕೆಂಬ ಉತ್ಸುಕತೆ ಪ್ರಭುಶಂಕರ್ ಅವರದಾಗಿತ್ತು. ಆ ಉದ್ದೇಶದಿಂದಲೇ ಪ್ರವಾದಿ, ಅಲೆಮಾರಿ, ಮರಳುನೊರೆ, ಯೇಸು, ಅಗ್ರಗಾಮಿ ಅಥವಾ ಮುಂದೆ ನಡೆಯುವವನು – ಮುಂತಾದ ಮಹತ್ವದ ಕೃತಿಗಳಿಗೆ ಕಾರಣನಾದ ಖಲೀಲ್ ಗಿಬ್ರಾನ್ ಪ್ರಭುಶಂಕರ ಅವರಿಗೆ ಪ್ರಿಯವಾದ ಲೇಖಕ. ಕತೆ ಹೇಳುವ ಕಲೆಯಲ್ಲಿ ಪಳಗಿದವನು. ಕ್ರಿಸ್ತನ ಬಗೆಗಂತೂ ಅಪಾರವಾದ ಗೌರವ ಮತ್ತು ಅಭಿಮಾನವುಳ್ಳವನು. 'ಜೀಸಸ್' ಎಂಬ ಪುಸ್ತಕವನ್ನೇ ಬರೆದ. ಕ್ರಿಸ್ತನನ್ನ ನೋಡಿದವರು, ಆತನ ಬಗ್ಗೆ ಕೇಳಿದವರು, ಆತನನ್ನು ಕುರಿತು ಯಾವ್ಯಾವ ರೀತಿ ಅಭಿಪ್ರಾಯಗಳನ್ನು ಮೂಡಿಸಿರಬಹುದು ಎಂಬುದನ್ನು ಊಹಿಸಿ ಕ್ರಿಸ್ತನ ವ್ಯಕ್ತಿತ್ವವನ್ನು ಮತ್ತೆ ಕಟ್ಟಿಕೊಡುವ ಕೆಲಸದಲ್ಲಿ ತೊಡಗುತ್ತಾನೆ. ಎಪ್ಪತ್ತು ಪಾತ್ರಗಳ ಮೂಲಕ ಕ್ರಿಸ್ತನನ್ನ ಅರ್ಥಮಾಡಿಕೊಳ್ಳುವಂತೆ ಮಾಡುವುದರಲ್ಲಿ ಗಿಬ್ರಾನ್ ಯಶಸ್ಸು ಹೊಂದುತ್ತಾನೆ. ಹಲವಾರು ಪಾತ್ರಗಳ ಮೂಲಕ ಕ್ರಿಸ್ತನ

ಪವಾಡಗಳಿಗೆ ವಿವರಣೆ ನೀಡುವುದರ ಜೊತೆಗೆ ವಿಶಿಷ್ಟ ಮಾತುಗಾರಿಕೆಯ ಮೂಲಕ ಆತನ ವ್ಯಕ್ತಿತ್ವವನ್ನ ನಿರೂಪಿಸತೊಡಗುತ್ತಾನೆ. ಒಟ್ಟಾರೆ ಕ್ರಿಸ್ತನ ಕಾಲದ ಜನ ಆತನ ಬಗೆಗೆ ಮಾತನಾಡಿರಬಹುದಾದದ್ದು ಎಂಬಂತೆ ಮನಮುಟ್ಟುವಂತೆ ನಿರೂಪಿಸ ತೊಡಗುತ್ತಾನೆ. ಇದು ಆ ಕೃತಿಯ ವೈಶಿಷ್ಟ್ಯ.

ಬಸವಣ್ಣನವರ ವ್ಯಕ್ತಿತ್ವ ಮತ್ತು ಸಾಧನೆ ಕುರಿತ ಪ್ರಭುಶಂಕರ್ ಅವರ 'ಬೆರಗು' ಕೃತಿಗೆ ಖಲೀಲ್ ಗ್ರಿಬ್ರಾನ್‌ನ ಈ ಪುಸ್ತಕವೇ ಪ್ರೇರಣೆಯಾಯಿತು. ಕೃತಿಯ ಆರಂಭದಲ್ಲಿ ಪ್ರಭುಶಂಕರ್ "೨೦ನೇ ಶತಮಾನವೂ ಜಾತೀಯತೆಯ ನಿರ್ಮೂಲನೆಯ ವಿಷಯದಲ್ಲಿ ಸೋತು ಮುದುರಿ ಮಲಗಿದೆ" ಎಂದಿದ್ದಾರೆ. ಆದರೆ ೧೨ನೇ ಶತಮಾನದಲ್ಲಿ ಜಾತಿಯನ್ನ ನಿರ್ಮೂಲನ ಮಾಡಲು ಸರ್ವ ಪ್ರಯತ್ನ ಮಾಡಿದವನು ಬಸವಣ್ಣ. ರಾಜಕೀಯ ಮತ್ತು ಆಧ್ಯಾತ್ಮ ಈ ಎರಡನ್ನೂ ಸಮತೂಕವಾಗಿ ಕಂಡು ಸರಿದೂಗಿಸಿಕೊಂಡು ಹೋದದ್ದು ಮಹತ್ವದ ಸಂಗತಿ. ಇಂಥ ಸಮತೋಲನದ ನಡಿಗೆಯ ಫಲವಾಗಿ ಬಸವಣ್ಣನ ಬದುಕು ಸಂಕೀರ್ಣ ಸ್ವರೂಪ ಪಡೆಯಲು ಸಾಧ್ಯವಾಯಿತಲ್ಲದೆ ಅವರ ವ್ಯಕ್ತಿತ್ವವೂ ಜಟಿಲವಾಯಿತು. ಆದ್ದರಿಂದ ಬಸವಣ್ಣನವರ ವ್ಯಕ್ತಿತ್ವ ಮತ್ತು ಸಾಧನೆಯನ್ನ ಆತನ ಸಮಕಾಲೀನ ಮನಸ್ಸುಗಳ ಮೂಲಕವೇ ಕಟ್ಟಿಕೊಟ್ಟರೆ ಸೊಗಸು ಎನಿಸಿದ್ದರಿಂದ ಪ್ರಭುಶಂಕರ್ 'ಬೆರಗು' ಕೃತಿ ರಚನೆಗೆ ಕೈಹಾಕಿದರು. ಮಾದಿರಾಜ, ಮಾದಾಂಬೆ, ಈಶಾನ್ಯಮೂರ್ತಿ, ದಂಡನಾಥ, ಪಶುಪತಿಶಾಸ್ತ್ರಿ, ಸಿದ್ಧರಾಮ, ಚನ್ನಬಸವಣ್ಣ, ಮಹಾದೇವಿಯಕ್ಕ, ಮುಕುಂದ ಪೆದ್ದಿ, ಗಂಗಾದೇವಿ, ಸಂಬೊಳಿನಾಗಿದೇವ – ಮುಂತಾದ ಪಾತ್ರಗಳ ಮೂಲಕ ಬಸವಣ್ಣನ ವ್ಯಕ್ತಿತ್ವವನ್ನು, ಸಾಧನೆಯನ್ನ ಚಿತ್ರಿಸುವ ಯಶಸ್ವೀ ಪ್ರಯತ್ನ ಇದಾಗಿದೆ. ಸಾಮಾನ್ಯವಾಗಿ ಕನ್ನಡದಲ್ಲಿ ಬಂದಿರುವ ಜೀವನ ಚರಿತ್ರೆಗಳೆಲ್ಲ ಜನನ, ಬಾಲ್ಯ, ಯೌವ್ವನ, ವಿವಾಹ ಮುಂತಾದ ಕ್ರಮದಲ್ಲಿ ಜೀವನ ವಿವರಗಳನ್ನ ನೀಡುತ್ತ ಬಂದಿವೆ. ಈ ರೀತಿಯ ಬರವಣಿಗೆ ರಸಸ್ಪರ್ಶವಾಗದೆ ಶುಷ್ಕವೆನಿಸಿಬಿಡುತ್ತದೆ. ಇಂಥ ಪಾರಂಪರಿಕವಾದ ಸಿದ್ಧ ಮಾದರಿಯ ಬರವಣಿಗೆಯ ಕ್ರಮಕ್ಕಿಂತ ಭಿನ್ನ ರೀತಿಯ ಬರವಣಿಗೆ ಪ್ರಭುಶಂಕರ್ ಅವರ 'ಬೆರಗು' ಕೃತಿಯದು. ಬಸವಣ್ಣನವರ ಜೀವನ ಸಾಧನೆಯನ್ನ ಗುರುತಿಸುವ ಕ್ರಮವೇ ಭಿನ್ನ ಬಗೆಯದಾಗಿರುವುದರಿಂದ ಕನ್ನಡದ ಮಟ್ಟಿಗೆ ಇದೊಂದು ಹೊಸ ಪ್ರಯತ್ನವೆನ್ನಬಹುದು. ಬಸವಣ್ಣನವರ ಕುಟುಂಬ ಸದಸ್ಯರಿಂದ ಮತ್ತು ಹೊರಗಿನಿಂದ ಮಾನವೀಯ ಸಂಬಂಧಗಳನ್ನು ವ್ಯಕ್ತಿತ್ವವನ್ನ ಸಮಗ್ರವಾಗಿ ಕಟ್ಟಿಕೊಡುವ ನಮ್ರ ಪ್ರಯತ್ನ ಇದಾಗಿದೆ. ಕೇಂದ್ರ ಪಾತ್ರವಾದ ಬಸವಣ್ಣನವರನ್ನು ನೋಡುವ ಕ್ರಮವಷ್ಟೇ ಆಗಿರದೆ ಆಯಾ ಪಾತ್ರಗಳ ಒಳಶೋಧವೂ ಆಗಿರುವುದನ್ನ ಗಮನಿಸಬಹುದು.

ತಾಂತ್ರಿಕವಾಗಿ ಖಲೀಲ್ ಗಿಬ್ರಾನ್ ಕೃತಿ ಇದಕ್ಕೆ ಮಾದರಿಯಾಗಿದ್ದರೂ 'ಬೆರಗು' ಒಂದು ಸ್ವೋಪಜ್ಞ ಕೃತಿಯಾಗಿಯೇ ಕಾಣಿಸುತ್ತದೆ. ಭಾಷೆಯ ಅದ್ಭುತ ಬಳಕೆಯಷ್ಟೇ ಅಲ್ಲ ವೈಚಾರಿಕ ಒಳನೋಟಗಳಿಂದಲೂ ಕೂಡಿದೆ. ಉದಾ : ಮುಕುಂದ ಪೆದ್ದಿ ಪ್ರಜ್ಞೆಯಲ್ಲಿ ವಿಷ್ಣುಭಟ್ಟರನ್ನುದ್ದೇಶಿಸಿ ಬಿಜ್ಜಳನಿಗೆ ಹೇಳುವ ಮಾತೇ ನಿದರ್ಶನ. "ಮಹಾಪ್ರಭು ತಮ್ಮ ದಂಡನಾಯಕರು ಈಗತಾನೆ ಹೊಲಗೇರಿಯಿಂದ ಬರುತ್ತಿದ್ದಾರೆ. ಅವರ ಊಟವೂ ಅಲ್ಲೇ ಆಗಿದೆ. ಅರಮನೆಗೆ ಪ್ರವೇಶಿಸುವುದಕ್ಕೆ ಮುಂಚೆ, ಪ್ರಭುಗಳ ಸನ್ನಿಧಿಯಲ್ಲಿ ಕಾಣಿಸಿಕೊಳ್ಳುವುದಕ್ಕೆ ಮುಂಚೆ ಸ್ನಾನ ಮಾಡಿ, ಶುದ್ಧರಾಗಿ, ಮಡಿಬಟ್ಟೆಯುಟ್ಟು ಬರಬೇಕು ಅನ್ನೊ ಅಷ್ಟು ಗೌರವವನ್ನು ಪ್ರಭುಸನ್ನಿಧಿಗೆ ಇವರು ತೋರಿಸಿಲ್ಲ' ಪ್ರಭುಗಳು ಗಂಭೀರವಾಗಿ ಆದರೆ, ನಾಟಕದಲ್ಲಿ ಅನ್ನೋ ಹಾಗೆ : 'ಬಸವ ದಂಡನಾಯಕರೇ ಇವರ ಮಾತು ನಿಜವೆ?' ಎಂದು ಕೇಳಿದರು. ಆಗ ಆತ ಕೊಟ್ಟ ಉತ್ತರ, ಉತ್ತರ ಅಲ್ಲ ಸಿಡಿಲು ಇಲ್ಲವಲ್ಲ, ನಾನೇನು ಬ್ರಾಹ್ಮಣರ ಅಗ್ರಹಾರಕ್ಕೆ ಹೋಗಿದ್ದೆನೋ ಹೊಲಗೇರಿಗೆ ಹೋಗಿದ್ದೆ ಎನ್ನುವುದಕ್ಕೆ ನಾನೇನು ವಿಷ್ಣುಭಟ್ಟರ ಮನೆಯಲ್ಲಿ ಉಂಡೆನೆ, ಹೊಲೆಯರ ಮನೆಯಲ್ಲಿ ಉಂಡೆ ಎನ್ನುವುದಕ್ಕೆ? ಸಭೆಗೆ ಸಭೆಯೇ ಘೊಳ್ ಎಂದು ನಕ್ಕಿತು. ಮಹಾರಾಜರ ಮುಖ ನೋಡಿದೆವು. ಅಲ್ಲಿ ಮಂದಹಾಸ ಮನೆಮಾಡಿತ್ತು. ನಾನು ವಿಷ್ಣುಭಟ್ಟರೂ ತಲೆತಗ್ಗಿಸಿ, ಸಭೆ ಯಾವಾಗ ಮುಗಿದಿತೋ ಎಂದು ಕಾದಿದ್ದು ಮನೆಗೆ ಬಂದು ಬಿಟ್ಟೆವು. ಮತ್ತೆ ರಾಜಸಭೆಗೆ ಕಾಲಿಟ್ಟಿಲ್ಲ" (ಪು. ೩೧)

ಎ.ಎನ್. ಮೂರ್ತಿರಾಯರು ಹೇಳುವಂತೆ "ಈ ಚಿತ್ರಗಳನ್ನು ಬಿಡಿಸುವಾಗ ಅಭಿಪ್ರಾಯಗಳನ್ನು ಮಂಡಿಸುವಾಗ ಪ್ರಭುಶಂಕರರ ಮನಸ್ಸಿನಲ್ಲಿ ಯಾವ ವೀರಾಭಿಮಾನ, ಅಂಧಾಭಿಮಾನಗಳೂ ಇಲ್ಲ. ಇದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಬೇಕು. ಬ್ರಾಹ್ಮಣರ ದೃಷ್ಟಿ, ಬಸವಣ್ಣನವರ ಪರವಾದ ದೃಷ್ಟಿ, ಅವರಿಗೆ ವಿರುದ್ಧವಾದ ದೃಷ್ಟಿ ಎಲ್ಲವನ್ನು ಇತ್ತ ಹಿಂಜರಿಕೆಯಿಲ್ಲದೆ ಅತ್ತ ತಿರಸ್ಕಾರವಿಲ್ಲದೆ ಕಾಣಿಸಿದ್ದಾರೆ. ಬರವಣಿಗೆಯಲ್ಲಿ ನಿರ್ಲಿಪ್ತತೆಯ ಗಾಂಭೀರ್ಯವಿದೆ" (ಪುಟ. ೮೫)

ನಾಲ್ಕು ದಶಕಗಳಿಗೂ ಹೆಚ್ಚುಕಾಲ ಪ್ರಭುಶಂಕರ್ ಕುವೆಂಪು ಅವರ ಒಡನಾಟದಲ್ಲಿದ್ದರು. ಕುವೆಂಪು ರಾಮಕೃಷ್ಣ ಪರಮಹಂಸರ ಆರಾಧಕರಾಗಿದ್ದರು. ಪ್ರಭುಶಂಕರರೂ ರಾಮಕೃಷ್ಣಾಶ್ರಮದಲ್ಲಿ ಅನೇಕ ವರ್ಷ ಕಳೆದರು. ಚಿಕ್ಕಂದಿನಿಂದಲೂ ಅವರ ಆತ್ಮೀಯ ವಲಯದಲ್ಲಿದ್ದರು. ದೀರ್ಘಕಾಲದ ಬಾಂಧವ್ಯದಲ್ಲಿ ಹಲವಾರು ಘಟನೆಗಳೇ ಜರುಗಿವೆ. ಕುವೆಂಪು ಪಾಠಮಾಡಿದ ರೀತಿಯನ್ನ ಹೇಳುತ್ತಲೇ ಅವರ ಬದುಕಿನ ಕ್ರಮವನ್ನ ನಿರೂಪಿಸತೊಡಗುತ್ತಾರೆ. ಕಾವ್ಯ ಮತ್ತು ಕಾವ್ಯಮೀಮಾಂಸೆಯನ್ನ

ವಿವರಿಸುವಾಗ ರಸಸ್ಪರ್ಶವಾಗುವಂತೆ ಪಾಠ ಹೇಳುತ್ತಿದ್ದ ರೀತಿಯನ್ನ ಪ್ರಭುಶಂಕರರು ಕುಮಾರವ್ಯಾಸನ ದ್ರೋಣಪರ್ವದ ಭಾಗವನ್ನು 'ಪಡುವಣ ಶೈಲ ವಿಪುಲಸ್ತಂಭ, ದೀಪಿಕೆಯಂತೆ ರವಿಮೆರೆದ' ಎಂಬ ಸಾಲನ್ನು ಬೋಧಿಸುತ್ತಿದ್ದದ್ದನ್ನು ಉದಾಹರಣೆ ನೀಡಿ ವಿವರಿಸಿದ್ದಾರೆ. "ಕುಮಾರವ್ಯಾಸ ಪ್ರಕೃತಿ ವ್ಯಾಪಾರಗಳಿಗೆ ಒಲಿದ ಕವಿಯಲ್ಲ. ಅವನಿಗೆ ಸೂರ್ಯೋದಯ, ಸೂರ್ಯಾಸ್ತಗಳು ಕೇವಲ ಕಾಲಸೂಚಿಗಳು. ಆದರೆ ಪರಿಸ್ಥಿತಿಯ ಮಹತ್ತನ್ನು ಅರಿತಿದ್ದ ಆ ಕವಿ ಭೀಷ್ಮರು ಶರಶಯ್ಯೆಯ ಮೇಲೆ ಮಲಗಿದ ಸಂಜೆಯ ಅಸ್ತಮಾನವು ಮಹತ್ವಪೂರ್ಣವಾದದ್ದು ಎಂಬುದನ್ನು ಅರಿತಿದ್ದಾನೆ. ಆದುದರಿಂದಲೇ ಅಂದಿನ ಸೂರ್ಯಾಸ್ತಕ್ಕೆ ಭವ್ಯವಾದ ಉಪಮೆಯನ್ನು ನೀಡಿದ್ದಾನೆ. ಯಾರಾದರೂ ಸತ್ತರೆ ಅವರನ್ನು ಮಲಗಿಸಿದ್ದ ಜಾಗದಲ್ಲಿ ಒಂದು ಹಣತೆಯನ್ನು ಹಚ್ಚಿಡುವುದು ಪದ್ಧತಿ. ಈಗ ಅವಸಾನವಾಗಲಿರುವವರು ಕೌರವ ಪಾಂಡವ ವಂಶಗಳೆರಡಕ್ಕೂ ಪಿತಾಮಹರೂ ಯುಗಪುರುಷರೂ ಆದ ಭೀಷ್ಮರು. ಆದುದರಿಂದ ಅವರಿಗೆ ಗೌರವ ತೋರಿಸಲು ಸಾಮಾನ್ಯ ಹಣತೆ ಸಾಕೆ? ಪಶ್ಚಿಮ ಪರ್ವತವೇ ದೀಪಸ್ತಂಭ, ಅದರ ಮೇಲೆ ಸಾಕ್ಷಾತ್ ಸೂರ್ಯನೇ ಹಚ್ಚಿಟ್ಟ ಬತ್ತಿ! ಒಂದು ಮಹತ್ತಾದ ಉಪಮೆಯನ್ನು ನೀಡಿ ಎಂತಹ ಧ್ವನಿ ತರಂಗಗಳನ್ನು ಹೊಮ್ಮಿಸಿದ್ದಾನೆ, ಮಹಾಕವಿ ಕುಮಾರವ್ಯಾಸ." ಕುವೆಂಪು ಅವರ ಬಗ್ಗೆ ಗೌರವವನ್ನು ಇಟ್ಟುಕೊಂಡೇ ತನ್ನತನವನ್ನ ಕಾಪಾಡಿಕೊಂಡು ಬಂದವರು ಪ್ರಭುಶಂಕರ್. ಹಾಸ್ಯಸನ್ನಿವೇಶಗಳನ್ನು ಸೃಷ್ಟಿಮಾಡುತ್ತಲೇ ಆರೋಗ್ಯಕರ ಚರ್ಚೆಗೆ ಆಸ್ಪದವಾಗಿಬಿಡುತ್ತಾರೆ.

ಕುವೆಂಪು ಅವರ ತರಗತಿಯಲ್ಲಿ ಎರಡುಮೂರು ಗಂಟೆಗಳು ನಿರಂತರ ಪ್ರವಚನದಲ್ಲಿ ಹಾಸ್ಯ ಪ್ರಸಂಗಗಳು ನಡೆಯುತ್ತಿದ್ದವಂತೆ. ಕುವೆಂಪು ಅವರನ್ನ ಹಾಸ್ಯ ಮಾಡಿದರೂ ಅವರು ಸಂತೋಷಪಡುತ್ತಿದ್ದರಂತೆ. ಮೂಢನಂಬಿಕೆಯ ವಿರುದ್ಧ ಕೆಂಡಕಾರಿದವರು ಕುವೆಂಪು ಅವರದ್ದೇ ಮೂಢನಂಬಿಕೆಯನ್ನು ಎತ್ತಿ ತೋರಿಸಿದಾಗ ಕುವೆಂಪು ಪ್ರತಿಕ್ರಿಯೆ ಹೇಗಿತ್ತು ಎಂಬುದನ್ನು ಒಂದೆರಡು ಘಟನೆಗಳ ಮೂಲಕ ಪ್ರಭುಶಂಕರ್ ವಿವರಿಸಿದ್ದಾರೆ.

ಒಂದು ಬೆಳಿಗ್ಗೆ ಡಾ. ಪಟ್ನಾಯಕ್, ಕುವೆಂಪು ಜೊತೆ ಪ್ರಭುಶಂಕರ್ ವಾಕಿಂಗ್ ಹೊರಟರಂತೆ. ನಡೆಯುತ್ತಿರಬೇಕಾದರೆ ಕುವೆಂಪು ಏನನ್ನೋ ಹೇಳಲು ನೋಡಿ ಪೂರ್ವಜನ್ಮದ ಯಾವಕರ್ಮವೋ! ಎಂದರು. ಅದಕ್ಕೆ ತಕ್ಷಣ ಪ್ರಭುಶಂಕರ್ 'ದಯವಿಟ್ಟು ಪೂರ್ವಜನ್ಮ, ಕರ್ಮ ಇಂಥದ್ದನ್ನ ನನ್ನ ಮುಂದೆ ಹೇಳಬೇಡಿ, ಅವೆಲ್ಲ ಮೂಢನಂಬಿಕೆಯ ಮೊತ್ತ' ಎಂದುಬಿಟ್ಟರಂತೆ. ಅದಕ್ಕೆ ಕುವೆಂಪು ಗಟ್ಟಿಯಾಗಿ

ನಗುತ್ತ ಪ್ರಭುಶಂಕರ್ ಕನ್ನಡದಲ್ಲಿ ಹೇಳಿದ್ದನ್ನು ಇಂಗ್ಲಿಷಿಗೆ ಅನುವಾದಿಸಿ ಪಟ್ಟನಾಯಕ್ ಅವರಿಗೆ ಹೇಳಿದರಂತೆ ಇನ್ನೊಮ್ಮೆ ವಾಕಿಂಗ್ ಹೋದಾಗ ಮಾದೇಶ್ವರಬೆಟ್ಟಕ್ಕೆ ಯಾತ್ರೆ ಹೋಗಿ ಬಂದವರ ಗುಂಪನ್ನು ನೋಡಿ ಕುವೆಂಪು "ನೋಡಿ ಎಂಥ ಮೌಢ್ಯ. ತಲೆ ಬೋಳಿಸಿಕೊಂಡು ಮಕ್ಕಳು ಮರಿಗಳನ್ನು ಎಳೆದುಕೊಂಡು ಹೇಗೆ ಬರುತ್ತಿದ್ದಾರೆ. ಈ ಮೌಢ್ಯ ಹೋಗುವುದು ಯಾವಾಗ" ಎಂದರಂತೆ. ಅದಕ್ಕೆ ಪ್ರಭುಶಂಕರ್ 'ನಾವು ನೀವು ರಾಮಕೃಷ್ಣಾಶ್ರಮಕ್ಕೆ ಹೋಗುವುದಿಲ್ಲವೇ ಅದೇ ರೀತಿ ಅವರೂ ಸಹ' ಎಂದದ್ದಲ್ಲದೆ "ಇನ್ನೊಬ್ಬರ ಮೂಢನಂಬಿಕೆಯನ್ನು ಖಂಡಿಸುವುದಕ್ಕೆ ನಮಗೆ ಅಧಿಕಾರವಿಲ್ಲ ಅಲ್ಲವೇ. ಏಕೆಂದರೆ ನಾವೇ ಒಂದಿಲ್ಲೊಂದು ಬಗೆಯ ಮೂಢನಂಬಿಕೆಗಳಲ್ಲಿ ತೊಡಗಿದ್ದೇವಲ್ಲ" ಎಂದರಂತೆ. ಅದಕ್ಕೆ ಕುವೆಂಪು 'ಹೌದು ಅದು ನಿಜ' ಎಂದರಂತೆ (ಹೀಗಿದ್ದರು ಕುವೆಂಪು ಪು.೨೧, ೨೧).

ಸಭೆ, ಸಮಾರಂಭಗಳಿಗೆ ಕುವೆಂಪು ಜೊತೆ ಹೋಗಿ ತಮ್ಮ ಅನುಭವವನ್ನ ಹೀಗೆ ಬರೆಯುತ್ತಾರೆ: "ಸಾರ್ವಜನಿಕರಿಂದ ತುಂಬಿದ ಸಮಾರಂಭವೇ ಆಗಲಿ, ವಿದ್ಯಾರ್ಥಿಗಳ ಸಭೆಯೇ ಆಗಲಿ, ಲೇಖಕರು, ಬುದ್ಧಿಜೀವಿಗಳು, ಅಧಿಕಾರಿಗಳು ಸಮಾವೇಶಗೊಂಡಿದ್ದ ವಿಶೇಷ ಸನ್ನಿವೇಶವೇ ಆಗಲಿ ಕುವೆಂಪು ಪ್ರವೇಶಿಸಿದ ಕೂಡಲೇ ಅದುವರೆಗೆ ಇದ್ದ ಗಜಿಬಿಜಿ ನಿಂತು ಇಡೀ ಆವರಣವೇ ಸ್ತಬ್ಧವಾಗಿ ನಿಶ್ಯಬ್ದವಾಗುತ್ತಿತ್ತು. ಅವರು ಪ್ರವೇಶಿಸಿದ ಕ್ಷಣ ಸಭೆಗೆ ಒಂದು ಗಾಂಭೀರ್ಯ ದೊರಕುತ್ತಿತ್ತು. ಅವರಂತೆ, ಸಾವಿರಾರು ಜನರ ಸಭೆಗೆ ಘನತೆ ಗಾಂಭೀರ್ಯಗಳನ್ನು ಕೇವಲ ತಮ್ಮ ಸಾನ್ನಿಧ್ಯದಿಂದಲೇ ದಾನ ಮಾಡಿದ ಮತ್ತೊಬ್ಬರನ್ನು ನಾನು ಕಂಡಿಲ್ಲ. ಅವರು ವಾಗ್ಮಿಯಲ್ಲ, ನಿಜ. ಆದರೆ ಹೇಳುವುದನ್ನು ಅವರಷ್ಟೇ ಪರಿಣಾಮಕಾರಿಯಾಗಿ ಹೇಳಬಲ್ಲವರು ಅನೇಕರನ್ನು ನಾನು ಕಂಡಿಲ್ಲ. ಸಭೆಯಲ್ಲಿ ತಾವು ಮಾತನಾಡುವ ಸರದಿ ಬರುವವರೆಗೆ ಅವರು ವೇದಿಕೆಯ ಮೇಲೆ ದಂತದ ವಿಗ್ರಹದಂತೆ ಕುಳಿತಿರುತ್ತಿದ್ದರು. ವೇದಿಕೆಯ ಮೇಲೆ ಕುಳಿತು ಅಕ್ಕಪಕ್ಕದವರೊಂದಿಗೆ ಮಾತನಾಡುವುದಾಗಲಿ, ನಗುವುದಾಗಲಿ ಇಲ್ಲವೇ ಇಲ್ಲ. ನಮ್ಮ ಸಾರ್ವಜನಿಕ ಸಭೆಗಳಲ್ಲಿ ಸಭಾ ಮರ್ಯಾದೆ ಎಂಬುದು ಹೇಗೆ ಇಲ್ಲವೋ ವೇದಿಕೆಯ ಮರ್ಯಾದೆ ಎನ್ನುವುದೂ ಇಲ್ಲ. ಆದರೆ, ವೇದಿಕೆಯ ಮರ್ಯಾದೆ ಎಂದರೆ ಏನು ಎಂಬುದನ್ನು ಕುವೆಂಪು ಅವರಿಂದ ಕಲಿಯಬೇಕಾಗಿತ್ತು. ಸಭೆ ಮುಗಿದ ಮೇಲೂ ಅಷ್ಟೆ, ಅವರು ಎದ್ದ ಕೂಡಲೆ ಇಡೀ ಸಭೆ ನಿಶ್ಯಬ್ದವಾಗಿ ನಿಲ್ಲುತ್ತಿತ್ತು. ಅವರು ಹೊರಗೆ ಹೋಗುವವರೆಗೂ ಒಬ್ಬರೂ ಚಲಿಸುತ್ತಿರಲಿಲ್ಲ." (ಹೀಗಿದ್ದರು ಕುವೆಂಪು ಪುಟ. ೩೯)

ಇದು ಕುವೆಂಪು ಅವರ ಮತ್ತು ಅವರ ಪ್ರಭಾವಳಿಯನ್ನ ಕಟ್ಟಿಕೊಡುವ ಬಗೆ. ವಿಶ್ವಮಾನವ ಸಂದೇಶದ ಬಗ್ಗೆ ಕುವೆಂಪು ಅವರ ಲೋಕದೃಷ್ಟಿ ಬಗ್ಗೆ ಪ್ರಭುಶಂಕರ್ ಸೊಗಸಾಗಿ ಬರೆದಿದ್ದಾರೆ.

ಪ್ರಭುಶಂಕರ್ ಅವರು ಪ್ರಸಿದ್ಧರಿಗಿಂತ ಅಪ್ರಸಿದ್ಧರ ಬಗೆಗೇ ಹೆಚ್ಚು ಒಲವು ತೋರುತ್ತಾರೆ, ಬರೆಯುತ್ತಾರೆ. ವ್ಯಕ್ತಿಚಿತ್ರಗಳ ಸಂಕಲನ 'ಜನಮನ' ಇದಕ್ಕೆ ಸಾಕ್ಷಿ. ಮಾನವೀಯತೆಯಿಂದ ಪ್ರೀತಿ ಗೌರವ ಗಳಿಸುವವರು ನಗೆಯನ್ನ ಅರಳಿಸುವವರು ಕರ್ತವ್ಯ ನಿಷ್ಠೆಯಿಂದ ಹಾಗೂ ದಯೆಕರುಣೆಯಿಂದ ಮನ ಸೆಳೆಯುವವರು ಇಲ್ಲಿ ಸ್ಥಳಾವಕಾಶ ಮಾಡಿಕೊಂಡಿದ್ದಾರೆ. ಮಹಾರಾಜ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದ ಅಟೆಂಡರ್ ಪುಟ್ಟಯ್ಯ, ಕೋಲಾರ ಕಾಲೇಜಿನ ಅಟೆಂಡರ್ ಅಬ್ದುಲ್‌ಸತ್ತಾರ್ ಮುಂತಾದವರ ಬಗೆಗೆ ಪ್ರಭುಶಂಕರರು ತುಂಬ ಆತ್ಮೀಯವಾಗಿ ಬರೆಯುತ್ತಾರೆ. ಹಾಗೆಯೇ ಉನ್ನತ ಹುದ್ದೆಯಲ್ಲಿರುವ ಗೋವಿಂದರಾಜನ್, ಬಿ.ಕೆ. ಮಿಶ್ರ, ಎಂ.ಪಿ.ಪೈ, ಎಸ್.ಎನ್. ಕೌಲ್‌ಗುಡ್, ಎಚ್.ಎನ್. ದೊಡ್ಡನಾರಾಣಪ್ಪ ಮುಂತಾದ ವೈದ್ಯ ಮಹಾಶಯರ ವ್ಯಕ್ತಿತ್ವವನ್ನು ಚಿತ್ರಿಸುತ್ತಾರೆ. ಇವರೆಲ್ಲ ವೈದ್ಯ ವೃತ್ತಿಯನ್ನ ಹಣ ಸಂಪಾದನೆಗೆ ಸಾಧನವಾಗಿಸಿ ಬಳಸಿಕೊಂಡವರಲ್ಲ. ಕಷ್ಟದಲ್ಲಿರುವವರ ಸಂಕಟಗಳನ್ನ ಪರಿಹರಿಸುವಂಥವರು, ಬದುಕಿದರೆ ನೆರೆಹೊರೆಯವರಿಗೆ ನೆರವಾಗುವಂತಿರಬೇಕು ಎಂಬುದನ್ನ ಕರ್ತವ್ಯದಲ್ಲಿ ತೋರಿಸಿದಂಥವರು. ಬಾಲ್ಯದಲ್ಲಿಯೇ ಅನಾಥರನ್ನ ಕಷ್ಟಗಳನ್ನ ಕಂಡು ಸಾಹಿತ್ಯ ಮತ್ತು ಧರ್ಮದಲ್ಲಿ ತುಂಬ ಆಸಕ್ತಿ ಬೆಳೆಸಿಕೊಂಡ ಸೋದರಿ ನಿವೇದಿತಾರ ಬಗೆಗೆ ಪ್ರಶಂಸೆಯ ಮಾತುಗಳಾಡಿದ್ದಾರೆ. ಹೀಗೆ ವ್ಯಕ್ತಿಯ ಗುಣ ಮೌಲ್ಯಗಳನ್ನು ಎತ್ತಿಹಿಡಿಯುವ ಬರಹಗಳನ್ನು ಪ್ರಭುಶಂಕರ್ ನೀಡಿದರು. ಅವರ 'ನಮನ'ದಲ್ಲಿನ ವ್ಯಕ್ತಿಚಿತ್ರಗಳನ್ನು ಇಲ್ಲಿ ಹೆಸರಿಸಬಹುದು. ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ, ನಾ. ಕಸ್ತೂರಿ, ಪು.ತಿ.ನ., ತ.ಸು. ಶಾಮರಾಯ ಸುಬ್ಬರಾಯಚಾರ್ಯರು ಸ್ವಾಮಿಸೋಮನಾಥಾನಂದರು, ಸಿದ್ಧಗಂಗೆ ಸ್ವಾಮೀಜಿ ಮುಂತಾದವರ ಸಾಧನೆ ಸಿದ್ಧಿಗಳನ್ನು ಕುರಿತು ಮುಕ್ತಮನಸ್ಸಿನಿಂದ ಸ್ಮರಿಸಿಕೊಂಡಿರುವುದನ್ನು ಇಲ್ಲಿ ಗಮನಿಸಬಹುದು. ಪ್ರಭುಶಂಕರರ ಜೀವನ ಚರಿತ್ರೆ ಪ್ರಕಾರಕ್ಕೆ ಸಂಬಂಧಿಸಿದ ಕೃತಿಗಳನ್ನ ಒಟ್ಟಾರೆಯಾಗಿ ಗಮನಿಸಿದಾಗ ಈ ಅಭಿಪ್ರಾಯಗಳು ವ್ಯಕ್ತವಾಗುವುದು ಸಹಜ.

೧. ಜೀವನ ಚರಿತ್ರೆಗಳಲ್ಲಿ ಸಿದ್ಧಮಾದರಿಯನ್ನ ಮೀರುವ ಕ್ರಮವಿದೆ.

೨. ಬಸವಣ್ಣ, ಅಲ್ಲಮ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಖಲೀಲ್ ಗಿಬ್ರಾನ್, ಕುವೆಂಪು ಮೊದಲಾದ ಹಿರಿಯರ ಸಾಧನೆಗಳನ್ನು ಪರಿಚಯಿಸುತ್ತಲೇ ಅವರನ್ನ ಸಮಕಾಲೀನ ದೊಳಗಿಟ್ಟುನೋಡುವ ಅಧ್ಯಯನ ಕ್ರಮವಿದೆ.

೩. ರಾಮಕೃಷ್ಣ ಪರಮಹಂಸ, ವಿವೇಕಾನಂದ, ಕುವೆಂಪು ವಿಚಾರಧಾರೆ, ಸಾಧಕರ ತಪೋಭೂಮಿಕೆಯು ಕೇವಲ ವಾಹಕವಾಗಿ ಕೆಲಸ ಮಾಡಲಿಲ್ಲ. ಸಾಮಾಜಿಕ ಹೊಣೆಗಾರಿಕೆಯ ಹೊರಚಾಚುಗಳನ್ನ ಧಾರಾಳವಾಗಿ ಪ್ರಕಟಿಸಿವೆ.

೪. ಆರೋಗ್ಯಕರ ಹಾಸ್ಯಪ್ರವೃತ್ತಿ ಮತ್ತು ಪ್ರಶ್ನಿಸುವ ಮನೋಭಾವವಿದೆ.

೫. ಜಗತ್ತಿನ ಚಿಂತನೆಯ ರೀತಿಗಳನ್ನು, ಗದ್ಯಶೈಲಿಗಳನ್ನು ಕನ್ನಡ ಸಾಹಿತ್ಯಕ್ಕೆ ಪರಿಚಯಿಸಿದ್ದು.

ಈ ಎಲ್ಲ ದೃಷ್ಟಿಯಿಂದ ಕನ್ನಡ ಜೀವನ ಚರಿತ್ರೆಗಳ ಪ್ರಕಾರಕ್ಕೆ ಪ್ರಭುಶಂಕರರು ಹೊಸಸ್ವರೂಪವನ್ನೆ ತಂದುಕೊಟ್ಟರೆನ್ನಬಹುದು.

□□□

# ೬. ಎಸ್.ಜಿ. ಸಿದ್ದರಾಮಯ್ಯ ಅವರ ನಾಟಕಗಳಲ್ಲಿ ಸಾಮಾಜಿಕ ಚಿಂತನೆ

– *ಭಾರತಿ ಟಿ.ವಿ.*

ಎಸ್.ಜಿ. ಸಿದ್ದರಾಮಯ್ಯ ಅವರು ಬಹುಮುಖ ಪ್ರತಿಭೆಯನ್ನುಳ್ಳ, ಸೂಕ್ಷ್ಮ ಸಂವೇದನೆಯ ಸಂಸ್ಕೃತಿ ಚಿಂತಕ. ಕಾವ್ಯದ ಮೂಲಕ ತಮ್ಮ ಹೆಗ್ಗುರುತನ್ನು ಸಾಹಿತ್ಯ ಲೋಕದಲ್ಲಿ ಮೂಡಿಸಿದವರು. ನಾಟಕ, ಅನುಭವ ಕಥನ, ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆ ಹಾಗೂ ವಿಮರ್ಶೆ ಹೀಗೆ ಅನೇಕ ವೈಶಿಷ್ಟ್ಯತೆಗಳನ್ನು ತಮ್ಮ ಮನದಾಳದಲ್ಲಿ ಹೊಂದಿರುವ ಚಿಂತಕ. ಯಾವುದೇ ಒಂದು ಪಂಥದಲ್ಲಿ ತಮ್ಮನ್ನು ಗುರುತಿಸಿಕೊಳ್ಳಲು ಒಲ್ಲದ ಈ ಸಮನ್ವಯ ಕವಿ ಪ್ರಧಾನವಾಗಿ ಸಮಕಾಲೀನ ಚಿಂತನೆಗೆ ತಮ್ಮನ್ನು ತೆರೆದುಕೊಂಡಿದ್ದಾರೆ. ಅವರ ಸಾಹಿತ್ಯ ಕೃಷಿಯಲ್ಲಿ 'ಜೋಗಿ ಜಂಗಮ' ಪರಿಕಲ್ಪನೆಯು ಹಾಸುಹೊಕ್ಕಾಗಿದ್ದರು ತಾಯಿ ಕರುಳಿನ ಸ್ಪರ್ಶ ಅವರ ಸಾಹಿತ್ಯ ಅಭಿವ್ಯಕ್ತಿಯಲ್ಲಿ ರೂಪ ಪಡೆದುಕೊಂಡಿದೆ. ಕವಿಯಾಗಿ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡರೂ, ಜನಸಮುದಾಯದಲ್ಲಿ ಜಾಗೃತಿ ಪ್ರಜ್ಞೆ ಮೂಡಿಸುವ ದೃಷ್ಟಿಯಿಂದ ನಾಟಕಕ್ಕೆ ತಮ್ಮನ್ನು ಸಮರ್ಪಿಸಿಕೊಂಡಂತೆ ಕಂಡುಬಂದಿದೆ. 'ದಾಳ', 'ದಂಡೆ' ಮತ್ತು 'ಅನ್ನದಾತ' ಎಂಬ ಮೂರು ನಾಟಕಗಳು ಪ್ರಗತಿಪರ ಚಿಂತನೆ ಮತ್ತು ಸಮಕಾಲೀನ ಭೂಮಿ-ಒಡಲಿನ ವೈರುಧ್ಯಗಳು, ಸಾಂಸ್ಕೃತಿಕ ಸ್ತರದಲ್ಲಿ ಸಂಭವಿಸುತ್ತಿರುವ ಪಲ್ಲಟಗಳು, ಜಾಗತೀಕರಣ, ಉದಾರೀಕರಣ ಮತ್ತು ನಗರೀಕರಣಗಳ ಭರಸೆಳೆತದಿಂದ ಕ್ಷಣಿಕ ಸುಖಕ್ಕೆ ಮಾರುಹೋದ ಮಾನವನ ಸಂದಿಗ್ಧ ಸ್ಥಿತಿಗಳನ್ನು ಈ ಮೂರು ನಾಟಕಗಳಲ್ಲಿ ಅಭಿವ್ಯಕ್ತಿ ಪಡಿಸಿದ್ದಾರೆ.

ಸಿ.ಜಿ.ಕೆ. ಅವರ ಪ್ರಭಾವ ವಲಯಕ್ಕೆ ಒಳಗಾಗಿ ನಾಟಕ ರಚನೆಗೆ ಮುಂದಾದ ಎಸ್.ಜಿ.ಎಸ್. ಅವರು 'ದಾಳ'ವನ್ನು ತಮ್ಮ ಮೊದಲ ನಾಟಕವನ್ನಾಗಿ ರಚಿಸಿದ್ದಾರೆ. ಅವರೇ ಹೇಳುವಂತೆ "ಸಿ.ಜಿ.ಕೆ. ರಂಗಭೂಮಿಯಲ್ಲೊಂದು ಏಕಲವ್ಯ ಪ್ರತಿಭೆ. ಹಲವು ಜನ ಕನ್ನಡ ಕವಿಗಳು ಸಿ.ಜಿ.ಕೆ. ಗರಡಿಯಲ್ಲಿ ನಾಟಕ ರಚನೆಯ ಪ್ರಯೋಗಕ್ಕೆ

ಒಡ್ಡಿಕೊಂಡು ನಾಟಕಕಾರರಾಗಿ ಬೆಳೆದಿರುವುದು ಕಣ್ಣೆದುರಿನ ಸತ್ಯ. ಮೂಲತಃ ಕಾವ್ಯ ಮಾಧ್ಯಮದಲ್ಲಿ ನಿರತನಾಗಿದ್ದ ನನಗೆ ಇಂಥಹ ಒಂದು ಪ್ರಯೋಗದ ಅವಕಾಶ ಅನಿರೀಕ್ಷಿತ ಹಾಗೂ ಅಗತ್ಯವಾದ ಅಪೇಕ್ಷೆ. ರಚನೆ ಮತ್ತು ಓದು ಎರಡರಲ್ಲೂ ಕಾವ್ಯ ಏಕಾಂತದ ಧ್ಯಾನ ಗುಡಿಯ ಕಮ್ಮಟ. ರಂಗರೂಪ ರಚನೆಯಾದರೋ ಲೋಕಾಂತದ ನಡುವಿನಲ್ಲಿ ಸಮುದಾಯದ ಜೊತೆ ಸಂವಾದಿಸುವ ಕರ್ಮ ಭೂಮಿಕೆ ಇದರ ಆಕರ್ಷಣೆ ಬಲವಾಗಿ ಸೆಳೆಯಿತು. ಈ ಸೆಳೆತಕ್ಕೆ ಸಿ.ಜಿ.ಕೆ. ಅವರ ಇದುವರೆಗಿನ ರಂಗಪ್ರಯೋಗಗಳು ಬಹುಮುಖ್ಯ ಕಾರಣ"[7] ಎಂಬ ಅವರ ಮನದಾಳದ ನುಡಿಗಳನ್ನು ಗಮನಿಸಿದರೆ ನಾಟಕ ರಚನೆಯ ಮೂಲ ಆಂತರಿಕ ಪ್ರೇರಣೆ ಸಿ.ಜಿ.ಕೆ. ಅವರೇ ಎಂಬುದು ತಿಳಿಯುತ್ತದೆ. ಸಾಮಾಜಿಕ ಚಿಂತನೆಗೆ ತೆರೆದುಕೊಂಡ ಎಸ್.ಜಿ.ಎಸ್. ಅವರು 'ದಾಳ' ನಾಟಕದ ಮೂಲಕ ಹೊಸ ಚಿಂತನೆಗಳಿಗೆ ಸಮಾಜವನ್ನು ಮುಖಾಮುಖಿಯಾಗಿಸಿದ್ದಾರೆ. ಮಹಾಭಾರತ ಕಥಾ ವಸ್ತುವಿನ ಹಿನ್ನಲೆಯಲ್ಲಿ ಆ ವಸ್ತುವನ್ನೆ ಆಯ್ದುಕೊಂಡರು, ಅದನ್ನು ನಿರ್ವಹಿಸುವಲ್ಲಿನ ಅವರ ನಾಟಕ ಪ್ರತಿಭೆ ಯಶಸ್ಸು ಕಂಡಿದೆ, 'ದಾಳ'ದ ಸೂತ್ರದಾರ ಯಾರು? ಈ ದಾಳಕ್ಕೆ ಕೊರಳೊಡ್ಡುವರು ಯಾರು? ಎಂಬ ಒಂದೇ ನಾಣ್ಯದ ಎರಡು ಮುಖಗಳಿರುವಂತಹ ಪ್ರಶ್ನೆಗೆ ಬಹು ಮಾರ್ಮಿಕವಾಗಿ ಈ ನಾಟಕದಲ್ಲಿ ಉತ್ತರಿಸಿದ್ದಾರೆ.

ಯಾವ ಕಾಲಘಟ್ಟದಲ್ಲೂ ಸಂಭವಿಸುವ 'ಒಳಿತು ಮತ್ತು ಕೆಡುಕು'ಗಳ ಯುದ್ಧ ಮಾರಿಗೆ ಬಲಿಯಾಗುವವರು ಈ ಸಾಮಾನ್ಯ ಜನತೆ ಎಂಬ ಕಟು ಸತ್ಯವನ್ನು ಈ ನಾಟಕ ಎತ್ತಿಹಿಡಿದಿದೆ. 'ಹೆಣ್ಣು' ಪಾತ್ರಧಾರಿಗಳ ಮನೋಭೂಮಿಕೆಯ ಮೂಲಕ ಈ ಯುದ್ಧದ ರಣಮಾರಿಯ ಬಗ್ಗೆ ಬಿಚ್ಚಿಡುವ ನೋವಿನ ಕಥಾ ಮಾಲೆಗಳು ಶ್ರೀಸಾಮಾನ್ಯರ ಬದುಕನ್ನು ಅನಾವರಣ ಮಾಡುತ್ತವೆ. ಕೃಷ್ಣನ ಕುತಂತ್ರಗಳಿಗೆ ಬಲಿಯಾಗುವ ಎಷ್ಟೋ ಅಮಾಯಕ ಜೀವಿಗಳು ನೀರಿನ ಗುಳ್ಳೆಯಂತೆ ಕರಗುತ್ತಾರೆ. ಆದರೆ ಕೃಷ್ಣನ ಕುಟಿಲ ರಾಜಕೀಯ ನೀತಿಗಳಲ್ಲೂ ಮಿಂಚಿ ಮರೆಯಾಗುವ ಪಾತ್ರ ಕರ್ಣ, ಸಾಯಲು ಆಗದೆ ಬದುಕಲು ಆಗದೆ ವಿಚಿತ್ರ ನೋವಿನ ಸಂಕಟದಲ್ಲಿ ನರಳುವ ಈ ಪಾತ್ರವನ್ನು ಎಸ್.ಜಿ.ಎಸ್. ಅವರು ತಮ್ಮ ನಾಟಕದಲ್ಲಿ ಬಹು ಸೊಗಸಾಗಿ ಚಿತ್ರಿಸಿದ್ದಾರೆ.

ಮಹಾಯುದ್ಧದಿಂದ ಸಂಭವಿಸಿದ ದುರಂತವನ್ನು ಕುವೆಂಪುರವರು ಶ್ರೀಸಾಮಾನ್ಯರ ಸಾವು ನೋವಿನ ಮೂಲಕ 'ಶ್ಮಶಾನ ಕುರುಕ್ಷೇತ್ರ' ನಾಟಕದಲ್ಲಿ ತಿಳಿಸಿದ್ದರೆ, ಎಸ್.ಜಿ.ಎಸ್. ಅವರ ಈ 'ದಾಳ' ನಾಟಕವು ಯುದ್ಧ ನಂತರದ

ಸಂದರ್ಭಗಳನ್ನು ಮನಮುಟ್ಟವಂತೆ ಕಟ್ಟಿಕೊಡುತ್ತದೆ. ಅದರ ಪ್ರತಿರೂಪ ಎಂಬಂತೆ, ಈ ಆಕಾರಳ ವಿಕರಾಳರ ಪಾತ್ರವನ್ನು ಸೃಷ್ಟಿಸಿದ್ದಾರೆ. ಆಳುವ ಸರ್ಕಾರಗಳು ಜಾಗತೀಕರಣ ಉದಾರೀಕರಣ ಮತ್ತು ನಗರೀಕರಣಗಳ ಒಲವನ್ನು ಹೊಂದಿ, ಜೀವ ಬದುಕಲು ಬೇಕಾದ ಆಹಾರ ಬೆಳೆಗಳನ್ನು ಬೆಳೆಯುವ ಬದಲಾಗಿ ಜೀವನಾಶಕಕ್ಕೆ ಕಂಟಕವಾದ ಮದ್ದು–ಗುಂಡುಗಳು, ಚಾಕು–ಕತ್ತಿಗಳ ಆಮದುಗಳಿಗೆ ಹೇಗೆ ಮುಕ್ತವಾಗಿವೆ ಎಂಬುದನ್ನು ತೋರಿಸುತ್ತಾರೆ.

'ಭಾನುಮತಿ ಮತ್ತು ಸಿರಿಯಜ್ಜಿ' ಪಾತ್ರವನ್ನು ದಾಳ ನಾಟಕದಲ್ಲಿ ಪರಿಚಯ ಮಾಡಿಕೊಳ್ಳುವ ಮೂಲಕ ಹೆಣ್ಣಿನ ಬದುಕನ್ನು ಚಿತ್ರಿಸಿ, ಹೆಣ್ಣಿನ ನೋವು–ನಲಿವುಗಳನ್ನು ಸಹೃದಯರ ಮುಂದಿಡುತ್ತಾರೆ. ಭಾನುಮತಿ ದುರ್ಯೋಧನನ ಆಗಮಿಕೆಯನ್ನು ಎದುರು ನೋಡುತ್ತಾ ಕಾಲದೂಡುವ ಸಂದರ್ಭಗಳಿಗೆ ಸಿರಿಯಜ್ಜಿಯ ಸಮಯೋಜಿತ ಬಾಳಿನ ಉಪದೇಶ ಬಹು ವಿಸ್ತಾರವಾಗಿಯೇ ಈ ನಾಟಕದಲ್ಲಿ ಹರಡಿಕೊಂಡಿದೆ. ಭಾನುಮತಿಯು ತನ್ನ ಪತಿಯ ಆಗಮನವನ್ನು ನಾಟಕದ ಪ್ರಾರಂಭದಿಂದ ಅಂತ್ಯದವರೆಗೂ ಅನುಭವಿಸುತ್ತಾಳೆ. ಆದರೆ, ಅವಳ ಮನದಾಳದ ಬಯಕೆ ಈಡೇರುವುದೇ ಇಲ್ಲ. ಈ ಸಂಗತಿಯನ್ನು ಗಮನಿಸಿದರೆ ಸಮಾಜವು ಸ್ತ್ರೀಗೆ ಕೊಟ್ಟಿರುವ ಸ್ಥಾನ–ಮಾನಗಳ ಅರಿವು ಬಯಲಾಗುತ್ತದೆ, ಇಂತಹ ಅಮಾನವೀಯ ಸಾಮಾಜಿಕತೆಯ ವಿರುದ್ಧ ನಾಟಕಕಾರರು ದನಿ ಎತ್ತಿದ್ದಾರೆ. ಎಸ್.ಜಿ.ಎಸ್. ಅವರ ಕಾವ್ಯಗಳಲ್ಲಿ ಜೋಗಿ–ಜಂಗಮರ ಪರಿಕಲ್ಪನೆಯು ಹೇಗೆ ಸಾತ್ವಿಕ ಬದುಕನ್ನು ಬಯಸುತ್ತದೆಯೋ ಅದರ ಪ್ರತಿರೂಪವಾಗಿ ನಾಟಕಗಳಲ್ಲಿ ಸಿರಿಯಜ್ಜಿಯ ಬದುಕು ಕಂಡುಬಂದಿದೆ. ಹಿಂದಿನ–ಮುಂದಿನ ಆಗು–ಹೋಗುಗಳ ಬಗ್ಗೆ ಚಿಂತಿಸುವ ಸಿರಿಯಜ್ಜಿಯು ಕೃಷ್ಣನ ಕುಟಿಲ ತಂತ್ರಗಾರಿಕೆಯನ್ನು ತಿಳಿಸುವುದರೊಂದಿಗೆ ಇಡೀ ಮಹಾಭಾರತದ ಯುದ್ಧಕ್ಕೆ ಯಾರು ಕಾರಣಯೆಂಬುದನ್ನು ತಿಳಿಯಪಡಿಸುತ್ತಾಳೆ, ಕರ್ಣನ ದುರಂತಕ್ಕೆ ಕೃಷ್ಣ ಹೂಡಿದ 'ದಾಳ'ವನ್ನು ಪ್ರಶ್ನಿಸುತ್ತಾಳೆ, 'ರಾಬಿಯಾ' ಮನುಕುಲದ ಏಳಿಗೆಯನ್ನು ಬಯಸಿ ಒಂದು ಕೈಯಲ್ಲಿ ಬೆಂಕಿ ಮತ್ತೊಂದು ಕೈಯಲ್ಲಿ ನೀರು ಹಿಡಿದು ಸಾಮಾಜಿಕ ಸಮಾನತೆಯನ್ನು ಸಾರುತ್ತಾ ಅದೃಷ್ಯಳಾಗುತ್ತಾಳೆ, ಒಟ್ಟಾರೆಯಾಗಿ 'ಶಶಿಧರ ಬಾರಿಘಾಟ'ಅವರು ಅಭಿಪ್ರಾಯ ಪಡುವಂತೆ ಈ 'ದಾಳ'ನಾಟಕವು "ಇಡೀ ವಿಶ್ವ ವಿದ್ಯಮಾನವನ್ನು ಹೆಣ್ಣಿನ ಮೂಲಕ ನೋಡುವ ಪ್ರಯತ್ನ, ಸಿದ್ದರಾಮಯ್ಯನವರ ಹೆಂಗರಳನ್ನು ಮತ್ತೆ–ಮತ್ತೆ ಎತ್ತಿ ತೋರುತ್ತದೆ. ಆದರೆ ಇಲ್ಲಿಯ ಹೆಣ್ಣು ಅಸಹಾಯಕಳಲ್ಲ, ಅಬಲೆಯಲ್ಲ, ಕ್ರಿಯಾತ್ಮಕವಾದ, ಶಕ್ತಿಯುತವಾದ ಹೆಣ್ಣು, ಗಂಡು ಎಸೆಯುವ ಎಲ್ಲಾ ದಾಳಗಳಿಗೂ ಪ್ರತಿದಾಳ ಹುರುಳಿಸಲು ಶಕ್ತಿಯುಳ್ಳ ಹೆಣ್ಣು!"[೨] ಎಂಬ ಅಂಶವನ್ನು ಗಮನಿಸಿದರೆ ನಾಟಕಕಾರರು ಸ್ತ್ರೀಗೆ ನೀಡಿರುವ ಸ್ಥಾನ–ಮಾನದ ಅರಿವುಂಟಾಗುತ್ತದೆ.

ಎಸ್.ಜಿ.ಎಸ್. ಅವರು ಕಾ.ತ. ಚಿಕ್ಕಣ್ಣನವರ 'ದಂಡೆ' ಕಾದಂಬರಿಯ ಸ್ಪರ್ಶಕ್ಕೆ ಸಿಲುಕಿ, ಅದನ್ನು 'ದಂಡೆ' ನಾಟಕವಾಗಿ ರೂಪಾಂತರಿಸಿ ರಂಗ ಸಜ್ಜಿಕೆಗೆ ಸಿದ್ಧಪಡಿಸುವ ಕಾರ್ಯಕ್ಕೆ ತೊಡಗಿ, ಅದರಲ್ಲಿ ಯಶಸ್ವಿಯಾದ ನೆನಪಿನ ಪುಟಗಳ ಮಾಲೆಯೆ ಈ 'ದಂಡೆ'ನಾಟಕ ಎಂಬುದು ತಿಳಿಯುತ್ತದೆ. 'ದಂಡೆ'ಯು ಹೆಣ್ಣೊಬ್ಬಳ ಮನಸ್ಸಿನ ವಿವಿಧ ಮಜಲುಗಳ ಪಲ್ಲಟಗಳನ್ನು ಕೇಂದ್ರೀಕರಿಸಿ, ಆ ಕೇಂದ್ರದ ಮೂಲಕವೇ ವಿವಿಧ ಪಾತ್ರಗಳು ರೆಕ್ಕೆ–ಪುಕ್ಕ ಕಟ್ಟಿಕೊಳ್ಳುವ ವಿಶಿಷ್ಟ ಕಥನದ ನಾಟಕ. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಕಾಲಘಟ್ಟಗಳನ್ನು ಸಂದರ್ಭೋಚಿತವಾಗಿ ಹಿಡಿದಿಡುವ ಪ್ರಯತ್ನ ಸಾಕಾರಗೊಂಡಿದೆ. 'ಅವ್ವಯ್ಯ' ಎಂಬ ಸ್ತ್ರೀಪಾತ್ರ ಇಡೀ ನಾಟಕದ ಕೇಂದ್ರ ಬಿಂದುವಾಗಿದ್ದು, ಈ ಕೇಂದ್ರ ಪರಿಧಿಯ ಸುತ್ತ ಇತರ ಪಾತ್ರಗಳು ಗಿರಕಿ ಹೊಡೆಯುತ್ತಾ ಅವಳ ಪ್ರತಿಕ್ರಿಯೆಗೆ ಹಂಬಲಿಸುತ್ತವೆ. ಅವ್ವಯ್ಯಳ ಬಾಲ್ಯ ಯೌವ್ವನ ಮತ್ತು ಮುಪ್ಪು ಈ ನಾಟಕದಲ್ಲಿ ಚಿತ್ರಿತಗೊಂಡಿದೆ.

ರಾಯಣ್ಣ ಈ ನಾಟಕದ ನಾಯಕ, ಸ್ವಾತಂತ್ರ್ಯ ಪೂರ್ವದ ಚರಿತ್ರೆಯು ಈತನ ಮೂಲಕವೇ ನಾಟಕದಲ್ಲಿ ಗರಿ ಬಿಚ್ಚಿಕೊಳ್ಳುತ್ತದೆ. ಪರಕೀಯರ ಯುದ್ಧದ ಹೋರಾಟದಲ್ಲಿ ಅದೆಷ್ಟೋ ಮಹಾನ್ ಚೇತನಗಳ ತನು–ಮನ, ಬಯಕೆ–ಬವಣೆಗಳೂ ಬ್ರಿಟಿಷರ ಗುಂಡಿಗೆ ನುಚ್ಚುನೂರಾಗಿ ಹುತಾತ್ಮರಾದರು ಎಂಬುದಕ್ಕೆ ಸ್ಪಷ್ಟ ನಿದರ್ಶನವಾಗಿ ರಾಯಣ್ಣನ ಬದುಕು ಕಂಡುಬಂದಿದೆ. ಗಾಂಧೀಜಿಯ ಕರೆಗೆ ಇಡೀ ರಾಷ್ಟ್ರವೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರೆ, 'ದಂಡೆ' ನಾಟಕ ಸಂಚರಿಸುವ ಪ್ರದೇಶದಲ್ಲಿ ಸ್ವಾತಂತ್ರ್ಯದ ಕಿಚ್ಚಿನ ಜೊತೆಗೆ ಆಧ್ಯಾತ್ಮಿಕ ಚಿಂತನೆಯ ಮೂಲಕ ಸಮಾನ ಸಮಾಜ ನಿರ್ಮಿಸಲು ಮುಂದಾಗಿರುವ 'ಗೊರವಯ್ಯ'ನ ಚಿಂತನೆ ಚಿಲುಮೆಯ ಮೇಲೆ ಈ ಪ್ರದೇಶ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಸಜ್ಜುಗೊಂಡಿದೆ. ಪೋಲಿಸ್ ಪೇದೆಗಳ ನಡುವಿನ ಸಂಭಾಷಣೆ ಮತ್ತು ಘನಲಿಂಗನ ಪಾತ್ರದ ಸಂದರ್ಭಗಳು ಹಾಸ್ಯಕ್ಕೆ ಎಡೆಮಾಡಿಕೊಟ್ಟರು ಅದರಿಂದ ಹೊರಬರುವ ಧ್ವನಿಯ ಮಹತ್ವ ನಾಟಕದ ಆಶಯವನ್ನು ಪುಷ್ಟೀಕರಿಸುತ್ತಾ ಸಾಗುತ್ತದೆ.

ಅವ್ವಯ್ಯಳ ಬಾಲ್ಯದ ನೆನಪಿನ ಬುತ್ತಿ ಸ್ತ್ರೀಯನ್ನು ಸಮಾಜ ನೋಡುವ ವಿಭಿನ್ನ ದೃಷ್ಟಿಕೋನವನ್ನು ಎತ್ತಿ ತೋರಿಸುತ್ತದೆ. ಲಿಂಗ–ಅಸಮಾನತೆಯಿಂದ ಸ್ತ್ರೀಯಾಗಿ ಜನಿಸಿದ ಪ್ರತಿಯೊಂದು ಹೆಣ್ಣು ಅನುಭವಿಸುವ ತವಕ–ತಲ್ಲಣಗಳನ್ನು ಈ ನಾಟಕ ಹಿಡಿದಿಟ್ಟಿದೆ. ತನ್ನ ಮನಸ್ಸಿನ ಪ್ರೀತಿ ಭೂಮಿಕೆಯ ಮೊಗ್ಗಾದ ಊರಾಚೆಯ ಚಂದ್ರನನ್ನು ಪಡೆಯಲು ಆಗದೆ, ಸಾಮಾಜಿಕ ಕಟ್ಟಳೆಯ ಬಂಧನಕ್ಕೆ ಒಳಗಾಗಿ ರಾಯಣ್ಣನ್ನು ಮದುವೆಯಾದರು ಸುಖ–ಸಂಸಾರ ನಡೆಸಲು ಸಾಧ್ಯವಾಗದೆ ಅನುಭವಿಸುವ

ನರಕಯಾತನೆ, ಬಾಳಿಗೆ ಬೆಳಕಾಗಬೇಕಾದ ಮಗ ಅಪ್ಪನ ದಾರಿ ಹಿಡಿದಾಗ ತಾಯಿ ಕರುಳಿನ ಸಂಕಟ, ಹೃದಯ ಕಲಕುವ ಸನ್ನಿವೇಶಗಳು ಅವ್ವಯ್ಯಳ ಪಾತ್ರದ ಮೂಲಕ ನಾಟಕಕಾರರು ಸಹೃದಯರ ಮನಪಟಲದಲ್ಲಿ ಉಳಿಯುವಂತೆ ಮಾಡಿದ್ದಾರೆ. ಗೊರವಯ್ಯ ಮತ್ತು ಬೀರಪ್ಪ ಈ ನಾಟಕದ ಪ್ರಮುಖ ಪಾತ್ರಗಳು.

ಜೊತೆಗೆ ಅವ್ವಯ್ಯಳ ಪ್ರತಿಕ್ರಿಯೆಯಲ್ಲಿ ಸಾಗುವ ಸೌಮ್ಯ ಪಾತ್ರಗಳು, ಗೊರವಯ್ಯ ಗಾಂಧಿ ಕಂಡ ಸ್ವರಾಜ್ಯದ ಕನಸನ್ನು ಸ್ವಾತಂತ್ರ್ಯ ಪ್ರೇಮಿಗಳಲ್ಲಿ ಬಿತ್ತಿ ಅದು ಸಾಕಾರಗೊಳ್ಳಲು ಪ್ರೇರೇಪಿಸುವ ಒಬ್ಬ ಜನನಾಯಕ. ಸ್ವಾತಂತ್ರ್ಯನಂತರ ಸಮಾಜದಲ್ಲುಂಟಾದ ಸ್ವಾರ್ಥದ ಪರಿ, ರಾಜಕಾರಣಿಗಳ ವಿಷವರ್ತುಲದ ಅಪವಿತ್ರ ಮೈತ್ರಿ ಈ ಸ್ವರಾಜ್ಯದ ಕನಸನ್ನು ಭಗ್ನಗೊಳಿಸುತ್ತದೆ, ಈ ಹತಾಶೆಯಿಂದ ಬಾಯಿ ಇದ್ದರು ಮಾತನಾಡದೆ ಮೂಕನಾಗುತ್ತಾನೆ ಗೊರವಯ್ಯ. ಬೀರಪ್ಪನಂತು ಗೊರವಯ್ಯ ಮತ್ತು ಅವ್ವಯ್ಯಳರ ಕೆಲಸ–ಕಾರ್ಯಗಳಿಗೆ ಹೆಗಲು ಕೊಟ್ಟು ದುಡಿಯುವ ನಿಷ್ಠಾವಂತ ಸೇವಕನಂತೆ ಕಂಡರೂ ಅವನ ನಿಸ್ವಾರ್ಥದ ದುಡಿಮೆ ಅವನನ್ನು ಮೇಲೆತ್ತುತ್ತದೆ. ಬದುಕಿನ ಉದ್ದಕ್ಕೂ ಸಂಭವಿಸಿದ ಸಾವು–ನೋವುಗಳನ್ನು ಮನಸ್ಸಿನಲ್ಲಿ ನುಂಗಿಕೊಂಡು ಕಾಲ ದೂಡುವ ಬೀರಪ್ಪ ನಾಟಕದ ಪ್ರಮುಖ ಪಾತ್ರವಾಗಿ ಕಂಡುಬರುತ್ತಾನೆ. ಪುರುಷಪ್ಪನಂತಹ ಸಮಯ ಸಾಧಕ ರಾಜಕಾರಣಿಗಳು ಎಂತಹ ಕಾಲಕ್ಕೂ ಇದ್ದೆ ಇರುತ್ತಾರೆ ಎಂಬ ವಾಸ್ತವವನ್ನು ನಾಟಕಕಾರರು ಹೇಳಲು ಮರೆಯುವುದಿಲ್ಲ. ಪ್ರಭುಸ್ವಾಮಿಯಂತಹ ಸಾಮಾಜಿಕ ಸಮಾನತೆಯ ಜೀವಿ, ಈ ನಾಟಕದಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಗಳಿಸಿ ಕೆಳಜಾತಿಯ ಗಿರಿಜಾಳನ್ನು ಅಂತರ್‌ಜಾತಿ ವಿವಾಹವಾಗುವ ಬಯಕೆಯೊಂದಿಗೆ ಮೇಲ್ ಪಂಕ್ತಿ ಸ್ಥಾನವನ್ನು ಪಡೆದುಕೊಳ್ಳುತ್ತಾನೆ. ಈ ಎಲ್ಲಾ ಪಾತ್ರಗಳನ್ನು ಗಮನಿಸಿದಾಗ ಒಂದು ಪಾತ್ರಕ್ಕೂ ಮತ್ತೊಂದು ಪಾತ್ರಕ್ಕೂ ಸಂಬಂಧವಿದ್ದು ಸಮನ್ವಯತೆಯಿಂದ ಮುಂದುವರೆಯುವ ಸಂದರ್ಭಗಳೇ ಅತಿ ಹೆಚ್ಚು ಎಂದು ಹೇಳಬಹುದು.

ಒಟ್ಟಿನಲ್ಲಿ "ಒಂದು ಕಾದಂಬರಿಯ ವಸ್ತುವನ್ನು ಮುರಿದು ಅದರ ಮೂಲಕ ದ್ರವ್ಯದ ಜಾಡು ಹಿಡಿದು 'ದಂಡೆ'ನಾಟಕವನ್ನು ಮತ್ತೆ ಕಟ್ಟಿರುವ ರೀತಿ ಅನನ್ಯವಾದುದು. ಅವ್ವಯ್ಯ, ಗೊರವಯ್ಯ, ಪುರುಷಪ್ಪ, ಸಂಗವಕ್ಕ, ರಾಯಣ್ಣ, ಘನಲಿಂಗ, ಪ್ರಭುಸ್ವಾಮಿ, ಗಿರಿಜಾ ಇವರೆಲ್ಲ ನಮ್ಮ ಗ್ರಾಮ ಸಮಾಜದ ಪ್ರತಿಬಿಂಬಗಳು. ಕರಡಿ ಇಡೀ ನಾಟಕದ ಸಾಕ್ಷಿ ಪ್ರಜ್ಞೆಯಾಗಿ ಪರಂಪರೆಯ ಕೊಂಡಿಯಾಗಿ ಮೂಡಿಬರುತ್ತಲೇ ಗುರುರಾಜನಿಗೆ ಮುಂಗಾಣಿಕೆಯ ಒತ್ತಾಸೆಯಾಗಿ ನಿಲ್ಲುವ ವಿಸ್ಮಯ ಇಡೀ ನಾಟಕಕ್ಕೆ ಒಟ್ಟಿಗೆ ಪುರಾಣ ಪ್ರಜ್ಞೆಯನ್ನು ಜೊತೆಗೆ ಆಧುನಿಕ ಸಂದರ್ಭವನ್ನು ಪ್ರತಿಬಿಂಬಿಸುತ್ತದೆ"[೩] ಎಂಬ ನಿಲುವು ಒಪ್ಪಿತವಾದುದು.

'ಅನ್ನದಾತ' ನಾಟಕವು ಭೂಮಿ ಮತ್ತು ರೈತನ ಬಗೆಗಿನ ಸುಧಾರಣೆಯ ಪರಿಕಲ್ಪನೆಯ ಹಿನ್ನಲೆಯಲ್ಲಿ ನಾಟಕಕಾರರ ಅಂತಃಕರಣದ ಹೃದಯದಲ್ಲಿ ಚಿಗುರೊಡೆದ ತಾಯಿ ಕರುಳಿನ ನಾಟಕ. ಬೀದಿ ನಾಟಕದ ಹಿನ್ನಲೆಯಲ್ಲಿ ರೂಪ ತಾಳಿದ ಈ ನಾಟಕವು ರಂಗ ಪ್ರಯೋಗದಲ್ಲಿ ಯಶಸ್ವಿಯಾಗಿ ಆಳುವ ಸರ್ಕಾರಗಳು ರೈತರತ್ತ ಕಣ್ಣು ತೆರೆಯುವಂತೆ ಮಾಡುವಲ್ಲಿ ಸಫಲವಾಯಿತು. ಬಹುರಾಷ್ಟ್ರೀಯ ಕಂಪನಿಗಳ ಪ್ರಭಾವದಿಂದ ನೆಲದ ಮೂಲಸತ್ವ ನಾಶವಾಗಿ ಜೀವವಿನಾಶಕವಾದ ರಸಗೊಬ್ಬರ, ನಪುಂಸಕ ಬಿತ್ತನೆಬೀಜ ಹಾವಳಿಯಿಂದ ಒಂದಲ್ಲಾ ಒಂದು ರೀತಿಯಲ್ಲಿ ರೈತ ಮತ್ತು ಭೂಮಿ ಅನುಭವಿಸುತ್ತಿರುವ ನರಕಯಾತನೆಯನ್ನು 'ಅನ್ನದಾತ' ನಾಟಕವು ತೆರೆದಿಡುತ್ತದೆ. ಕುವೆಂಪುರವರು ತಮ್ಮ 'ಧನ್ವಂತರಿ ಚಿಕಿತ್ಸೆ' ಕಥೆಯಲ್ಲಿ ಶ್ರೀಸಾಮಾನ್ಯನ ಅರಣ್ಯರೋಧನ ಮುಗಿಲು ಮುಟ್ಟಿರುವುದನ್ನು ಪೂರ್ವಿಕವಾಗಿ ಚಿತ್ರಿಸಿ, ಅವನ ಬಗೆಗೆ ಕೊರಗುತ್ತಾರೆ. ರೈತನ ಅಸಹಾಯಕ ಸ್ಥಿತಿ ಯಾವ ಹಂತ ತಲುಪಿದೆ ಎಂಬುದನ್ನು ಮನದಟ್ಟು ಮಾಡಿಕೊಡುತ್ತಾರೆ. ಈ ಕಥೆಯಲ್ಲಿ ವಿಶ್ವಾಮಿತ್ರ– ಪರಶುರಾಮ ಮುನಿಗಳಿಗೆ ಮುಖಾಮುಖಿಯಾಗಿಸಿದ ಭೂಲೋಕದ ರೈತನ ಘೋರ ಆಕ್ರಂದನದ ಕೂಗು, ಆ ಕೂಗಿಗೆ ದನಿಗೂಡಿಸುತ್ತಾ ಮುಗಿಲು ಮುಟ್ಟುವ ಆ ರೈತನ ಹೆಂಡತಿಯ ನೋವಿನ ಕೂಗು ಎಂತಹವರನ್ನು ದಿಗ್ಭ್ರಾಂತಗೊಳಿಸುತ್ತದೆ. ಆತನ ಹೆಂಡತಿ ಮುನಿಗಳನ್ನು "ಕಂಡೊಡನೆ ಚಿತ್ತಾಕಾರ ಮಾಡಿ ಕೈ ಜೋಡಿಸಿ ಸಾಲ ಮಾಡಿಯಾದರು ತಂದು ಕೊಡುತ್ತಾರೆ! ಕೂಸನ್ನು ನೋಡಿಯಾದರು ಕನಿಕರ ತೋರಿಸಿ"[೪] ಎಂದು ಅವಲತ್ತುಕೊಳ್ಳುವ ಆ ಅಸಹಾಯಕ ಹೆಣ್ಣಿನ ಪರಿಸ್ಥಿತಿ ರೈತನು ಸಾಲ–ಸೋಲ ಮಾಡಿ, ವ್ಯವಸಾಯ ಕೈಕೊಟ್ಟು, ಭೂಮಿ ತಾಯಿ ಮುನಿಸಿಕೊಂಡರೆ ಅವನ ಸ್ಥಿತಿ ಹೇಗಿರುತ್ತದೆ ಎಂಬಂತಹ ಪರಿಸ್ಥಿತಿ ಪ್ರಸ್ತುತ ನಮ್ಮ ರೈತರಿಗೆ ಒದಗಿದೆ.

ಈ ನಾಟಕದ ಒಂದು ಮಜಲು 'ಕ್ರೌರ್ಯ' ಮತ್ತೊಂದು ಮಜಲು 'ಪುನರುತ್ಥಾನ'ದಿಂದ ಕೂಡಿದೆ. ಮೊದಲನೆಯದರಲ್ಲಿ ಹೈಟೆಕ್ ತಂತ್ರಜ್ಞಾನ, ಕ್ರಿಮಿನಾಶಕಗಳು, ಟ್ರ್ಯಾಕ್ಟರ್‌ಗಳು, ರಸಗೊಬ್ಬರಗಳು, ಬ್ಯಾಂಕ್ ಅಧಿಕಾರಿಗಳ ಅಮಾನವೀಯ ನಡತೆ ಈ ನಾಟಕವನ್ನು ವಿಭಿನ್ನ ನೆಲೆಗಳಲ್ಲಿ ಅರಿಯುವಂತೆ ಮಾಡುತ್ತವೆ, ರಸಗೊಬ್ಬರಗಳ ಜೀವ ವಿರೋಧಿ ನೆಲೆಯನ್ನು ನಾಟಕಕಾರರು ಪ್ರೇಕ್ಷಕನ ಮನ ಮುಟ್ಟುವಂತೆ ಚಿತ್ರಿಸಿದ್ದಾರೆ. ರೈತನ ಬೆಳವಣಿಗೆ ಮತ್ತು ಭೂತಾಯಿಯ ಫಲವತ್ತತೆಗೆ ಸಾವಯವ ಅಥವಾ ನೈಸರ್ಗಿಕ ಉಳಿಮೆಯೇ ಮದ್ದು ಎಂಬುದನ್ನು ತಿಳಿಸಿ, ಸಿರಿಯಜ್ಜಿಯೇ ಈ ಭೂತಾಯಿಯ ಒಡಲನ್ನು ಸಂರಕ್ಷಿಸುವ ಮಾತೆಯಾಗಿ ಕಂಡುಬಂದಿದ್ದಾಳೆ.

**"ಅನ್ನ ಬೆಳೆಯಲು ಚಿನ್ನ ಮಾರಿದ**
**ಗೊಬ್ಬರಕ್ಕಾಗಿ ಸಾಲ ಮಾಡಿದ**
**ಮಾಡಿದ ಸಾಲ ತಿರಿಸದಾದ**
**ಬೀಜ ಕೊಳ್ಳಲು ಸಾಲ ಮಾಡಿದ**
**ಟ್ರ್ಯಾಕ್ಟರ್‌ಗಾಗಿ ಸಾಲ ಮಾಡಿದ**
**ಮಾಡಿದ ಸಾಲ ತಿರಿಸದಾದ**
**ನೇಣಿಗೆ ತಾನು ಶರಣಾದ"**[೫]

ಈ ಸಂಗತಿಯನ್ನು ಗಮನಿಸಿದರೆ ಆಧುನಿಕತೆಯ ಭರಾಟೆಯಲ್ಲಿ ಹೆಚ್ಚು ಫಲವನ್ನು ಪಡೆಯಲು ಯಾವ-ಯಾವ ರೀತಿ ರೈತನು ಆಳುವ ಸರ್ಕಾರಗಳ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಮೋಸಜಾಲಗಳ ಹಿಡಿತಕ್ಕೆ ಸಿಲುಕಿ, ಭೂಮಿಯನ್ನು ಉಳುಮೆ ಮಾಡಲು ಪಡುವ ಕಷ್ಟ, ಕೊನೆಗೆ ಆತ್ಮಹತ್ಯೆಗೆ ಶರಣಾಗುವ ಸಂದಿಗ್ಧ ಪರಿಸ್ಥಿತಿಯನ್ನು ಈ ನಾಟಕದಲ್ಲಿ ಕಾಣಬಹುದಾಗಿದೆ.

ಪರಕೀಯ ಸಂಸ್ಕೃತಿಯ ಪ್ರತೀಕವಾದ 'ಬ್ಯಾಂಕ್ ಅಧಿಕಾರಿಗಳು' ನಾಟಕವನ್ನು ಪ್ರವೇಶಿಸುವುದರೊಂದಿಗೆ ರೈತನ ಜೀವನ-ಮರಣದ ಶಾಸನವನ್ನು ನಾಟಕ ನಿರ್ಧರಿಸಿದರೆ, ಎರಡನೆಯ ದೃಶ್ಯದಲ್ಲಿ ಮೂಡಿರುವ ಸಿರಿಯಜ್ಜಿ ಪಾತ್ರ ರೈತ ಮತ್ತು ಭೂಮಿಯ ಅಭಿವೃದ್ಧಿಯನ್ನು ಬಯಸುವ ಮೂಲಕ ನಾಟಕದ ಆಶಯ ಏನು ಎಂಬುದಕ್ಕೆ ಉತ್ತರಿಸುತ್ತದೆ. ಒಟ್ಟಾರೆಯಾಗಿ ಎಸ್.ಜಿ.ಎಸ್. ಅವರ ಮೂರು ನಾಟಕಗಳಾದ 'ದಾಳ', 'ದಂಡೆ', 'ಅನ್ನದಾತ' ರಂಗಪ್ರಯೋಗಶೀಲತೆಗೆ ಒಗ್ಗಿಕೊಂಡು, ಬೀದಿ ನಾಟಕಗಳ ಮೂಲಕ ಯಶಸ್ವಿಯಾದ ನಾಟಕಗಳು ಮೂರು ಕೂಡಾ ಸಾಮಾಜಿಕ ವಸ್ತುವನ್ನು ಆಯ್ಕೆ ಮಾಡಿಕೊಂಡರೂ, ತಲುಪುವ ಗುರಿ ಒಂದೇ ಹಾಗೂ ಚಲಿಸುವ ಸಂದರ್ಭದಲ್ಲಿ ತಳೆಯುವ ಮಾರ್ಗಗಳು ಮಾತ್ರ ಭಿನ್ನ. ಈ ವಿಭಿನ್ನತೆಯೆ ಪ್ರತಿಯೊಂದು ನಾಟಕವನ್ನು ವೈಶಿಷ್ಟ್ಯ ಪೂರ್ಣವಾಗಿಸಿವೆ. ಹೀಗೆ ಈ ಮೂರು ಬೀದಿ ನಾಟಕಗಳು ವಿಭಿನ್ನ ಶೈಲಿಯಲ್ಲಿ ಬಳಕೆಗೊಂಡು ತಮ್ಮ ಹಿನ್ನೆಲೆಗೆ ಒಪ್ಪಿತವಾದ ಗ್ರಾಮೀಣ ಶೈಲಿಯ ಆಡು-ನುಡಿಯ ಮೂಲಕ ಓದುಗರಿಗೆ ಮತ್ತು ಪ್ರೇಕ್ಷಕರಿಗೆ ಬಹುಸುಲಭವಾಗಿ ಅರ್ಥವಾಗುವಂತೆ ಮೂಡಿ ಬಂದಿವೆ. ಸರ್ಕಾರಗಳು ಸಮಕಾಲೀನ ಸಾಮಾಜಿಕ ಸಾವಯವ ವಲಯಗಳಿಗೆ ಒಪ್ಪಿತವಾಗುವ ಕಾಯ್ದೆ-ಕಟ್ಟಳೆಗಳನ್ನು ಜಾರಿಗೊಳಿಸಬೇಕೆಂದು ಈ ನಾಟಕಗಳ ಮೂಲಕ ಎಸ್.ಜಿ.ಎಸ್. ರವರು ಒತ್ತಾಯಿಸಿದ್ದಾರೆ. ವಿಘಟನೆಗೊಂಡಿರುವ ಸಾಮಾನ್ಯ ರೈತರ ಬದುಕನ್ನು ಸುಧಾರಿಸಲು, ಈ ರೈತರು ಸಂಘಟನೆಗೊಳ್ಳಲು ಕರೆ ನೀಡಿ, ಆ ಸಂಘಟನೆಯ ಮೂಲಕವೇ ತಮ್ಮ ಅಭಿವೃದ್ಧಿ ಸಾಧಿಸಬೇಕೆಂದು ರೈತರನ್ನು ಜಡತ್ವದಿಂದ ಎಚ್ಚರಿಸುವ

ಕೆಲಸಮಾಡಿದ್ದಾರೆ. ಈ ಎಲ್ಲಾ ಹಿನ್ನಲೆಗಳಲ್ಲಿ ಬಡ ಕೃಷಿಕರ ಬಗೆಗೆ ಆಳುವ ಸರ್ಕಾರಗಳ ಕಣ್ಣು ತೆರೆಸುವ ಕೆಲಸಗಳನ್ನು ತಮ್ಮ ನಾಟಕಗಳ ಮೂಲಕ ಎಸ್.ಜಿ. ಸಿದ್ದರಾಮಯ್ಯ ಅವರು ಸಾಧಿಸಿದ್ದಾರೆ.

**ಅಡಿಟಿಪ್ಪಣಿಗಳು**

| | | |
|---|---|---|
| ೧. ಮೂರು ನಾಟಕಗಳು | : | ಪ್ರೊ. ಎಸ್.ಜಿ. ಸಿದ್ದರಾಮಯ್ಯ : ಪುಟ. ೬೭ |
| ೨. ಮೂರು ನಾಟಕಗಳು | : | ಪ್ರೊ. ಎಸ್.ಜಿ. ಸಿದ್ದರಾಮಯ್ಯ : ಪುಟ. ಪೀಠಿಕೆ XIII |
| ೩. ಮೂರು ನಾಟಕಗಳು | : | ಪ್ರೊ. ಎಸ್.ಜಿ. ಸಿದ್ದರಾಮಯ್ಯ : ಪುಟ. ೨೮ |
| ೪. ಕುವೆಂಪುದರ್ಶನ | : | ಸಂಪುಟ–೩ : ದೇ.ಜ.ಗೌ. : ಪುಟ. ೩೨೯ |
| ೫. ಅನ್ನದಾತ | : | ಪ್ರೊ. ಎಸ್.ಜಿ. ಸಿದ್ದರಾಮಯ್ಯ : ಪುಟ. ೧೮–೧೯ |

□□□

# ೭. ಕುಸುಮಾಗ್ರಜ ಪಡೆದ ಅಗ್ರಜ

**– ಆಶಾ ಎಸ್.**

ಉತ್ತರಕನ್ನಡ ಭಾಗದ ಅನೇಕ ಪ್ರಸಿದ್ಧ ಲೇಖಕರು ತಮ್ಮ ಸಾಹಿತ್ಯಿಕ ಕೃಷಿಯ ಮೂಲಕ ಕನ್ನಡ ಸಾರಸ್ವತ ಲೋಕಕ್ಕೆ ಬಹಳಷ್ಟು ಉತ್ತಮ ಕೊಡುಗೆ ನೀಡಿದ್ದಾರೆ. ಆ ನಿಟ್ಟಿನಲ್ಲಿ ನೋಡುವುದಾದರೆ ಗೌರೀಶ ಕಾಯ್ಕಿಣಿ, ಯಶವಂತಚಿತ್ತಾಲ, ಶಾಂತಿನಾಥದೇಸಾಯಿ, ಗಂಗಾಧರ ಚಿತ್ತಾಲ, ದಿನಕರ ದೇಸಾಯಿ ಇನ್ನೂ ಮುಂತಾದವರನ್ನು ಗುರುತಿಸಬಹುದು. ಅವರ ಸಾಲಿನಲ್ಲಿ ಮುಂದುವರೆದ ಕೊಂಡಿಯೆಂಬಂತೆ ಜಯಂತ ಕಾಯ್ಕಿಣಿ ಅವರು ತಮ್ಮ ಸೃಜನಾತ್ಮಕ, ಕ್ರಿಯಾತ್ಮಕ ಬರವಣಿಗೆಯಿಂದ, ಪ್ರತಿಭಾ ಸಂಪನ್ನತೆ ಮೆರೆದು, ಕನ್ನಡ ಸಾಹಿತ್ಯ ಲೋಕದ ವಿಸ್ತಾರವಾದ ಬಾನಂಗಳದಲ್ಲಿ ನಕ್ಷತ್ರದಂತೆ ಮಿನುಗುತ್ತಿದ್ದಾರೆ. ಸಹೃದಯ ಲೋಕದ ಗಮನ ಸೆಳೆದಿರುವ ಇವರು ಉತ್ತರಕನ್ನಡ ಜಿಲ್ಲೆಯ ಮತ್ತೊಂದು ದೊಡ್ಡ ಕೊಡುಗೆ ಎಂದರೆ ತಪ್ಪಾಗಲಾರದು.

ಧಾರ್ಮಿಕ ಸಾಹಿತ್ಯಿಕ ಮತ್ತು ಭೌಗೋಳಿಕ ಕಾರಣಗಳಿಂದಾಗಿ ಉತ್ತರ ಕನ್ನಡ ಜಿಲ್ಲೆಗೆ ಕರ್ನಾಟಕ ರಾಜ್ಯದಲ್ಲಿ ಮಹತ್ವದ ಸ್ಥಾನವಿದೆ. ಮೈಸೂರಿನವರ ಮಾತಿನ ನಯ, ನಾಜೂಕು, ಉತ್ತರ ಕರ್ನಾಟಕ ಭಾಷೆಯ ದೇಸೀಯ ಸೊಗಡು ಎರಡನ್ನು ಮೈಗೂಡಿಸಿಕೊಂಡಿರುವ ಸೀಮೆಯಿದು. ಈ ಜಿಲ್ಲೆಗೆ ಸೇರಿದ ಪ್ರಸಿದ್ಧ ಧಾರ್ಮಿಕ ಪುಣ್ಯಕ್ಷೇತ್ರ ಗೋಕರ್ಣದಲ್ಲಿ ೨೪-೧-೧೯೫೫ರಲ್ಲಿ ಜಯಂತ ಕಾಯ್ಕಿಣಿ ಅವರು ಜನಿಸಿದರು. ಇವರ ತಂದೆ ಶ್ರೇಷ್ಠ ವಿದ್ವಾಂಸರೂ, ಅಪ್ರತಿಮ ವಿಚಾರವಾದಿಯೂ ಆಗಿದ್ದ ಗೌರೀಶ ಕಾಯ್ಕಿಣಿ. ತಾಯಿ ಶಾಂತಾಕಾಯ್ಕಿಣಿ ಶಿಕ್ಷಕಿಯಾಗಿದ್ದು, ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಗೌರೀಶ ಕಾಯ್ಕಿಣಿ ಅವರು ಆ ವೇಳೆಗಾಗಲೇ ಬಹಳ ಪ್ರಸಿದ್ಧಿ ಪಡೆದಿದ್ದರು. ಗೋಕರ್ಣದ ಸಜ್ಜನಿಕೆ, ಸಹೃದಯ ಪ್ರೀತಿಯ ಮಾಸ್ತರರಾಗಿ, ಅಪ್ರತಿಮ ವಿಚಾರವಾದಿಯಾಗಿ ಹೆಸರು ಮಾಡಿದ್ದರು. ಮೊಟ್ಟಮೊದಲ ಬಾರಿಗೆ 'ಮಾರ್ಕ್ಸ್‌ವಾದ' ಎಂಬ ವಿಚಾರ

ಸಾಹಿತ್ಯವನ್ನು ೧೯೪೪ರಲ್ಲಿ ಪ್ರಕಟಿಸಿದ್ದರು. ಗೌರೀಶರು ತಮ್ಮ ವಿಚಾರಗಳ ಸ್ವಂತಿಕೆ ಮತ್ತು ಸೋಪಜ್ಞತೆಗಳಿಂದ ನಾಡು–ನುಡಿಗಳನ್ನು ಶ್ರೀಮಂತಗೊಳಿಸಿದ್ದಾರೆ. ಕನ್ನಡ ಸಾಹಿತ್ಯ ಸಂದರ್ಭದ ವೈಚಾರಿಕತೆ ಬಗ್ಗೆ ಮಾತನಾಡುವಾಗಲೆಲ್ಲ ಗೌರೀಶರನ್ನು ಬಿಟ್ಟು ಯೋಚಿಸುವುದಕ್ಕೆ ಸಾಧ್ಯವಾಗದು. ಅವರು ತಮ್ಮ ಜೀವಮಾನದ ಅವಧಿಯಲ್ಲಿ ಬರೆದಿರುವ ಸಾವಿರಾರು ಪುಟಗಳ ಬರವಣಿಗೆಯನ್ನು ಸಂಕಲಿಸಿ ಪ್ರಕಟಿಸಿರುವ 'ಸಮಗ್ರ ಸಾಹಿತ್ಯ' ಯೋಜನೆಯಡಿಯಲ್ಲಿ ಒಟ್ಟು ೧೦ ಸಂಪುಟಗಳಾಗಿ ಹೊರಬಂದಿರುವುದು ಗೌರೀಶರ ಅಸಮಾನ್ಯ ವಿಚಾರಧಾರೆಯನ್ನು, ಬಹುಶ್ರುತ ಸಾಹಿತ್ಯ ಕೃಷಿಯನ್ನು ದಿಗ್ದರ್ಶಿಸುವಂತಿದೆ.

ಹೀಗೆ ಜಯಂತ ಕಾಯ್ಕಿಣಿ ಅವರು ಸುಸಂಸ್ಕೃತ ಕುಟುಂಬದಲ್ಲಿ ಹಾಗೂ ಸಾಹಿತ್ಯಿಕ ವಲಯದಲ್ಲಿ ಬೆಳೆದಿರುವುದರಿಂದ ತಾಯಿ, ತಂದೆಯೇ ಆದರ್ಶವಾಗಿದ್ದರು. ಜಯಂತರ ಬಹುಮುಖ ಪ್ರತಿಭೆಯ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಅವರ ಸಾಹಿತ್ಯ ಸಾಧನೆಗೆ ಕೌಟುಂಬಿಕ ಪರಿಸರವು ಮಹತ್ವದ ಪಾತ್ರವಹಿಸಿದೆ. ತಂದೆಯವರಲ್ಲಿದ್ದ ಬಹುಶೃತ ವ್ಯಕ್ತಿತ್ವ ರಕ್ತಗತವಾಗಿ ಜಯಂತ ಅವರಲ್ಲಿಯೂ ಕುಡಿಯೊಡೆದಿದೆ ಎನ್ನಬಹುದು. ಕನ್ನಡ ಸಾಹಿತ್ಯ ಲೋಕದಲ್ಲಿ ಡಿ.ವಿ.ಜಿ.–ಬಿ.ಜಿ.ಎಲ್. ಸ್ವಾಮಿ ಮತ್ತು ಕುವೆಂಪು–ತೇಜಸ್ವಿ ಇವರಂತೆಯೇ ಗೌರೀಶ ಕಾಯ್ಕಿಣಿ–ಜಯಂತ ಕಾಯ್ಕಿಣಿಯವರದ್ದು ತಂದೆ–ಮಗನ ಅಪೂರ್ವವಾದ ಜೋಡಿ ಎನಿಸಿದೆ.

ಪ್ರತಿಭಾವಂತ ಸಾಹಿತಿಯ ಮಗನಾಗಿ ಹುಟ್ಟಿದರೂ ಅವರ ನೆರಳಿನಿಂದ ಹೊರಬಂದು ಕನ್ನಡ ಸಾರಸ್ವತ ಲೋಕದಲ್ಲಿ ತಮ್ಮದೇ ಆದ ಅಸ್ತಿತ್ವವನ್ನು ದಾಖಲಿಸುವಲ್ಲಿ ತೇಜಸ್ವಿಯವರಂತೆಯೇ ಜಯಂತ ಕಾಯ್ಕಿಣಿ ಅವರೂ ಕೂಡ ಯಶಸ್ವಿಯಾದವರು. ಜಯಂತ ಅವರು ಬಾಲ್ಯದಿಂದಲೇ ಸಾಹಿತ್ಯಕ್ಕಿಂತಲೂ ತಂದೆಯವರು ಕಲಿಸಿದ ಬದುಕಿನ ಪಾಠದಲ್ಲಿ ಹೆಚ್ಚು ಆಸ್ಥೆವಹಿಸಿದ್ದರು. ಬದುಕಿನ ಪ್ರತಿಯೊಂದು ಬಿಡಿಗಳನ್ನು ಸೂಕ್ಷ್ಮವಾಗಿ ಗ್ರಹಿಸುತ್ತಾ, ಸಹಜತೆಯಿಂದ ಪರಿಪೂರ್ಣತೆಯಿಂದ ಅದನ್ನು ಆಳವಾಗಿ ಅನುಭವಿಸುವತ್ತ ತಮ್ಮ ಗಮನ ಹರಿಸಿದ್ದರು. ಆ ಕಾರಣದಿಂದಲೇ ಅವರಲ್ಲಿ ಸೂಕ್ಷ್ಮ ಸಂವೇದನಾಶೀಲತೆ ಗುಣ ಮೈಮನಗಳಲ್ಲಿ ಮೈಗೂಡಿಕೊಂಡಿತು. ಅವರ ಸಾಹಿತ್ಯದೊಳಗೆ ಆ ಗುಣವನ್ನು ಅಳವಡಿಸಿಕೊಂಡಿರುವುದರಿಂದಲೇ ಸಹೃದಯ ಲೋಕವನ್ನು ತಮ್ಮತ್ತ ಸೆಳೆದುಕೊಂಡಿದ್ದಾರೆ. ತಂದೆ ತಾಯಿಯರ ಪ್ರಭಾವದ ಜೊತೆಗೆ ಶಿಕ್ಷಕರಾಗಿದ್ದ ಸೋದರಮಾವ ಗೋಪಾಲಕೃಷ್ಣ ರಾಮಚಂದ್ರ ವೆಂಕಟೇಕರ್ ಅವರು ಜಯಂತ ಕಾಯ್ಕಿಣಿ ಅವರ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ಜಯಂತ ಅವರು ತಮ್ಮ ವಿದ್ಯಾಭ್ಯಾಸವನ್ನು ಗೋಕರ್ಣ, ಕುಮಟಾ ಮತ್ತು ಧಾರವಾಡಗಳಲ್ಲಿ ಮುಗಿಸಿದರು. ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಬಯೋಕೆಮಿಸ್ಟ್ರಿಯಲ್ಲಿ ಚಿನ್ನದ ಪದಕಗಳಿಸಿಕೊಂಡಿರುವರು.

೧೯೭೬ರಲ್ಲಿ ವೃತ್ತಿಯನ್ನರಸಿ ಮುಂಬಯಿಗೆ ತೆರಳಿ ಅಲ್ಲಿ ಪ್ರಾಕ್ಟರ್ ಆ್ಯಂಡ್ ಗ್ಯಾಂಬಲ್, ಹೆಕ್ಸ್ಟ್ ಮುಂತಾದ ಪ್ರಸಿದ್ಧ ಕಂಪನಿಗಳಲ್ಲಿ ಫಾರ್ಮಾ ಪ್ರೊಡಕ್ಷನ್ ಎಕ್ಸಿಕ್ಯೂಟಿವ್ ಆಗಿ ೧೯೭೭ ರಿಂದ ೧೯೯೭ರ ತನಕ ಕೆಲಸ ಮಾಡಿದರು. ೧೯೯೭ ರಿಂದ ೧೯೯೮ರ ವರೆಗೆ ಮುಂಬಯಿಯಲ್ಲಿಯೇ ಸ್ವತಂತ್ರ ಬರಹಗಾರರಾಗಿ (Freelance copy writer) ಲಿಂಟಾಸ್, ಮುದ್ರಾ ಮತ್ತು ತ್ರಿಕಾಯ ಜಾಹೀರಾತು ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇದೇ ವೇಳೆ ೧೯೯೭ ರಲ್ಲಿ ಚೀನಾ ದೇಶಕ್ಕೆ ಕಳುಹಿಸಲ್ಪಟ್ಟ ಭಾರತೀಯ ಲೇಖಕರ ಪ್ರತಿನಿಧಿಯಾಗಿ ಕನ್ನಡದವರಾದ ಜಯಂತ ಕಾಯ್ಕಿಣಿಯವರೂ ಕೂಡ ಆಯ್ಕೆಗೊಂಡರು. ಮುಂದೆ ೧೯೯೭ ರಿಂದ ೧೯೯೯ರ ಅವಧಿಯಲ್ಲಿ ಈಟಿವಿ ಕನ್ನಡವಾಹಿನಿ ಕಾರ್ಯಕ್ರಮ ಸಮಿತಿಯ ಸದಸ್ಯರಾಗಿ, ರಾಮೋಜಿ ಫಿಲ್ಮ್ ಸಿಟಿ ಹೈದರಾಬಾದ್‌ನಲ್ಲಿ ಕಾರ್ಯಭಾರವನ್ನು ಮುಂದುವರೆಸಿದರು.

ಜಯಂತ ಅವರು ಪ್ರಾಕ್ಟರ್ ಆ್ಯಂಡ್ ಗ್ಯಾಂಬಲ್‌ನಲ್ಲಿ ಕೆಲಸ ನಿರ್ವಹಿಸುವಾಗ ತಮ್ಮ ಸಹೋದ್ಯೋಗಿ ಸ್ಮಿತಾ ಅವರನ್ನು ಮೆಚ್ಚಿ ೧೭ ನವೆಂಬರ್ ೧೯೮೪ ರಲ್ಲಿ ವಿವಾಹವಾದರು. ಸ್ಮಿತಾ ಅವರು ಮಿತ ಭಾಷಿಯಾಗಿದ್ದು ಅನಾಲಿಟಿಕಲ್ ಕೆಮಿಸ್ಟ್ರಿಯಲ್ಲಿ ಚಿನ್ನದ ಪದಕಗಳಿಸಿದ ಸ್ನಾತಕೋತ್ತರ ಪದವೀಧರೆ. ಮೂಲತಃ ಗೋವಾದ ಮಾರ್ಡೋಳದವರಾದರೂ ಮುಂಬಯಿ ಹುಡುಗಿಯೆನಿಸಿದ್ದಾರೆ. ಸೌಮ್ಯ ಸ್ವಭಾವದ ಸ್ಮಿತಾ ಅವರು ಜಯಂತ ಕಾಯ್ಕಿಣಿಯವರ ಯಶಸ್ಸಿನ ಹಾಗೂ ಸಾಧನೆಗಳ ಹಿಂದೆ ಸದ್ದಿಲ್ಲದೆ ಪ್ರೇರಣೆ ನೀಡುವ ಶಕ್ತಿಯಾಗಿದ್ದಾರೆ. ಇವರಿಗೆ ಸೃಜನಾ ಹಾಗೂ ಋತ್ವಿಕ್ ಎಂಬ ಇಬ್ಬರು ಮಕ್ಕಳಿದ್ದಾರೆ.

ಸೃಜನಾ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಮುಂಬಯಿಯಲ್ಲಿ ಮುಗಿಸಿ, ಬಿ.ಆರ್ಕ್ ಪದವಿಯನ್ನು ಬೆಂಗಳೂರಿನ ಆರ್.ವಿ. ಕಾಲೇಜಿನಲ್ಲಿ ಪಡೆದರು. ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದಿಂದ ಕಲೆ ಮತ್ತು ಸೌಂದರ್ಯಶಾಸ್ತ್ರದಲ್ಲಿ ೨೦೧೨ ರಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವರು. ಸದ್ಯದಲ್ಲಿ ಹಾಲೆಂಡ್‌ನ ಆ್ಯಮ್‌ಸ್ಟರ್‌ಡ್ಯಾಮ್‌ನಲ್ಲಿ 'ಕಲಾ ರಸಗ್ರಹಣ ಹಾಗೂ ಕ್ಯೂರೇಟಿಂಗ್'ನ ತರಬೇತಿಯಲ್ಲಿ ಪಾಲ್ಗೊಂಡಿರುವ ಏಕೈಕ ಭಾರತೀಯ ವಿದ್ಯಾರ್ಥಿನಿಯಾಗಿದ್ದಾರೆ. ಒಡಿಸ್ಸಿ ನೃತ್ಯ ಪ್ರವೀಣೆಯಾಗಿರುವ ಈಕೆ ಕ್ಷಮಾರಾವ್ ಅವರ ಮಾರ್ಗದರ್ಶನದಲ್ಲಿ ರಂಗ ಪ್ರವೇಶಮಾಡಿ ನೃತ್ಯ ಪ್ರದರ್ಶನ ನೀಡುತ್ತಾರೆ. ಋತ್ವಿಕ್ ಬೆಂಗಳೂರಿನ ಬಿ.ಎಮ್.ಎಸ್.

ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಮುಗಿಸಿದ್ದಾರೆ. ಗಿಟಾರ್‌ವಾದನ ಕಲಿತಿರುವ ಈತ ಅಕ್ಕ ಸೃಜನಾಳಂತೆ ಜಾಗತಿಕ ಸಿನೆಮಾ ಹಾಗೂ ಸಂಗೀತದಲ್ಲಿ ಅಪಾರ ಆಸಕ್ತಿ ಹೊಂದಿರುವರು.

ಜಯಂತ ಕಾಯ್ಕಿಣಿ ಅವರಿಗೆ ೨೦೦೦ದಲ್ಲಿ ಹೈದರಾಬಾದಿನ ಈಟಿವಿಯವರು ಆರಂಭಿಸಬೇಕಿದ್ದ ಕನ್ನಡ ವಾಹಿನಿಯ ಸಲಹಾ ಸಮಿತಿಯ ಸದಸ್ಯರಾಗಲು ಕರೆ ಬಂದಾಗ ಮುಂಬಯಿಯಿಂದ ಬೆಂಗಳೂರಿಗೆ ಬಂದು ನೆಲೆಸಿದರು. ನಂತರ ವಿಜಯ ಸಂಕೇಶ್ವರ್ ಹಾಗೂ ಸಂತೋಷ್ ಕುಮಾರ್ ಗುಲ್ವಾಡಿಯವರ ಒತ್ತಾಯಕ್ಕೆ ಮಣಿದು 'ಭಾವನಾ' ಮಾಸ ಪತ್ರಿಕೆಯ ಸಂಪಾದಕರಾಗಿ ಒಂದೂವರೆ ವರ್ಷಕಾಲ ಸೇವೆಸಲ್ಲಿಸಿದರು. ಈ ಎಲ್ಲಾ ಗಡಿಬಿಡಿಯ ನಡುವೆ 'ಹಾಯ್ ಬೆಂಗಳೂರು' ಪತ್ರಿಕೆಗೆ ಅಂಕಣವನ್ನು ಬರೆದರು. ಸೃಜನಾತ್ಮಕ ಹಾಗೂ ಕ್ರಿಯಾಶೀಲ ಬರವಣಿಗೆಗಾಗಿ ಜಯಂತರಿಗೆ ೨೦೦೧ರ 'ಋಜುವಾತು ಫೆಲೋಶಿಪ್' ದೊರಕಿತು. ಭಾವನಾ ಮಾಸ ಪತ್ರಿಕೆ ನಿಂತ ಮೇಲೆ ಪ್ರಸ್ತುತದಲ್ಲಿ ಸ್ವತಂತ್ರರಾಗಿ ವೈವಿಧ್ಯಪೂರ್ಣ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಆಧುನಿಕ ಕನ್ನಡದ ಶ್ರೇಷ್ಠ ಸಾಹಿತಿಗಳಾದ ಕುವೆಂಪು, ಶಿವರಾಮಕಾರಂತ, ಬೇಂದ್ರೆ ಮತ್ತು ನಾಯಕ ನಟ ರಾಜ್‌ಕುಮಾರ್ ಈ ನಾಲ್ಕು ಮಹನೀಯರ ಬಗ್ಗೆ ಒಬ್ಬೊಬ್ಬರ ಬಗ್ಗೆಯೂ ೩೦ (ಮೂವತ್ತು) ಕಂತುಗಳಲ್ಲಿ ಅವರು ಬದುಕಿದ ರೀತಿ, ನಂಬಿದ್ದ ಮೌಲ್ಯಗಳು, ಅವರು ತೋರಿದ ದಾರಿ ಹೀಗೆ ಬದುಕು ಮತ್ತು ಸಾಧನೆಗಳನ್ನು ಅಪಾರ ಸಂಖ್ಯೆಯ ವೀಕ್ಷಕರಿಗೆ ಪರಿಚಯಿಸಿದುದು ದಾಖಲೆಗೆ ಅರ್ಹವಾದ ಒಂದು ಕಾರ್ಯಕ್ರಮವಾಗಿದೆ.

ಈ ವಿಭಿನ್ನ ರೀತಿಯ ಕಾರ್ಯಕ್ರಮ ರೂಪಿಸಿರುವ ಬಗೆಗೆ ಜಯಂತ ಕಾಯ್ಕಿಣಿ ಅವರಿಗೆ ತೃಪ್ತಿ ಇದೆ ಎಂಬುದನ್ನು ಅವರ ಮಾತುಗಳಲ್ಲೇ ವ್ಯಕ್ತಪಡಿಸಬಹುದು. "ನಾನು ಈಟಿವಿಗೆ ಮಾಡಿದ 'ನಮಸ್ಕಾರ' ಸರಣಿ ನನ್ನ ಪಾಲಿಗಂತೂ ಅಮೂಲ್ಯ ಮತ್ತು ಅವಿಸ್ಮರಣೀಯ ಪಯಣ, ಸೀರಿಯಲ್ ನೋಡುವ ವೀಕ್ಷಕರಿಗೆಂದೇ ರೂಪಿಸಲಾದ ಈ ಸರಣಿಯಲ್ಲಿ ಕೇವಲ ಕೃತಿ ವಿಮರ್ಶೆ ಇಟ್ಟುಕೊಳ್ಳದೆ ಆ ಹಿರಿಯ ವ್ಯಕ್ತಿತ್ವಗಳ ಹಲವು ಮಗ್ಗುಲುಗಳನ್ನು ಮಾನವೀಯ ಆಸಕ್ತಿಯ ಕಣ್ಣುಗಳಿಂದ ಕಟ್ಟಿಕೊಡುವ ಯತ್ನವಿತ್ತು" ಎಂದಿದ್ದಾರೆ. ಹಾಗೆಯೇ ಜಯಂತ ಕಾಯ್ಕಿಣಿ ಅವರು 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದಲ್ಲಿ ಸುಪ್ರಸಿದ್ಧ ಗಾಯಕ ಎಸ್.ಪಿ.ಬಾಲಸುಬ್ರಹ್ಮಣ್ಯಂ ಹಾಗೂ ನಾದಬ್ರಹ್ಮ ಎಂದೇ ಪರಿಚಿತರಾದ ಸಂಗೀತಕಾರ ಹಂಸಲೇಖ ಇವರೊಂದಿಗೆ ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದ್ದಾರೆ.

ಗೀತರಚನಾಕಾರರಾಗಿ ಜಯಂತ ಕಾಯ್ಕಿಣಿಯವರನ್ನು ನೋಡುವುದಾದರೆ ಕನ್ನಡ ಚಿತ್ರರಂಗದಲ್ಲಿ ಮಧುರಗೀತೆಗಳು ಮಾಯವಾಗುತ್ತಿದ್ದ ವೇಳೆಯಲ್ಲಿ ಮರುಜೀವ ನೀಡುವಂತೆ ಸಂಚಲನವನ್ನುಂಟು ಮಾಡಿದರು. "ಚರ್ವಿತ ಚರ್ವಣವಾಗಿದ್ದ ಕನ್ನಡ ಚಿತ್ರಗೀತೆ ಕ್ಷೇತ್ರದಲ್ಲಿ ಸೃಜನಶೀಲತೆಯ ಹೊಸ ಕಾಮನಬಿಲ್ಲು, ಕರಾವಳಿಯ ಗೋಕರ್ಣದಿಂದ ಕಾಣಿಸುತ್ತಿವೆ. ಪ್ರವಾಹದ ವಿರುದ್ಧ ಈಜಿ ದಾಖಲೆ ನಿರ್ಮಿಸುವುದರಲ್ಲಿ ಜಯಂತ ಕಾಯ್ಕಿಣಿ ಯಶಸ್ವಿಯಾಗಿದ್ದಾರೆ. ಬಿ.ವಿ.ಕಾರಂತರು ಕನ್ನಡದ ರಂಗಗೀತೆಗಳಿಗೆ ಹೊಸದಿಕ್ಕು ತೋರಿದಂತೆ ಕಾಯ್ಕಿಣಿಯವರು ಕನ್ನಡ ಚಿತ್ರಗೀತೆಗಳಿಗೆ ಹೊಸ ಆಯಾಮ ನೀಡಿದ್ದಾರೆ" ಎಂಬ ಮುರುಳೀಧರ ಉಪಾಧ್ಯ ಹಿರಿಯಡಕ ಅವರ ಹೇಳಿಕೆ ಅಕ್ಷರಶಃ ಸತ್ಯವೆನಿಸುತ್ತದೆ.

ಹೀಗೆ ಜಯಂತ ಕಾಯ್ಕಿಣಿ ಅವರ ಕ್ರಿಯಾತ್ಮಕ ಸೃಜನಶೀಲ ಪ್ರತಿಭೆ ಕಥೆ, ಕವನ, ನಾಟಕ, ಅಂಕಣ ಬರಹಗಳಿಗೆ ಮಾತ್ರ ಸೀಮಿತವಾಗಿರದೆ, ಕಿರುತೆರೆ, ಪತ್ರಿಕಾರಂಗ ಹಾಗೂ ಚಿತ್ರಕಥೆ ಸಂಭಾಷಣೆ, ಚಿತ್ರಗೀತ ರಚನಾಕಾರರಾಗಿ ಅವರ ಪ್ರತಿಭೆ ಹೊರಹೊಮ್ಮಿದೆ. ೧೯೮೯ರಲ್ಲಿಯೇ ಗಿರೀಶ್ ಕಾಸರವಳ್ಳಿಯವರ ಮೂರು ದಾರಿಗಳು ಎಂಬ ಸಿನಿಮಾಕ್ಕೆ ಅಸಿಸ್ಟೆಂಟ್ ಡೈರೆಕ್ಟರ್‌ರಾಗಿ ಕಾರ್ಯ ನಿರ್ವಹಿಸಿದರು. ಗಿರೀಶ್ ಕಾಸರವಳ್ಳಿ ನಿರ್ದೇಶನದ 'ದ್ವೀಪ', ನಾಗಾಭರಣ ನಿರ್ದೇಶನದ ಶಿವರಾಮ ಕಾರಂತರ ಕಾದಂಬರಿ ಆಧಾರಿತ ಸಿನಿಮಾ 'ಚಿಗುರಿದ ಕನಸು', ಚಂದ್ರಶೇಖರ್ ನಿರ್ದೇಶನದ 'ಪೂರ್ವಾಪರ', ಸುನೀಲ್ ಕುಮಾರ್ ದೇಸಾಯಿ ಅವರ ನಿರ್ದೇಶನದ 'ರಮ್ಯ ಚೈತ್ರಕಾಲ' ಈ ನಾಲ್ಕು ಚಿತ್ರಗಳಿಗೆ ಚಿತ್ರಕಥೆ ಸಂಭಾಷಣೆ ಬರೆಯುವ ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಅವರಿಗೆ ಸಿನಿಮಾ ಭಾಷೆ ಏನು ಎಂಬುದರ ಅರಿವಾಯಿತು. ಜೊತೆಗೆ ಹೊಸ ಅಲೆಯ ಚಿತ್ರದ ಅನುಭವ ನೀಡಿದ ದ್ವೀಪ, ಕಮರ್ಶಿಯಲ್ ಚಿತ್ರದ ಅನುಭವ ನೀಡಿದ ರಮ್ಯ ಚೈತ್ರಕಾಲ, ಕಾದಂಬರಿ ಆಧಾರಿತ ಚಿತ್ರದ ಅನುಭವ ನೀಡಿದ ಚಿಗುರಿದ ಕನಸು ಒಟ್ಟಾರೆ ಒಂದು ಸಮನ್ವಯ ರೀತಿಯ ಅನುಭವವನ್ನು ಪಡೆದುಕೊಂಡೆನೆಂದು ಜಯಂತರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.

ಸಾಮಾನ್ಯವಾಗಿ ಯಾವೊಬ್ಬ ಸಾಹಿತಿಯಾದರು ಅವರ ಮೇಲೆ ಸಮಕಾಲೀನ ಸಂದರ್ಭದ ಸಾಹಿತ್ಯಿಕ ಕೃತಿಗಳು, ಸಾಹಿತಿಗಳು ಪ್ರಭಾವ ಬೀರಿರುವುದು ಸಹಜವಾಗಿರುತ್ತದೆ. ಅದೇ ರೀತಿ ಜಯಂತರ ಮೇಲೆ ನವ್ಯ ಲೇಖಕರ ಪ್ರಭಾವ ಬಹಳಷ್ಟಿದೆ. ಅವರೇ ಸಂದರ್ಶನವೊಂದರಲ್ಲಿ ಹೀಗೆ ಹೇಳಿದ್ದಾರೆ: "ಅಡಿಗರ ಕಾವ್ಯಕ್ಕಿಂತ ಅವರ 'ಸಾಕ್ಷಿ' ಪತ್ರಿಕೆಯಿಂದ ಹೆಚ್ಚು ಪ್ರಭಾವಿತನಾದವನು ನಾನು.

5

ಕೆ.ವಿ. ತಿರುಮಲೇಶ್, ಎ.ಕೆ. ರಾಮಾನುಜನ್. ಗಂಗಾಧರ ಚಿತ್ತಾಲರು ನನಗೆ ಕವಿತೆಯ ರುಚಿ ಹತ್ತಿಸಿದರೆ, ಶಾಂತಿನಾಥ ದೇಸಾಯಿ, ಪಿ. ಲಂಕೇಶ್, ಯಶವಂತ ಚಿತ್ತಾಲ, ಕೆ. ಸದಾಶಿವ, ತೇಜಸ್ವಿ, ಅನಂತಮೂರ್ತಿ ಕಥನದ ಕ್ಷಿತಿಜವನ್ನು ವಿಸ್ತರಿಸಿದರು" (ಜಯಂತ ಕಾಯ್ಕಿಣಿ ವಾಚಿಕೆ, ೨೦೧೦) ಎನ್ನುವಲ್ಲಿ ನವ್ಯ ಸಾಹಿತಿಗಳ ಪ್ರಭಾವ ಎಷ್ಟಿದೆ ಎಂಬುದನ್ನು ಸ್ಪಷ್ಟಪಡಿಸುವಂತಿದೆ.

ಜಯಂತ ಕಾಯ್ಕಿಣಿ ಅವರು ವೃತ್ತಿಯನ್ನರಸಿ ಮುಂಬಯಿಗೆ ತೆರಳಿದ ಸಂದರ್ಭದಲ್ಲಿ ಅವರಿಗೆ ಅಭಯನೀಡಿ ಆದರಿಸಿದವರೆಂದರೆ ಹಿರಿಯ ಲೇಖಕರಾದ ಯಶವಂತ ಚಿತ್ತಾಲ, ವ್ಯಾಸರಾಯ ಬಲ್ಲಾಳ, ಅರವಿಂದ ನಾಡಕರ್ಣಿ ಮತ್ತು ಸುನಿತಾಶೆಟ್ಟಿಯವರು. ಇವರ ಪ್ರಭಾವ ಪ್ರೇರಣೆ ಜಯಂತ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯದ ಮೇಲೆ ಬಹಳಷ್ಟಿದೆ ಎಂಬುದನ್ನು ಗಮನಿಸಬೇಕಾಗುತ್ತದೆ.

ನವ್ಯ ಸಾಹಿತ್ಯದ ಕಿರಿಯ ತಲೆಮಾರಿನಲ್ಲಿ ಕಾಣಿಸಿಕೊಳ್ಳುವ ಜಯಂತ ಕಾಯ್ಕಿಣಿ ಅವರು ತಮ್ಮ ವಿಶಿಷ್ಟ ಬರವಣಿಗೆ ಶೈಲಿಯಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ. "ಕಾಯ್ಕಿಣಿಯವರು ಕನ್ನಡದ ಪ್ರಮುಖ ನವ್ಯ ಮತ್ತು ನವ್ಯೋತ್ತರ ಲೇಖಕರೊಡನೆ ಹಲವಾರು ಸಂಬಂಧಗಳನ್ನು ಹೊಂದಿದ್ದರೂ ಭಾಷೆಯ ವಿಷಯದಲ್ಲಿ ಮಾತ್ರ ಜಯಂತ ಅವರು ತೀರ ವಿಶಿಷ್ಟವಾಗಿದ್ದಾರೆ. ಚಿತ್ತಾಲರಂಥ ಕೆಲ ಕತೆಗಾರರಿಗೆ ಸಂಕೇತಗಳು ಮುಖ್ಯವಾಗುತ್ತವೆ. ಆದರೆ, ಜಯಂತ ಅವರ ಒಲವಿರುವುದು ರೂಪಕಗಳತ್ತ. ಈ ರೂಪಕಗಳ ಒಂದು ಮುಖ್ಯ ಕಾರ್ಯವೆಂದರೆ ಕತೆಯನ್ನು ಅದರ ಪಾತ್ರ, ಘಟನೆ ಪರಿಸರಗಳಿಂದ ಬಿಡಿಸಿ ಅದಕ್ಕೆ ಮುಕ್ತತೆಯನ್ನೊದಗಿಸುವುದು. ಸಾಮಾನ್ಯವಾಗಿ ಕತೆಗಳ ವಿಶ್ವ ಸಂಕುಚಿತವಾಗಿರುವುದರಿಂದ ಇಂಥ ವಿಧಾನಗಳು ಕತೆಗಾರರಿಗೆ ಉಪಯುಕ್ತವೆನಿಸುತ್ತದೆ" (ಕನ್ನಡ ಕಥನ ಸಾಹಿತ್ಯ : ಸಣ್ಣಕತೆ, ೨೦೦೩) ಎಂದು ಹೇಳಿರುವ ಜಿ.ಎಸ್. ಅಮೂರರ ಮಾತು ಗಮನಾರ್ಹವಾಗಿದೆ.

ಈ ಹಿನ್ನೆಲೆಯಲ್ಲಿ ಜಯಂತ ಅವರು ನವ್ಯ ಮುಗಿಯುತ್ತ ಬಂದು ಬಂಡಾಯದ ಗಾಳಿ ಬೀಸತೊಡಗಿದಂತಹ ವೇಳೆ ನವ್ಯದ ಬೀಜದೊಂದಿಗೆ ಬಂಡಾಯದ ಗಾಳಿ ಸೇವಿಸಿ, ಮುಂಬಯಿಯ ನೀರು ಕುಡಿದು ತಮ್ಮ ಜ್ಞಾನದ ಕ್ಷಿತಿಜವನ್ನು ವಿಸ್ತೃತಗೊಳಿಸಿಕೊಂಡು ಕಾವ್ಯ, ಕಥೆ, ನಾಟಕ, ಅಂಕಣಬರಹಗಳೆಂಬ ಫಲಪುಷ್ಪಗಳನ್ನು ಕೊಡುಗೆಯಾಗಿ ನೀಡಿರುವುದನ್ನು ಗಮನಿಸಬೇಕಾಗುತ್ತದೆ. ಸಾಮಯಿಕ ಚಳುವಳಿಯಿಂದ ದೂರ ಮುಂಬಯಿಯಲ್ಲಿ ಇದ್ದುದರಿಂದಲೇ ತಮ್ಮದೇ ಆದ ಲೋಕವೊಂದನ್ನು ತೀವ್ರವಾಗಿ ಕಟ್ಟಿಕೊಳ್ಳುವ ಹಟ ಅವರದಾಯಿತು ಎನ್ನಬಹುದು.

ನವ್ಯ ಮತ್ತು ನವ್ಯೋತ್ತರ ಸಂದರ್ಭದಲ್ಲಿ ಕಾಣಿಸಿಕೊಳ್ಳುವ ಜಯಂತ ಕಾಯ್ಕಿಣಿ ಅವರು ಕವಿತೆಯನ್ನು ಬರೆಯುವ ಮೂಲಕ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದರು. ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಆಸಕ್ತರಾಗಿದ್ದ ಅವರು ಕಥಾಸಾಹಿತ್ಯದಲ್ಲಿ ಹೆಚ್ಚಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಜಯಂತ ಅವರು ಪಿ.ಯು.ಸಿ. ದಿನಗಳಿಂದಲೇ ಕಥೆಗಳನ್ನು ಬರೆಯಲು ಪ್ರಾರಂಭಿಸಿದರು. ಸುಧಾ, ಉದಯವಾಣಿ, ಪ್ರಜಾವಾಣಿ, ಮಯೂರ, ತುಷಾರ, ತರಂಗ, ಕರ್ಮವೀರ ಮುಂತಾದ ಪತ್ರಿಕೆಗಳಲ್ಲಿ ಅವರ ಕಥೆಗಳು ಬಂದಿವೆ. ೧೯೭೭ರಲ್ಲಿ 'ಇದ್ದಾಗ ಇದ್ದಾಂಗ' ಕಥೆ ಉದಯವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದೆ. ೧೯೮೦ರಲ್ಲಿ 'ತೆರೆದಷ್ಟೇ ಬಾಗಿಲು' ಕಥೆ ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆಯಲ್ಲಿ ವಿಶೇಷ ಬಹುಮಾನ ಗಳಿಸಿದೆ. ೧೯೭೫ರಲ್ಲಿ 'ದ್ವೀಪಗಳು' ಕಥೆಗೆ ಉದಯವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಬಂದಿದೆ.

ದಗಡೂ ಪರಬನ ಅಶ್ವಮೇಧ ಕಥಾ ಸಂಕಲನದ "ಎಲ್ಲಾ ಕಥೆಗಳು ಪ್ರಜಾವಾಣಿ, ತರಂಗ, ಸುಧಾ ಮತ್ತು ಕರ್ಮವೀರಗಳ ವಿಶೇಷಾಂಕಗಳಲ್ಲಿ ಪ್ರಕಟವಾಗಿವೆ. ಸಮುದ್ರ, ನಿಮಿತ್ತ ಮತ್ತು ಕಣ್ಣಿಗೊಂದು ಕ್ಷಿತಿಜ. ಕಥೆಗಳು ಪ್ರಜಾವಾಣಿ ಏರ್ಪಡಿಸಿದ ದೀಪಾವಳಿ ಸ್ಪರ್ಧೆಯಲ್ಲಿ ಬಹುಮಾನ ಪಡೆದಿವೆ. ಕಣ್ಣಿಗೊಂದು ಕ್ಷಿತಿಜ ಮತ್ತು ಉನ್ನಿಕೃಷ್ಣನ್ ಬಂದುಹೋದ ಕಥೆಗಳನ್ನು ಶ್ರೀ ಆನಂದ ವರ್ಟಿ ಮರಾಠಿಗೆ ಅನುವಾದಿಸಿ, 'ಅನುರಾಧಾ ಹಾಗೂ ಆಯುಧ' ದೀಪಾವಳಿ ಅಂಕಗಳಲ್ಲಿ ಮತ್ತು ದಗಡೂ ಪರಬನ ಅಶ್ವಮೇಧ ಕಥೆಯನ್ನು ಅಂಜನಿ ರವಿಕಿರಣ ಮರಾಠಿಗೆ ಅನುವಾದಿಸಿ 'ಸ್ತ್ರೀ' ಮಾಸಿಕದಲ್ಲಿ ಪ್ರಕಟಪಡಿಸಿದ್ದಾರೆ. ಕಣ್ಣಿಗೊಂದು ಕ್ಷಿತಿಜ ಕಥೆಯನ್ನು ಶ್ರೀ ವಿ.ಕೆ. ಕೇಶವಮೂರ್ತಿ ಹಿಂದಿಗೆ ಅನುವಾದಿಸಿದ್ದು, ಅದು ಭಾರತೀಯ ಸಾಹಿತ್ಯ ವಾರ್ಷಿಕ ಹಿಂದಿ ಸಂಪುಟದಲ್ಲಿ ಪ್ರಕಟವಾಗಿದೆ. ದಗಡೂ ಪರಬನ ಅಶ್ವಮೇಧ, ಉನ್ನಿಕೃಷ್ಣನ್ ಬಂದುಹೋದ ಕಥೆಗಳನ್ನು ಶ್ರೀಮತಿ ಪದ್ಮಾ ರಾಮಚಂದ್ರ ಶರ್ಮ ಇಂಗ್ಲಿಷ್‌ಗೆ ಅನುವಾದಿಸಿದ್ದು ಅವು ಕ್ರಮವಾಗಿ ದೆಹಲಿಯ ಯುವ ಕಥಾ ಸರಣಿಯಲ್ಲಿ ಮತ್ತು ಹಿಂದೂ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಶ್ರೀಮತಿ ವನಮಾಲಾ ವಿಶ್ವನಾಥ ಮಾಡಿರುವ 'ಮಧ್ಯಂತರ'ದ ಇಂಗ್ಲಿಷ್ ಅನುವಾದ ಇಂಡಿಯನ್ ಲಿಟರೇಚರ್‌ನ ಕನ್ನಡ ಸಾಹಿತ್ಯ ವಿಶೇಷಾಂಕದಲ್ಲಿ ಪ್ರಕಟವಾಗಿದೆ". (ಜಯಂತ ಕಾಯ್ಕಿಣಿ ಕತೆಗಳು, ೨೦೦೩)

ಅಂದಿನಿಂದ ಇಂದಿನವರೆಗೆ ಅವರು ಬರೆದಿರುವ ಒಟ್ಟು ಕೃತಿಗಳು ೧೯, ಐದು ಕವನಸಂಕಲನಗಳು, ಏಳು ಕಥಾಸಂಕಲನಗಳು, ಮೂರು ನಾಟಕಗಳು, ಮೂರು ಅಂಕಣ ಬರಹಗಳು, ಸಿನಿಮಾ – ಸಿನಿಮೇತರ

ಜಯಂತ ಕಾಯ್ಕಿಣಿ ಅವರು ಅನುವಾದಿಸಿರುವ ಮೂರು ನಾಟಕಗಳು ರಂಗ ಭೂಮಿಯ ಮೇಲೆ ಯಶಸ್ವಿಯಾಗಿ ಪ್ರದರ್ಶನಗೊಂಡಿವೆ. ೧೯೯೬ರಲ್ಲಿ ಪ್ರಕಟವಾದ 'ಸೇವಂತಿ ಪ್ರಸಂಗ' ನಾಟಕ ಬರ್ನಾಡ್ ಷಾ ರಚಿಸಿದ 'Phymallion' ನಾಟಕದ ಯಶಸ್ವಿ ಅನುವಾದ. ಇದು ಅನಂತರ 'My Fair Lady' ಎಂಬ ಹೆಸರಿನಲ್ಲಿ ಪ್ರಸಿದ್ಧ ಚಲನಚಿತ್ರವಾಗಿದೆ. ೨೦೦೧ರಲ್ಲಿ ಪ್ರಕಟವಾದ 'ಜತೆಗಿರುವನು ಚಂದಿರ' ನಾಟಕ ಜೋಸೆಫ್ ಸ್ಟೀನ್ ರಚಿಸಿದ 'Fiddler On The Roof' ಎಂಬ ಸಂಗೀತ ನಾಟಕದ ಅನುವಾದ. ಈ ನಾಟಕದಲ್ಲಿ ಗುಳೆ ಹೊರಡಬೇಕಾಗಿ ಬಂದ ಅಲ್ಪಸಂಖ್ಯಾತ ಜ್ಯೂ ಕುಟುಂಬವೊಂದರ ಕಥಾನಕವಿದೆ. ಮೂಲದ ವಿನೋದ ಮತ್ತು ಕೌಟುಂಬಿಕತೆಯನ್ನು ಉಳಿಸಿ ಕೊಳ್ಳುವೆಡೆಯಲ್ಲಿ ಜಯಂತ ಕಾಯ್ಕಿಣಿ ಅವರ ಜೀವಂತ ಧೋರಣೆಗಳು ಅಭಿವ್ಯಕ್ತಿಗೊಂಡಿವೆ. ಈ ನಾಟಕವು ನೀನಾಸಂ ರಂಗಭೂಮಿ ಕಲಾವಿದರಿಂದ ಯಶಸ್ವಿಯಾಗಿ ಪ್ರದರ್ಶನಗೊಂಡು ಜನಪ್ರಿಯತೆ ಪಡೆದುಕೊಂಡಿದೆ. ೨೦೦೩ರಲ್ಲಿ ಪ್ರಕಟವಾದ 'ಇತಿ ನಿನ್ನ ಅಮೃತಾ' ನಾಟಕವು ಜಾವೇದ್ ಸಿದ್ದಿಕಿ ಅವರ 'ತುಮ್ಹಾರೀ ಅಮೃತಾ' ಎಂಬ ಹಿಂದಿ ನಾಟಕದ ಅನುವಾದವಾಗಿದೆ. ಈ ನಾಟಕದ ವೈಶಿಷ್ಟವೆಂದರೆ ಇದನ್ನು ಕಥೆಯಾಗಿಯೂ ಕಿರು ಕಾದಂಬರಿಯಾಗಿಯೂ ಸುಮ್ಮನೆ ಓದಿಕೊಳ್ಳಬಹುದು. ಎಲ್ಲಾದರೂ ಇಬ್ಬರೂ ಕೂತು ಕವಿತೆಯಂತೆ ವಾಚಿಸಲೂಬಹುದು. 'ರಂಗಶಂಕರ' ರಂಗ ಮಂದಿರದ ಸಹಾಯಾರ್ಥ ಈ ನಾಟಕರಂಗ ಪ್ರಯೋಗಗೊಂಡು ತುಂಬ ಜನರ ಮನಸ್ಸುಗಳನ್ನು ಗೆದ್ದಿತು.

ಜಯಂತ ಕಾಯ್ಕಿಣಿ ಅವರಿಗೆ ತಮ್ಮ ೧೯ನೆಯ ವಯಸ್ಸಿನಲ್ಲಿಯೇ 'ರಂಗದಿಂದೊಂದಿಷ್ಟು ದೂರ' ಎಂಬ ಕವನ ಸಂಕಲನಕ್ಕೆ ೧೯೭೪ರಲ್ಲಿ ಪ್ರಥಮ ಬಾರಿಗೆ 'ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ' ದೊರಕಿತು. ಅನಂತರ ತಮ್ಮ ಸಾಹಿತ್ಯ ರಚನೆಗಳಿಗಾಗಿ ಇನ್ನೂ ಮೂರು ಸಲ ರಾಜ್ಯಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದುಕೊಂಡಿರುವರು. ೧೯೮೨ರಲ್ಲಿ 'ತೆರೆದಷ್ಟೇ ಬಾಗಿಲು' ಸಣ್ಣ ಕಥೆಗಳ ಸಂಗ್ರಹಕ್ಕೆ, ೧೯೮೯ರಲ್ಲಿ 'ದಗಡೂ ಪರಬನ ಅಶ್ವಮೇಧ' ಕಥಾಸಂಕಲನಕ್ಕೆ ಮತ್ತು ೧೯೯೬ರಲ್ಲಿ 'ಅಮೃತಬಳ್ಳಿ ಕಷಾಯ' ಕಥಾಸಂಕಲನಕ್ಕೆ ಪಡೆದಿದ್ದಾರೆ. ಮತ್ತದೇ ವರ್ಷದಲ್ಲಿ ಈ ಕೃತಿಗೆ ಉತ್ತಮ ಸೃಜನಾತ್ಮಕ ಕಥೆಗಳಿಗಾಗಿ ಮೀಸಲಾಗಿರುವ 'ರಾಷ್ಟ್ರೀಯ ಕಥಾ ಪ್ರಶಸ್ತಿ' ಮತ್ತು ೧೯೯೭ರಲ್ಲಿ 'ಬಿ.ಎಚ್. ಶ್ರೀಧರ್ ಕಥಾಪ್ರಶಸ್ತಿ'ಗಳು ದೊರಕಿದವು. ೧೯೯೮ರಲ್ಲಿ 'ನೀಲಿಮಳೆ' ಕವನ ಸಂಕಲನಕ್ಕೆ 'ದಿನಕರ ದೇಸಾಯಿ ಕವನಪ್ರಶಸ್ತಿ' ಪಡೆದಿರುವರು. ಹಾಗೆಯೇ ೨೦೦೧ರಲ್ಲಿ 'ರುಜುವಾತು ಟ್ರಸ್ಟ್ ಫೆಲೋಷಿಪ್" ಪಡೆದಿದ್ದಾರೆ.

ಸಾಹಿತ್ಯ ಕ್ಷೇತ್ರವಲ್ಲದೆ ಚಿತ್ರರಂಗ ಕ್ಷೇತ್ರದಲ್ಲಿ ಅವರ ಸಾಹಿತ್ಯ ಕೃಷಿಗಾಗಿ, ಪ್ರಖ್ಯಾತಿಯ ಕಿರೀಟಕ್ಕೆ ಇನ್ನೂ ಹಲವಾರು ಪ್ರಶಸ್ತಿಯ ಗರಿಗಳು ಲಭಿಸಿದವು. ೨೦೦೪ರಲ್ಲಿ 'ಚಿಗುರಿದ ಕನಸು' ಚಿತ್ರದ ಉತ್ತಮ ಸಂಭಾಷಣೆಗಾಗಿ 'ಕರ್ನಾಟಕ ರಾಜ್ಯಪ್ರಶಸ್ತಿ' ದೊರಕಿತು. ಮತ್ತೆ ೨೦೦೬ರಲ್ಲಿ 'ಮುಂಗಾರು ಮಳೆ' ಚಿತ್ರದ 'ಅನಿಸುತಿದೆ ಯಾಕೋ ಇಂದು' ಹಾಡಿನ ಉತ್ತಮ ಸಾಹಿತ್ಯಕ್ಕಾಗಿ 'ಕರ್ನಾಟಕ ರಾಜ್ಯ ಪ್ರಶಸ್ತಿ' ಹಾಗೂ ಅದೇ ವರ್ಷ ಈಟಿವಿ ಕನ್ನಡ ವಾಹಿನಿಯ 'ಉತ್ತಮ ಸಿನಿಮಾ ಸಾಹಿತಿ' (ಬೆಸ್ಟ್ ಲಿರಿಸಿಸ್ಟ್) ಪ್ರಶಸ್ತಿಯೂ ಲಭಿಸಿತು. ಅಲ್ಲಿಂದ ಕನ್ನಡ ಚಲನಚಿತ್ರಗಳ ಜೊತೆ ಅವರ ನಂಟು ಹೆಮ್ಮರವಾಗಿ ಬೆಳೆಯುತ್ತಾ ಹೋಯಿತು. ಅನೇಕ ಚಿತ್ರಗಳಿಗೆ ಗೀತರಚನೆ ಮಾಡಿ ಯಶಸ್ವಿಯಾದರು. ೨೦೦೭ರಲ್ಲಿ 'ಮಿಲನ' ಚಿತ್ರದ 'ನಿನ್ನಿಂದಲೇ ನಿನ್ನಿಂದಲೇ' ಹಾಡಿನ ಉತ್ತಮ ಸಾಹಿತ್ಯಕ್ಕಾಗಿ 'ಕಸ್ತೂರಿ ಸಿರಿಗಂಧ ಪ್ರಶಸ್ತಿ' ದೊರಕಿತು. ಮತ್ತೆ ಅದೇ ವರ್ಷದಲ್ಲಿ 'ಗೆಳೆಯ' ಚಿತ್ರದ 'ಈ ಸಂಜೆ ಯಾಕಾಗಿದೆ' ಹಾಡಿಗೆ 'ರಾಘವೇಂದ್ರ ಚಿತ್ರವಾಣಿ ಪ್ರಶಸ್ತಿ' ದೊರಕಿದೆ. ಜೊತೆಗೆ 'ಪಬ್ಲಿಕ್ ರಿಲೇಷನ್ಸ್ ಕೌನ್ಸಿಲ್ ಆಫ್ ಇಂಡಿಯಾ' ಎಂಬ ಸಂಸ್ಥೆ ಸಿನಿಮಾ ಮಾಧ್ಯಮದ ಹಾಡಿನ ಸಾಹಿತ್ಯ ವಿಭಾಗದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವವರಿಗೆ ಕೊಡುವ 'ಚಾಣಕ್ಯ ಮಾಧ್ಯಮ ಪ್ರಶಸ್ತಿ'ಯೂ ಜಯಂತ ಕಾಯ್ಕಿಣಿ ಅವರಿಗೆ ಲಭಿಸಿದೆ. ೨೦೦೯ರಲ್ಲಿ 'ಗಾಳಿಪಟ' ಚಿತ್ರಕ್ಕೆ, ೨೦೧೦ರಲ್ಲಿ 'ಮನಸಾರೆ' ಚಲನಚಿತ್ರಗಳಿಗೆ ಶ್ರೇಷ್ಠಗೀತ ರಚನಕಾರ ಫಿಲ್ಮ್‌ಫೇರ್ ಪ್ರಶಸ್ತಿಯನ್ನು ೨ ಬಾರಿ ಪಡೆದಿದ್ದಾರೆ. ಮತ್ತದೇ ವರ್ಷ 'ಮನಸಾರೆ' ಚಿತ್ರದ ಹಾಡಿಗೆ 'ಸೌತ್‌ಸ್ಕೋಪ್ ಪ್ರಶಸ್ತಿ'ಯನ್ನು ಪಡೆದುಕೊಂಡಿದ್ದಾರೆ. ಸಿನಿಮಾ ಕ್ಷೇತ್ರದಲ್ಲಿ ನೀಡುವಂತಹ 'ವಿಜಯ ನೆಕ್ಸ್ಟ್' ಪತ್ರಿಕೆಯ ಓದುಗರ ಆಯ್ಕೆಯ 'ರಾಜ್ಯೋತ್ಸವದ ವರ್ಷದ ವ್ಯಕ್ತಿ ಪುರಸ್ಕಾರ'ವನ್ನು ೨೦೧೦ರಲ್ಲಿ ಜಯಂತರು ತಮ್ಮದಾಗಿಸಿಕೊಂಡಿದ್ದಾರೆ.

ಏಪ್ರಿಲ್ ೨೯, ೨೦೦೯ರಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ೨೦೦೮ರ ೩೪ನೇ ವಾರ್ಷಿಕ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ೬೦ ಜನರಿಗೆ 'ಆರ್ಯಭಟ ಇಂಟರ್‌ನ್ಯಾಷನಲ್ ಪ್ರಶಸ್ತಿ' ಪ್ರಧಾನ ಮಾಡಲಾಯಿತು. ಸಾಹಿತ್ಯ ಕ್ಷೇತ್ರದಲ್ಲಿನ ಸಾಧನೆಗಾಗಿ ಜಯಂತ ಕಾಯ್ಕಿಣಿ ಅವರಿಗೆ 'ಆರ್ಯಭಟ ಅಂತಾರಾಷ್ಟ್ರೀಯ ಪ್ರಶಸ್ತಿ' ಲಭಿಸಿತು. ೨೦೧೧ರಲ್ಲಿ ತುಮಕೂರು ವಿಶ್ವವಿದ್ಯಾನಿಲಯವು ಅವರಿಗೆ ಡಾಕ್ಟರೇಟ್ ಮನ್ನಣೆಯನ್ನು ನೀಡಿ ಗೌರವಿಸಿದೆ.

ಅಷ್ಟೇ ಅಲ್ಲದೆ ಮಹಾರಾಷ್ಟ್ರದ ಯಶವಂತರಾವ್ ವಿಶ್ವವಿದ್ಯಾನಿಲಯವು ಕುಸುಮಾಗ್ರಜ ಪ್ರತಿಷ್ಠಾನದ ಸಹಯೋಗದೊಡನೆ ಭಾರತೀಯ ಭಾಷೆಯ ಸಾಹಿತಿಗಳಿಗೆ ನೀಡುವ ಪ್ರತಿಷ್ಠಿತ 'ಕುಸುಮಾಗ್ರಜ ಪ್ರಶಸ್ತಿ'ಯನ್ನು ಪ್ರಾರಂಭಿಕ

ವರ್ಷದಲ್ಲಿಯೇ ಜಯಂತ ಕಾಯ್ಕಿಣಿ ಅವರಿಗೆ ೨೦೧೧ರಲ್ಲಿ ನೀಡಿದೆ. ಕಾಯ್ಕಿಣಿ ಅವರು ಈ ಪ್ರಶಸ್ತಿ ಗಳಿಸಿಕೊಂಡಿರುವುದು ಕನ್ನಡಿಗರೆಲ್ಲರಿಗೂ ಅಭಿಮಾನದ ಸಂಗತಿಯಾಗಿದೆ. ಕುಸುಮಾಗ್ರಜ ಪ್ರಶಸ್ತಿ ಪಡೆದ ಅಗ್ರಜರೆನಿಸಿಕೊಂಡಿದ್ದಾರೆ.

## ಪರಾಮರ್ಶನ ಗ್ರಂಥಗಳು


೧. (ಸಂ.) ಎಂ.ಜಿ. ಹೆಗಡೆ –ಕಟಾಂಜನ (ಗೌರೀಶ್ ಕಾಯ್ಕಿಣಿ ಸಮಗ್ರ ಸಾಹಿತ್ಯ ಸ್ಪಂದನ), ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೧.

೨. ಜಯಂತ ಕಾಯ್ಕಿಣಿ– ಜಯಂತ ಕಾಯ್ಕಿಣಿ ಕತೆಗಳು (ಪ್ರಶಸ್ತಿವಿಜೇತ ೩ ಪುಸ್ತಕಗಳ ಸಂಪುಟ), ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೦೩.

೩. ಡಾ. ಸಿ.ಎನ್. ರಾಮಚಂದ್ರನ್–ವಾಚಿಕೆ–ಜಯಂತ ಕಾಯ್ಕಿಣಿ, ನುಡಿ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೦.

೪. ಜಿ.ಎಸ್. ಅಮೂರ–ಕನ್ನಡ ಕಥನ ಸಾಹಿತ್ಯ – ಸಣ್ಣಕತೆ, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು, ೨೦೦೦.

೫. ಆನಂದ ಋಗ್ವೇದಿ – ಕಥಾಸ್ವರೂಪ, ರೂಪಪ್ರಕಾಶನ ೨೦೧೧.

೬. ಮಮತಾರಾವ್ – ಜಯಂತ ಕಾಯ್ಕಿಣಿಯವರ ಕಥನಾವರಣ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೫.

೭. ಜಯಂತ ಕಾಯ್ಕಿಣಿ – ತೂಫಾನ್‌ಮೇಲ್, ಅಂಕಿತಪುಸ್ತಕ ಪ್ರಕಾಶನ, ಬೆಂಗಳೂರು, ೨೦೦೫.

೮. (ಸಂ.) ಅವಿನಾಶ್ ಕಾಮತ್ – ನಯನಸೂತನ, ನ್ಯೂವೇಲ್ ಬುಕ್ಸ್, ೨೦೧೦.

೯. ಈಟಿವಿ – ನನ್ನ ಕಥೆ ವಿಶೇಷ ಸಂದರ್ಶನ ಕಾರ್ಯಕ್ರಮ–೨೦೧೧.


❑❑❑

# ೮. ಸಂಸ್ಕೃತ ವ್ಯಾಕರಣದಲ್ಲಿ ನಿಪಾತಗಳು

– ಶ್ರೀನಿವಾಸ

**ಪೀಠಿಕೆ**

'ಅಷ್ಟಾಧ್ಯಾಯೀ' ಗ್ರಂಥವು ಪಾಣಿನಿ ಮಹರ್ಷಿಗಳಿಂದ ರಚಿತವಾಗಿದೆ. ವೈದಿಕ ಮತ್ತು ಲೌಕಿಕ ಪದಗಳ ಸಂಸ್ಕಾರವನ್ನು ಅತಿಸುಲಭವಾಗಿ ವೈಜ್ಞಾನಿಕವಾಗಿ ತಿಳಿಯಪಡಿಸುವುದರಿಂದ ಸಂಸ್ಕೃತಭಾಷೆಯ ವ್ಯಾಕರಣ ಗ್ರಂಥಗಳ ಅಧ್ಯಯನ – ಅಧ್ಯಾಪನ ಪರಂಪರೆಯಲ್ಲಿ ಪಾಣಿನಿಯ 'ಅಷ್ಟಾಧ್ಯಾಯೀ' ಗ್ರಂಥವು ಮೂರ್ಧನ್ಯಸ್ಥಾನವನ್ನು ಹೊಂದಿದೆ. ಈ ಗ್ರಂಥವು ಎಂಟು ಅಧ್ಯಾಯಗಳಿಂದ ಒಳಗೊಂಡು, ಪ್ರತಿಯೊಂದು ಅಧ್ಯಾಯದಲ್ಲಿ ನಾಲ್ಕು ಪಾದಗಳಿಂದ ಕೂಡಿದೆ. ಸಿದ್ಧಾಂತ ಕೌಮುದೀಯ ಪ್ರಕಾರ ಅಷ್ಟಾಧ್ಯಾಯೀಯಲ್ಲಿ ೩೯೭೮ ಸೂತ್ರಗಳಿವೆ.[೧] ಈ ಸೂತ್ರಗಳಲ್ಲಿ ಪಾಣಿನಿಯು ಪ್ರಯೋಗಸಾಧನೆಗೆ ಧಾತು, ಸರ್ವನಾಮ, ತದ್ಧಿತ ಮೊದಲಾದ ಪ್ರಾಚೀನ ವೈಯಾಕರಣರ ಸಂಜ್ಞೆಯನ್ನೇ ಬಳಸಿಕೊಂಡಿದ್ದಾನೆ. ಅವುಗಳಲ್ಲಿ 'ನಿಪಾತ' ಸಂಜ್ಞೆಯೂ ಒಂದು.

**'ನಿಪಾತ' ಪದದ ನಿಷ್ಪತ್ತಿ**

'ನಿ' ಉಪಸರ್ಗಪೂರ್ವಕವಾದ ಪತ್ ಧಾತುವಿಗೆ 'ಜ್ವಲತಿಕಸನ್ತೇಭ್ಯೋ ಣಃ' (ಅಷ್ಟಾಧ್ಯಾಯೀ ಸೂತ್ರ–೩–೧–೧೪೦) ಎಂಬ ಸೂತ್ರದಿಂದ ಕರ್ತ್ರರ್ಥದಲ್ಲಿ 'ಣ' ಪ್ರತ್ಯಯ ಬಂದು 'ನಿಪಾತ' ಪದವು ನಿಷ್ಪನ್ನಗೊಂಡಿದೆ. 'ಉಚ್ಚಾವಚೇಷ್ವರ್ಥೇಷು ನಿಪತಂತೀತಿ ನಿಪಾತಾಃ' (ನಿರುಕ್ತ–೧–೨) ಎಂದು ಯಾಸ್ಕಾಚಾರ್ಯರು ಹೇಳಿದಂತೆ ಬೇರೆ ಬೇರೆ ಅರ್ಥಗಳಲ್ಲಿ ಬಳಸಲ್ಪಡುವುದರಿಂದ ನಿಪಾತವೆಂದು ಹೆಸರು. ಉದಾಹರಣೆಗೆ 'ನು' ಎನ್ನುವ ನಿಪಾತವು ಪ್ರಶ್ನ, ಪ್ರತಿವಚನ, ಉಪಮಾನ, ವಿತರ್ಕ, ಉತ್ಪ್ರೇಕ್ಷಾ, ವಿಷಾದ, ಪಾದಪೂರಣವೇ ಮೊದಲಾದ ಅರ್ಥಗಳಲ್ಲಿ ಪ್ರಯೋಗಿಸಲ್ಪಡುತ್ತದೆ.

**ಅಷ್ಟಾಧ್ಯಾಯೀಯಲ್ಲಿ ನಿಪಾತ ಪದದ ನಿರ್ವಚನ**

ಅಷ್ಟಾಧ್ಯಾಯೀಯಲ್ಲಿ 'ಪ್ರಾಗ್ರೀಶ್ವರಾನ್ನಿಪಾತಾಃ' (ಅಷ್ಟಾಧ್ಯಾಯೀ ಸೂತ್ರ ೧-೪-೫೬) ಅಧಿಕಾರ ಸೂತ್ರ.[೨] ಅಂದರೆ ಈ ಸೂತ್ರದಿಂದ ಆರಂಭಿಸಿ 'ಅಧಿರೀಶ್ವರೇ' (ಅಷ್ಟಾಧ್ಯಾಯೀ ಸೂತ್ರ ೧-೪-೯೭) ಸೂತ್ರದವರೆಗಿನವುಗಳಿಗೆ 'ನಿಪಾತ' ಸಂಜ್ಞೆಯನ್ನು ಹೇಳಲಾಗಿದೆ. ಮುಂದಿನ ನಲವತ್ತು ಸೂತ್ರಗಳಲ್ಲಿಯೂ 'ನಿಪಾತ' ಪದವು ಅನುವೃತ್ತಿಯಾಗುವುದೆಂದು ತಾತ್ಪರ್ಯ. ನಿಪಾತಾಧಿಕಾರದಲ್ಲಿ ಹೇಳಿರುವುದರಿಂದ ನಿಪಾತವೆಂಬ ಸಾಮಾನ್ಯ ಸಂಜ್ಞೆಯ ಜೊತೆಗೆ ನಿರ್ದಿಷ್ಟವಾದವುಗಳಿಗೆ ಉಪಸರ್ಗ, ಗತಿ, ಕರ್ಮಪ್ರವಚನೀಯಗಳೆಂಬ ವಿಶೇಷ ಸಂಜ್ಞೆಗಳೂ ಹೇಳಲ್ಪಟ್ಟಿವೆ. ಇದನ್ನು ಗಮನದಲ್ಲಿಟ್ಟುಕೊಂಡು ನಿಪಾತಗಳನ್ನು ನಾಲ್ಕುರೀತಿಯಾಗಿ ವಿಭಾಗಿಸಬಹುದು. ಅವು ಯಾವುದೆಂದರೆ :

೧. ಚಾದಿ ನಿಪಾತಗಳು.

೨. ಉಪಸರ್ಗ ನಿಪಾತಗಳು

೩. ಗತಿಸಂಜ್ಞಕ ನಿಪಾತಗಳು

೪. ಕರ್ಮಪ್ರವಚನೀಯ ನಿಪಾತಗಳು.

**ಚಾದಿನಿಪಾತಗಳು**

'ಚಾದಯೋऽಸತ್ವೇ' (ಅಷ್ಟಾಧ್ಯಾಯೀ ಸೂತ್ರ -೧-೪-೫೭) ಚ ಆದಿಃ ಯೇಷಾಂ ತೇ ಚಾದಯಃ. ಚ ಶಬ್ದದಿಂದ ಆರಂಭವಾಗುವ ಗಣವೇ ಚಾದಿಗಣ. ಇದು ಆಕೃತಿಗಣ. ಒಂದೇ ರೀತಿಯ ಆಕೃತಿಯನ್ನು ಅಂದರೆ ಸಮಾನರೂಪವನ್ನು ಹೊಂದುವಂತಹ ಬೇರೆ ಶಬ್ದಗಳೂ ಪ್ರಯೋಗದಲ್ಲಿವೆಯೆಂದೂ, ಶಿಷ್ಟರ ಪ್ರಯೋಗಗಳನ್ನು ಗಮನಿಸಿ ಆ ರೂಪಗಳನ್ನು ಗಣದಲ್ಲಿ ಸೇರಿಸಿಕೊಂಡು ಆಯಾ ಕಾರ್ಯಗಳನ್ನು ಮಾಡಬಹುದೆಂಬುದು ಆಕೃತಿಗಣ ಎನ್ನುವುದರ ತಾತ್ಪರ್ಯ. ಸತ್ವಮ್ = ದ್ರವ್ಯಮ್[೩] ಎಂದರ್ಥ. ನ ಸತ್ವಂ ಅಸತ್ವಂ. ದ್ರವ್ಯವಾಚಿಗಳಲ್ಲದೇ ಇರುವುದು ಅಸತ್ವ, ಅದ್ರವ್ಯಾರ್ಥಕಗಳಾದ ಚಾದಿಗಣಪಠಿತವಾದ ಶಬ್ದಗಳು ನಿಪಾತಸಂಜ್ಞೆಯನ್ನು ಹೊಂದುತ್ತವೆ ಎಂದು ಸೂತ್ರಾರ್ಥ. ಸೂತ್ರದಲ್ಲಿ 'ಅಸತ್ವೇ' (ಅದ್ರವ್ಯದಲ್ಲಿರುವವುಗಳು) ಎಂದು ಹೇಳಿರುವುದರಿಂದ 'ಪಶುಮ್ ಆನಯ' ಈ ವಾಕ್ಯದಲ್ಲಿರುವ ಪಶು ಶಬ್ದ ಹಸು (ಪ್ರಾಣಿ) ಎಂಬ ದ್ರವ್ಯಾರ್ಥವನ್ನು ಸ್ಪಷ್ಟಪಡಿಸುತ್ತಿರುವಾಗ ನಿಪಾತಸಂಜ್ಞೆ ಇಲ್ಲ.

'ಪುಷ್ಟಂ ಪಟು ಮನ್ಯತೆ' ವಾಕ್ಯದಲ್ಲಿರುವ ಪಟು ಶಬ್ದವು ಚೆನ್ನಾಗಿ ಎಂಬ ಅದ್ರವ್ಯಾರ್ಥವನ್ನು ತಿಳಿಸುತ್ತಿರುವುದರಿಂದ ನಿಪಾತ ಸಂಜ್ಞೆಯನ್ನು ಹೊಂದಿದೆ. ಹೀಗೆ ದ್ರವ್ಯವಾಚಿಗಳಲ್ಲದೇ ಇರುವ ಚ, ವಾ, ತು ಮೊದಲಾದ ಚಾದಿಗಳು ಮತ್ತು ಪ್ರ, ಪರಾ, ಸಮ್ ಮೊದಲಾದ ಪ್ರಾದಿಗಳು ನಿಪಾತ ಸಂಜ್ಞೆಯನ್ನು ಹೊಂದುತ್ತವೆ. ಚಾದಿಗಣದಲ್ಲಿ 'ಉಪಸರ್ಗವಿಭಕ್ತಿಸ್ವರಪ್ರತಿರೂಪಕಾಶ್ಚ ನಿಪಾತಾಃ' ಎಂದು ಹೇಳಿದೆ. ಉಪಸರ್ಗಗಳಂತೆ ಇರುವವುಗಳೂ, ವಿಭಕ್ತ್ಯಂತಗಳಂತೆ ಇರುವವುಗಳೂ, ಸ್ವರದಂತೆ ಇರುವವುಗಳೂ ಚಾದಿಗಣದಲ್ಲಿ ಹೇಳಬೇಕೆಂದು ಅದರರ್ಥ. 'ಅವದತ್ತಮ್' ಇಲ್ಲಿ 'ಅವ' ಎನ್ನುವುದು ಉಪಸರ್ಗ ಅಲ್ಲ. ಆದರೆ ಉಪಸರ್ಗಕ್ಕೆ ಸಮಾನವಾಗಿದೆ. ಇವುಗಳೇ ಉಪಸರ್ಗ ಪ್ರತಿರೂಪಕಗಳು. ಆದ್ದರಿಂದ 'ಅಚಉಪಸರ್ಗಾತ್ತಃ' (ಅಷ್ಟಾಧ್ಯಾಯೀ ಸೂತ್ರ ೭-೪-೪೭) ಎಂಬ ಸೂತ್ರದಿಂದ ತಕಾರಾದೇಶ ಬರುವುದಿಲ್ಲ. 'ಅಹಂಯುಃ' ಸುಬಂತ ಪ್ರತಿರೂಪಕಕ್ಕೆ ಉದಾಹರಣೆಯಾದರೆ, 'ಅಸ್ತಿಕ್ಷೀರಾ' ಎಂಬುದು ತಿಙನ್ತಪ್ರತಿರೂಪಕಕ್ಕೆ ಉದಾಹರಣೆಯಾಗಿದೆ. 'ಅ' ಅಪೇಹಿ, 'ಇ' ಇಂದ್ರಂ ಪಶ್ಯ ಇಲ್ಲಿರುವ ಅ, ಇ, ಮೊದಲಾದವುಗಳು ಸ್ವರಪ್ರತಿರೂಪಕಗಳಿಗೆ ಉದಾಹರಣೆಗಳು.

**ಉಪಸರ್ಗಗಳು**

'ಪ್ರಾದಯಃ' (ಅಷ್ಟಾಧ್ಯಾಯೀ ಸೂತ್ರ-೧-೪-೫೮)'ಉಪಸರ್ಗಾಃ ಕ್ರಿಯಾಯೋಗೇ' (ಅಷ್ಟಾಧ್ಯಾಯೀ ಸೂತ್ರ-೧-೪-೫೯) ಪ್ರ ಆದಿಃ ಯೇಷಾಂ ತೇ ಪ್ರಾದಯಃ. ಪ್ರ ಶಬ್ದದಿಂದ ಆರಂಭವಾಗುವ ಗಣವೇ ಪ್ರಾದಿಗಣ. ಪ್ರ, ಪರಾ, ಅಪ, ಸಮ್, ಅನು, ಅವ, ನಿಸ್, ನಿರ್, ದುಸ್, ದುರ್, ವಿ, ಆಙ್, ನಿ, ಅಧಿ, ಅಪಿ, ಅತಿ, ಸು, ಉತ್, ಅಭಿ, ಪ್ರತಿ, ಪರಿ, ಉಪ (೨೨) ಇವೇ ಪ್ರಾದಿಗಣಪಠಿತವಾದವುಗಳು. ಇವುಗಳು ಕ್ರಿಯೆಯೊಡನೆ ಅನ್ವಯ ಹೊಂದಿರುವಾಗ ಉಪಸರ್ಗ ಸಂಜ್ಞೆಯನ್ನು ಹೊಂದುತ್ತವೆ. ಉಪಸರ್ಗಗಳು ಲೋಕದಲ್ಲಿ ಧಾತುವಿನ ಹಿಂದೆ ಪ್ರಯೋಗಿಸಲ್ಪಡುತ್ತವೆ.

ಉಪಸರ್ಗಯೋಗದಿಂದಾಗಿ ಕೆಲವೊಮ್ಮೆ ಧಾತುವಿನ ಅರ್ಥದಲ್ಲಿ ಬದಲಾವಣೆಯಾಗುತ್ತದೆ. ಉದಾಹರಣೆಗೆ ಸ್ಮರತಿ=ವಿಸ್ಮರತಿ. 'ಸ್ಮರ' ಧಾತುವಿನ ವರ್ತಮಾನಕಾಲದ ರೂಪ ಸ್ಮರತಿ ಎಂದು. (ನೆನಪಿಸಿಕೊಳ್ಳುತ್ತಾನೆ) ಅದೇ ಸ್ಮರ ಧಾತುವಿಗೆ 'ವಿ' ಎಂಬ ಉಪಸರ್ಗಯೋಗವಿದ್ದಾಗ ವಿಸ್ಮರತಿ (ಮರೆತುಬಿಡುತ್ತಾನೆ) ಹೀಗೆ ಧಾತುವಿನ ಅರ್ಥದಲ್ಲಾದ ಬದಲಾವಣೆಯನ್ನು ನಾವು ನೋಡಬಹುದು.

ಉಪಸರ್ಗವು ಕೆಲವೊಮ್ಮೆ ಧಾತುವಿನ ಅರ್ಥವನ್ನೇ ಅನುಸರಿಸುತ್ತದೆ. ಉದಾಹರಣೆಗೆ ಸೂತೇ - ಪ್ರಸೂತೇ. ಷೂಙ್ ಪ್ರಸವೇ ಧಾತುವಿನ ಅರ್ಥ ಉತ್ಪತ್ತಿ. ಸೂತೇ ಎಂಬುದು ವರ್ತಮಾನಕಾಲದ ರೂಪ. 'ಪ್ರ' ಎಂಬ ಉಪಸರ್ಗ

ಸಂಬಂಧದಿಂದಾಗಿ ಅರ್ಥದಲ್ಲಿ ಯಾವುದೇ ಬದಲಾವಣೆಯಾಗದೆ ಧಾತ್ವರ್ಥವಾದ ಉತ್ಪತ್ತ್ಯರ್ಥವನ್ನೇ 'ಪ್ರ' ಉಪಸರ್ಗವು ಅನುಸರಿಸಿದ್ದನ್ನು ಇಲ್ಲಿ ಗಮನಿಸಬಹುದು.

ಕೆಲವು ಉಪಸರ್ಗಗಳು ಧಾತ್ವರ್ಥವನ್ನು ವಿಶೇಷವಾಗಿ ಪ್ರಕಟಗೊಳಿಸುತ್ತವೆ. ಉದಾಹರಣೆಗೆ – ಈಕ್ಷತೇ – ನಿರೀಕ್ಷತೇ, ಜಯತಿ – ವಿಜಯತೇ, ಭವತಿ – ಪ್ರಭವತಿ. ಇವು ಉಪಸರ್ಗಗಳ ಯೋಗದಿಂದಾಗುವ ಮೂರು ರೀತಿಯ ಪರಿಣಾಮಗಳು.[೪] ಆತ್ಮನೇ ಪದ, ಪರಸ್ಮೈಪದ, ಸಮಾಸ, ಷತ್ವ, ಣತ್ವಾದಿ ಬಹಳಷ್ಟು ಕಾರ್ಯಗಳು ಉಪಸರ್ಗಗಳನ್ನು ಆಶ್ರಯಿಸಿ ಹೇಳಲ್ಪಟ್ಟಿವೆ.

**ಗತಿಸಂಜ್ಞಕ ನಿಪಾತಗಳು**

'ಗತಿಶ್ಚ' (ಅಷ್ಟಾಧ್ಯಾಯೀ ಸೂತ್ರ ೧–೪–೬೦) ಪ್ರಾದಿಗಳು ಕ್ರಿಯೆಯೊಡನೆ ಅನ್ವಯ ಹೊಂದಿರುವಾಗ ಉಪಸರ್ಗಸಂಜ್ಞೆಯನ್ನೂ ಗತಿಸಂಜ್ಞೆಯನ್ನೂ ಹೊಂದುತ್ತವೆ ಎಂದು ಸೂತ್ರಾರ್ಥ. ಈ ಸೂತ್ರದಿಂದ ಆರಂಭಿಸಿ 'ಜೀವಿಕೋಪನಿಷದಾವೌಪಮ್ಯೇ' (ಅಷ್ಟಾಧ್ಯಾಯೀ ಸೂತ್ರ ೧–೪–೭೯) ಸೂತ್ರದವರೆಗಿನ ಶಬ್ದಾರ್ಥವಿಶೇಷಗಳಿಗೆ ಗತಿಸಂಜ್ಞೆಯನ್ನು ಹೇಳಲಾಗಿದೆ. ಊರ್ಯಾದಿಗಣಪಠಿತವಾದವುಗಳಿಗೆ (ಊರೀಕೃತ್ಯ), ಪ್ರತ್ಯಯಾಂತವಾದವುಗಳಿಗೆ (ಶುಕ್ಲೀಕೃತ್ಯ), ಡಾಚ್ ಪ್ರತ್ಯಯಾಂತವಾದವುಗಳಿಗೆ (ಪಟಪಟಾಕೃತ್ಯ) ಗತಿಸಂಜ್ಞೆಯನ್ನು ಪಾಣಿನಿಯು ಹೇಳಿರುತ್ತಾನೆ.

'ಕುಗತಿ ಪ್ರಾದಯಃ' (ಅಷ್ಟಾಧ್ಯಾಯೀ ಸೂತ್ರ ೨–೨–೧೮) ಎಂಬ ಸೂತ್ರದಿಂದ ಕುತ್ಸಿತಾರ್ಥಕವಾದ ಕುಶಬ್ದ, ಗತಿಸಂಜ್ಞೆಯನ್ನು ಹೊಂದುವ ಶಬ್ದಗಳು ಮತ್ತು ಪ್ರಾದಿಗಣದಲ್ಲಿ ಹೇಳಲ್ಪಟ್ಟ ಶಬ್ದಗಳು ಸಮರ್ಥವಾದ ಮತ್ತೊಂದು ಪದದೊಡನೆ ನಿತ್ಯವಾಗಿ ತತ್ಪುರುಷ ಸಮಾಸವನ್ನು ಹೊಂದುತ್ತವೆ. ಇವು ಗತಿಸಂಜ್ಞಕ ನಿಪಾತಗಳ ಪ್ರಯೋಜನಗಳು.

**ಕರ್ಮಪ್ರವಚನೀಯ ನಿಪಾತಗಳು**

'ಕರ್ಮಪ್ರವಚನೀಯಾಃ' (ಅಷ್ಟಾಧ್ಯಾಯೀ ಸೂತ್ರ ೧–೪–೮೩) ಇದೊಂದು ಅಧಿಕಾರ ಸೂತ್ರ. ಇಲ್ಲಿಂದ ಆರಂಭಿಸಿ 'ವಿಭಾಷಾ ಕೃಞಿ' (ಅಷ್ಟಾಧ್ಯಾಯೀ ಸೂತ್ರ ೧–೪–೯೮) ಸೂತ್ರದವರೆಗಿನ ಅರ್ಥವಿಶೇಷಗಳಿಗೆ ಕರ್ಮಪ್ರವಚನೀಯ ಸಂಜ್ಞೆ ವಿಹಿತವಾಗಿದೆ. ಕರ್ಮ ಎಂದರೆ ಕ್ರಿಯೆ. ಕರ್ಮ ಪ್ರೋಕ್ತವಂತಃ ತೇ ಕರ್ಮಪ್ರವಚನೀಯಾಃ ಎಂದು ಪದದ ನಿರ್ವಚನ. ಕ್ರಿಯಾರ್ಥ ಸಂಬಂಧವಲ್ಲಿ ಕರ್ಮಪ್ರವಚನೀಯ ಪದವನ್ನು ಇಲ್ಲಿ ಹೇಳಿದೆ. ಪ್ರಾದಿಗಣದಲ್ಲಿ ಪಠಿತವಾದ ಅನು, ಉಪ, ಪ್ರತಿ, ಪರಿ, ಅಭಿ, ಅಧಿ, ಸು, ಅತಿ, ಅಪಿ, ಅಪ, ಆಙ್ ಈ ಹನ್ನೊಂದು ನಿಪಾತಗಳು ಕರ್ಮಪ್ರಚವನೀಯ ಸಂಜ್ಞೆಯನ್ನು ಪಡೆಯುತ್ತವೆ.

ಪಾಣಿನಿಯು ಪ್ರಾದಿಗಣಪಠಿತವಾದ ಶಬ್ದಗಳಿಗೆ ಕ್ರಿಯಾವಾಚಕತ್ವ ತೋರುವಾಗ ಉಪಸರ್ಗ ಮತ್ತು ಗತಿ ಎಂಬ ಸಂಜ್ಞೆಗಳನ್ನು ಹೇಳಿರುತ್ತಾನೆ. ಆದರೆ ಆ ಎರಡೂ ಸಂಜ್ಞೆಗಳನ್ನು ಬಾಧಿಸಿ ಬೇರೊಂದು ಕ್ರಿಯೆಯಿಂದ ನಿರೂಪಿತವಾದ ಸಂಬಂಧವನ್ನು ಮಾತ್ರ ಹೇಳುವಾಗ ಕರ್ಮಪ್ರವಚನೀಯ ಎಂಬ ಅನ್ವರ್ಥ ಸಂಜ್ಞೆಯನ್ನು ಈ ನಿಪಾತಗಳು ಪಡೆಯುತ್ತವೆ. ಉದಾಹರಣೆಗೆ – "ಜಪಮ್ ಅನು ಪ್ರಾವರ್ಷತ್ ।" ವರುಣ ಜಪ ಮುಗಿದ ಮೇಲೆ ಮಳೆ ಸುರಿಯಿತು ಎಂದು ವಾಕ್ಯದ ಅರ್ಥ. ಮಳೆಗೆ ಕಾರಣವಾದ (ಹೇತು) ಜಪವನ್ನು 'ಅನು' ಸೂಚಿಸುತ್ತದೆ. 'ಅನು' ನಿಪಾತವು ಕಾರ್ಯಕಾರಣಭಾವವನ್ನು ತಿಳಿಸುತ್ತಿದೆ. ಆದ್ದರಿಂದ 'ಅನುರ್ಲಕ್ಷಣೇ'(ಅಷ್ಟಾಧ್ಯಾಯೀ ಸೂತ್ರ ೧–೪–೮೪) ಸೂತ್ರದಿಂದ 'ಅನು'ವಿಗೆ ಕರ್ಮಪ್ರವಚನೀಯ ಸಂಜ್ಞೆ, 'ಕರ್ಮಪ್ರವಚನೀಯಯುಕ್ತೇ ದ್ವಿತೀಯಾ' (ಅಷ್ಟಾಧ್ಯಾಯೀ ಸೂತ್ರ ೨–೩–೮) ಸೂತ್ರದಿಂದ 'ಅನು' ನಿಪಾತದ ಯೋಗದಿಂದಾಗಿ ಜಪ ಶಬ್ದಕ್ಕೆ ದ್ವಿತೀಯಾ ವಿಭಕ್ತಿ ವಿಧಿಸಲ್ಪಟ್ಟಿದೆ. ಇವು ಕರ್ಮಪ್ರವಚನೀಯ ಸಂಜ್ಞಕ ನಿಪಾತಗಳ ಪ್ರಯೋಜನಗಳು.

## ಉಪಸಂಹಾರ

ನಿಪಾತಗಳೆಲ್ಲವೂ ಅವ್ಯಯಗಳೇ ಆಗಿವೆ. 'ಸ್ವರಾದಿನಿಪಾತಮವ್ಯಯಮ್' (ಅಷ್ಟಾಧ್ಯಾಯೀ ಸೂತ್ರ ೧–೧–೩೭) ಎಂಬ ಪಾಣಿನಿ ಸೂತ್ರವು ಸ್ವರಾದಿಗಣದಲ್ಲಿ ಹೇಳಿರುವ ಶಬ್ದಗಳಿಗೆ ಮತ್ತು ಎಲ್ಲಾ ನಿಪಾತಗಳಿಗೆ ಅವ್ಯಯ ಸಂಜ್ಞೆಯನ್ನು ವಿಧಿಸುತ್ತದೆ

ಯಾವ ಶಬ್ದಸ್ವರೂಪವು ಮೂರು ಲಿಂಗಗಳಲ್ಲಿಯೂ, ಎಲ್ಲಾ ವಿಭಕ್ತಿಗಳಲ್ಲಿಯೂ, ಎಲ್ಲಾ ವಚನಗಳಲ್ಲಿಯೂ ಯಾವುದೇ ವಿಕಾರವನ್ನು (ಬದಲಾವಣೆಯನ್ನು) ಹೊಂದದೆ ಏಕರೂಪವಾಗಿ ಇರುವುದೋ ಅದು ಅವ್ಯಯ.[೧]

### ಅಡಿಟಿಪ್ಪಣಿಗಳು

೧. ॥ ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋ ಮುಖಮ್ ।
ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ॥ (ಪರಾಶರನ ಉಪಪುರಾಣ)

೨. 'ಸ್ವದೇಶಫಲಶೂನ್ಯತ್ವೇ ಸತಿ ಉತ್ತರತ್ರ ಫಲಜನಕತ್ವಮ್'
ಅಧಿಕಾರ ಸೂತ್ರ ಲಕ್ಷಣಂ (ಅಷ್ಟಾಧ್ಯಾಯೀ ಸೂತ್ರಪಾಠ ಪೂರ್ವಪೀಠಿಕೆ – ಪುಟಸಂಖ್ಯೆ–೧೧)

೩. "ಲಿಂಗಸಂಖ್ಯಾಕಾರಕಾನ್ವಿತಂ ದ್ರವ್ಯಮ್" (ಸಿದ್ಧಾಂತ ಕೌಮುದೀ ಬಾಲಮನೋರಮಾ ವ್ಯಾಖ್ಯಾ)

೪. ॥ ಧಾತ್ವರ್ಥಂ ಬಾಧತೇ ಕಶ್ಚಿತ್ ಕಶ್ಚಿತ್ತಮನುವರ್ತತೇ ।
ವಿಶಿನಷ್ಟಿ ತಮೇವಾರ್ಥಮುಪಸರ್ಗಗತಿಸ್ತ್ರಿಧಾ ॥
(ಮಧ್ಯ ಸಿದ್ಧಾಂತ ಕೌಮುದೀ ಪುಟಸಂಖ್ಯೆ–೧೫೩)

೧. ॥ ಸದೃಶಂ ತ್ರಿಷು ಲಿಂಗೇಷು ಸರ್ವಾಸು ಚ ವಿಭಕ್ತಿಷು
ವಚನೇಷು ಚ ಸರ್ವೇಷು ಯನ್ನವ್ಯೇತಿ ತದವ್ಯಯಮ್ ॥
(ಪತಂಜಲಿ ಮಹಾಭಾಷ್ಯ ೧-೧-೩೮. ಸಿದ್ಧಾಂತ ಕೌಮುದೀ ಅವ್ಯಯ ಪ್ರಕರಣ)

## ಗ್ರಂಥ ಋಣ


೧. **"ಅಷ್ಟಾಧ್ಯಾಯೀ ಸೂತ್ರಪಾಠ"** – ಭಗವಾನ್ ಪಾಣಿನಿಃ, ಕೃಷ್ಣದಾಸ ಅಕಾಡೆಮಿ, ವಾರಾಣಸಿ, ೧೯೮೫.

೨. **"ಅಷ್ಟಾಧ್ಯಾಯೀ"**– ಭಗವಾನ್ ಪಾಣಿನಿಃ; ವ್ಯಾಖ್ಯಾಕಾರ ಪಂಡಿತ ಈಶ್ವರಚಂದ್ರ , ಚೌಖಾಂಬಾ ಸಂಸ್ಕೃತ ಪ್ರತಿಷ್ಠಾನ, ದಿಲ್ಲಿ, ೨೦೦೪.

೩. **"ನಿರುಕ್ತಮ್"** – ಶ್ರೀಮದ್ ಯಾಸ್ಕಃ, ಸಂಪಾದಕರು–ಪಂಡಿತ ದೇವಶರ್ಮ ಶಾಸ್ತ್ರೀ, ಭಾರತ ಭಾರತೀ ಪ್ರೆಸ್, ದಿಲ್ಲಿ, ೧೯೬೩.

೪. **"ವೈಯಾಕರಣ ಸಿದ್ಧಾಂತ ಕೌಮುದೀ"** – ಶ್ರೀಮದ್ ಭಟ್ಟೋಜಿದೀಕ್ಷಿತಃ, (ಬಾಲಮನೋರಮಾ, ತತ್ತ್ವಬೋಧಿನೀ ಸಹಿತ) ಮೋತಿಲಾಲ ಬನಾರಸಿದಾಸ್, ದಿಲ್ಲಿ, ೨೦೦೧.

೫. **"ಪ್ರೌಢಮನೋರಮಾ"**– ಶ್ರೀಮದ್ ಭಟ್ಟೋಜಿದೀಕ್ಷಿತ, ಚೌಖಾಂಬಾ ಸಂಸ್ಕೃತ ಪ್ರತಿಷ್ಠಾನ, ದಿಲ್ಲಿ, ೧೯೮೬.

೬. **"ನಿಪಾತಾರ್ಥ ನಿರ್ಣಯಃ"** – ಡಾ॥ ಹರಿಶ್ಚಂದ್ರತ್ರಿಪಾಠಿ, ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸಿ, ೧೯೯೦

೭. **"ವ್ಯಾಕರಣ ಮಹಾಭಾಷ್ಯಮ್"**– ಭಗವಾನ್ ಪತಂಜಲಿಃ, (ಪ್ರದೀಪ ಉದ್ಯೋತ ವ್ಯಾಖ್ಯಾ ಸಹಿತ) ಮೋತಿಲಾಲ ಬನಾರಸೀದಾಸ್, ದಿಲ್ಲಿ, ೧೯೭೬.

೮. **"ಮಧ್ಯಸಿದ್ಧಾಂತ ಕೌಮುದೀ"**– ಡಾ॥ ಶ್ರೀ ಸುರೇಶಚಂದ್ರ ಶರ್ಮಾ, ಸುಬೋಧಿನೀ ಸಂಸ್ಕೃತ ಹಿಂದೀವ್ಯಾಖ್ಯಾಸಹಿತ , ಚೌಖಾಂಬಾ ಸಂಸ್ಕೃತ ಪ್ರತಿಷ್ಠಾನ, ವಾರಾಣಸಿ, ೨೦೦೮.


□□□

# ೯. ಸ್ತ್ರೀವಾದಿ ಚಿಂತನೆಯ ತಾತ್ತ್ವಿಕ ನೆಲೆಗಳು

*– ಎಚ್.ಎಲ್. ದೇಖಾ*

ಸ್ತ್ರೀವಾದ, ಸ್ತ್ರೀವಾದಿ ಎಂಬ ಪದಗಳು ಕೆಲವರಲ್ಲಿ ಗೊಂದಲ, ಭಯ, ಸಂದೇಹಗಳನ್ನು ಸೃಷ್ಟಿಸಿದೆ. ಸ್ತ್ರೀವಾದಿಗಳೆಂದರೆ ಪುರುಷ ದ್ವೇಷಿಗಳು, ಕುಟುಂಬ ವಿನಾಶಕರು, ಸ್ತ್ರೀತ್ವವನ್ನು ನಿರಾಕರಿಸುವವರು, ಪುರುಷರ ಬಗ್ಗೆ ಅಸಹ್ಯ ಹಾಗೂ ತಿರಸ್ಕಾರ ಹೊಂದಿರುವವರು ಸ್ತ್ರೀವಾದಿಗಳು ಎಂದು ಅವರು ಸಾಮಾಜಿಕ ಸ್ವಾಸ್ಥ್ಯವನ್ನು ಕೆಡಿಸುವ ವೈರಾಣುಗಳು ಎಂಬ ಅಪಪ್ರಚಾರ ನಡೆದಿದೆ. ಇದರೊಂದಿಗೆ 'ನಾನು ಮಾನವತಾವಾದಿ ಆದರೆ ಸ್ತ್ರೀವಾದಿ ಅಲ್ಲ' ಎನ್ನುವವರಿದ್ದಾರೆ. ಮಾನವತಾವಾದದಿಂದ ಬೇರೆಯಾಗುವ ಸ್ತ್ರೀವಾದವನ್ನು ಸರಿಯಾಗಿ ಗ್ರಹಿಸದೆ ಅರ್ಥವ್ಯಾಪ್ತಿಯಲ್ಲಿ ಸಂಕುಚಿತಗೊಳ್ಳುವ ಸಂದರ್ಭ ಸೃಷ್ಟಿಗೊಂಡಿದೆ. ಜನಪ್ರಿಯ ಸಂಸ್ಕೃತಿಯ ಪ್ರಸಾರಮಾಧ್ಯಮಗಳ ಅಪಪ್ರಚಾರವು ನಿರಂತರವಾಗಿ ಸ್ತ್ರೀವಾದದ ಬಗೆಗೆ ತಪ್ಪು ಕಲ್ಪನೆಗಳನ್ನು ಪರಿಣಾಮಕಾರಿಯಾಗಿ ಬಿತ್ತುತ್ತಾ ಬಂದಿದೆ. ವ್ಯಾಪಾರಿ ಜಗತ್ತಿನ ಪುರುಷ ನಿಯಂತ್ರಣದಲ್ಲಿರುವ ಈ ಮಾಧ್ಯಮಗಳು ಸ್ತ್ರೀವಾದವೆಂದರೆ 'ಬ್ರಾಸುಡುವಿಕೆ', 'ಪುರುಷದ್ವೇಷ', 'ಕುಟುಂಬನಾಶ' ಮೊದಲಾದ ಅವಗ್ರಹಿಕೆಗೆ ಜನಸಾಮಾನ್ಯರನ್ನು ಪ್ರೇರೇಪಿಸುತ್ತಿವೆ (ಮಹಿಳಾ ಅಧ್ಯಯನದ ತಾತ್ತ್ವಿಕ ನೆಲೆಗಳು–ಪುಟ–೨೮). ಆದರೆ ಸ್ತ್ರೀವಾದವೆನ್ನುವುದು ಒಂದು ಗಂಭೀರ ಚಿಂತನೆ. ಜೀವನ ಕ್ರಮ. ಪ್ರಾಮಾಣಿಕ ನಂಬಿಕೆ, ಪ್ರತಿಭಟನಾತ್ಮಕ ಹೋರಾಟದ ತಾತ್ತ್ವಿಕತೆಯಾಗಿದೆ.

ಸ್ತ್ರೀಯರ ಪರವಾಗಿ ಆಲೋಚಿಸಿ ಅವರ ಬಗೆಗಿನ ಸಮಸ್ಯೆ, ಅನ್ಯಾಯ, ಲೈಂಗಿಕ ಶೋಷಣೆ, ವಿವಿಧ ಕ್ಷೇತ್ರದ ಶೋಷಣೆಯ ವಿರುದ್ಧ ಧ್ವನಿಯೆತ್ತುವುದೇ ಅಲ್ಲದೆ ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರದ ಚಿಂತನೆಯನ್ನು ಮಾಡುವುದೂ ಕೂಡ ಸ್ತ್ರೀವಾದವಾಗಿದೆ.

ಸ್ತ್ರೀವಾದಿ ತಾತ್ವಿಕತೆ ಬಹುರೂಪಿಯಾದದ್ದಾದರೂ ಎಲ್ಲ ಸ್ತ್ರೀವಾದಿ ಪಂಥಗಳಲ್ಲೂ ಕಂಡುಬರುವ ಮತ್ತೆ ಮತ್ತೆ ಚರ್ಚೆಗೆ ಒಳಗಾಗುವ ಕೆಲವು

ತಾತ್ತ್ವಿಕಾಂಶಗಳು ಮಹಿಳೆ, ಪಿತೃ ಪ್ರಾಧಾನ್ಯತೆ, ವೈಯಕ್ತಿಕ ರಾಜಕಾರಣ ಅಥವಾ ವ್ಯಕ್ತಿ ಸ್ವಾತಂತ್ರ್ಯದ ಪರಿಕಲ್ಪನೆ, ಲಿಂಗ ತಾರತಮ್ಯ, ಅಧಿಕಾರ, ಶಿಕ್ಷಣ ಮೊದಲಾದವುಗಳನ್ನು ಒಳಗೊಂಡಿದೆ.

"ಸ್ತ್ರೀವಾದಿ ವಿಮರ್ಶೆಯು ಮಹಿಳೆಯರ ಅನುಭವಕ್ಕೆ ಪ್ರಾಮಾಣಿಕವಾಗಿರಬೇಕು ಹಾಗೂ ಅವರಿಗೆ ಅದೊಂದು ವೇದಿಕೆಯಾಗಬೇಕು. ಸಾಂಸ್ಕೃತಿಕ ದ್ವಿಲಿಂಗತ್ವವನ್ನು ಸಾಧಿಸಲು ಸಹಾಯ ಮಾಡಬೇಕು. ಸ್ತ್ರೀಯ ವಿಕಸನಕ್ಕೆ ಮಾದರಿಗಳನ್ನು ಕೊಡಬೇಕು. ಸೋದರಿತ್ವವನ್ನು ಬೆಳೆಸಬೇಕು, ಸ್ತ್ರೀಯರ ಪ್ರಜ್ಞಾವೃದ್ಧಿ, ಜಾಗೃತಿಗೆ ಕಾರಣರಾಗಬೇಕು" ಎನ್ನುವ ಚೆರ್ರಿ ರಿಜಿಸ್ಟರ್ ಮಾತುಗಳು 'ಹೆಣ್ಣು ಮಕ್ಕಳಿಗೆ ತಲೆಯೇ ಇಲ್ಲ ಬೇರೆಲ್ಲಾ ಇದೆ' ಎಂಬ ಸಾಂಪ್ರದಾಯಿಕ ನಂಬಿಕೆಯನ್ನು ತಳ್ಳಿಹಾಕಿ ಬರೆಯಲಾರಂಭಿಸಿದಾಗ ಮಾತ್ರ ಅರ್ಥಪೂರ್ಣವಾಗಲೂ ಸಾಧ್ಯ. ಇಂದು ನಾವು ಅದೇ ದಾರಿಯಲ್ಲಿ ಸಾಗಿದ್ದೇವೆ ಎಂಬುದು ಸಂತೋಷದಾಯಕ.

ಮಹಿಳೆ ಹೆಣ್ಣಾಗಿರುವುದೇ ಅವಳ ಶೋಷಣೆಯ ಮೂಲವಾಗಿದೆ. ಮಹಿಳೆಯರೆಲ್ಲ ಜೈವಿಕ ವಿಭಿನ್ನತೆಯ ನೆಲೆಯಿಂದ ಶೋಷಿತರಾಗಿರುವ ಒಂದು ಪ್ರತ್ಯೇಕ ಮಾನವ ಸಮುದಾಯವಾಗಿದ್ದಾರೆ. ಇವರ ಸಮಸ್ಯೆಗಳು ಕೇವಲ ಮಾನಸಿಕವಾದುವುಗಳು ಮಾತ್ರವಲ್ಲ. ಅವುಗಳ ಹಿಂದೆ ಒಂದು ವ್ಯವಸ್ಥಿತವಾದ ಲಿಂಗ ರಾಜಕಾರಣವಿದೆ. ಒಬ್ಬ ಮಹಿಳೆಯ ಅನುಭವ ಎಲ್ಲಾ ಮಹಿಳೆಯರದೂ ಆಗಬಹುದು ಎಂಬ ರಾಜಕೀಯ ಗ್ರಹಿಕೆಗಳಿಂದ ಸ್ತ್ರೀವಾದಿಗಳು ಸ್ತ್ರೀತ್ವ ಅಥವಾ ಸ್ತ್ರೀ ಸ್ವಭಾವಕ್ಕೆ ಅತಿಯಾಗಿ ಒತ್ತು ನೀಡಿದ್ದಾರೆ. ಸ್ತ್ರೀ ಸಂಬಂಧಿತವಾದ ಎಲ್ಲಾ ಲಕ್ಷಣಗಳನ್ನು ಕೊಂಡಾಡಿ ವೈಭವೀಕರಿಸುವುದರ ಮೂಲಕ ಪುರುಷ ಶ್ರೇಷ್ಠತೆಯ ವ್ಯವಸ್ಥೆಗೆ ಪರ್ಯಾಯವೊಂದನ್ನು ಕಟ್ಟುವುದು ಇಂದಿನ ಸ್ತ್ರೀ ಸಮೃದ್ಧತಾವಾದಿಗಳ ಆಶಯ ಕೂಡ ಆಗಿದೆ. ಆದ್ದರಿಂದಲೇ ಹೆಣ್ಣು ಎಂಬುದು ನನ್ನ ಗುಲಾಮಗಿರಿಯ ಹೆಸರು, ಸ್ತ್ರೀವಾದವೆಂಬುದು ನನಗೆ ಸ್ವಾತಂತ್ರ್ಯವನ್ನು ಗುರುತನ್ನು ಕೊಡುತ್ತದೆ ಎನ್ನುತ್ತಾರೆ ಎನ್ನ್‌ಸ್ನಿಟಾ.

ಮಹಿಳೆಯರು ಶೋಷಿತ ಗುಂಪಿನಲ್ಲಿರುವಂತೆ, ಶೋಷಕ ಗುಂಪಿನೊಳಗೂ ಇರುವುದೇ ಮುಖ್ಯ ಸಮಸ್ಯೆಯಾಗಿದೆ. ಗೃಹಿಣಿಯರು ಹೆಸರಿಲ್ಲದ ಸಮಸ್ಯೆಯಲ್ಲಿ ತೊಳಲಾಡುವುದನ್ನು ತಮ್ಮ 'ದಿ ಫೆಮಿನೈನ್ ಮಿಸ್ಟಿಕ್' (ಹೆಣ್ಣುತನದ ಕಣ್ಕಟ್ಟು ಅನುವಾದ – ಶ್ರೀಮತಿ ಎಚ್.ಎಸ್.) ಕೃತಿಯಲ್ಲಿ ಬೆಟ್ಟಿ ಫ್ರೀಡನ್ ವಿಶ್ಲೇಷಿಸಿರುವರು. ಇವರು ಕಣ್ಕಟ್ಟಿನ ಬಗೆಗೆ ಹೇಳುತ್ತಾ ಗಂಡುತನ, ಹೆಣ್ಣುತನ ಎಂಬೆರಡು ಕಣ್ಕಟ್ಟುಗಳು ಇದ್ದವು. ಅವುಗಳಲ್ಲಿ 'ಹೆಣ್ಣುತನ' ಎಂಬ ಕಣ್ಕಟ್ಟಿಗೆ ಒಳಗಾಗಿ ತಮ್ಮ ಆತ್ಮ ಪ್ರತ್ಯಯವನ್ನೆ

ನಾಶಗೊಳಿಸಿಕೊಂಡು ಬದುಕುತ್ತಿರುವ ಮಹಿಳೆಯರ ಮನಸ್ಥಿತಿಯನ್ನು ವಿಶ್ಲೇಷಿಸುತ್ತಾರೆ. ಇದರೊಂದಿಗೆ 'ಸಂಸಾರದ ಗುಟ್ಟು' ಎಂಬ ವಿಶೇಷ ಕಣ್ಕಟ್ಟು ಹೆಣ್ಣನ್ನು ಆವರಿಸಿದೆ (ಪುಟ-೧೮). ಹೆಣ್ಣು ಸಮಾನ ನೆಲೆಯವಳೆಂದು ಹೇಳುತ್ತಲೆ ಮೊದಲ್ಲೆಲ್ಲಾ ಕಣ್ಕಟ್ಟುಗಳನ್ನು ಹೇಳಿದರೆ, ಇಂದು ಈಗಿನ ಜ್ಞಾನ ವಲಯಗಳು ಮಿಥ್‌ಗಳ ಮೂಲಕ ಹೆಣ್ಣಿಗೆ ಅಧೀನ ನೆಲೆಯನ್ನು ಸ್ಥಿರೀಕರಿಸುತ್ತಿವೆ. ಇವುಗಳೆಲ್ಲವನ್ನು ವಿಚಾರ ಮಾಡುವ ಮೂಲಕ ಸಾಮಾಜಿಕ ಚಿಂತನೆಗಳಲ್ಲಿ ಸ್ತ್ರೀವಾದವು ಒಂದು ಮುಖ್ಯ ಧ್ವನಿಯಾಗಿ ಕೇಳಿ ಬರುತ್ತಿದೆ.

ಹೆಣ್ಣಿನ ಎಲ್ಲ ಕ್ರಿಯೆಯೊಂದಿಗೆ ಲೈಂಗಿಕ ಚಹರೆಯ ಮುದ್ರೆ ದಟ್ಟವಾಗಿ ಇದೆ. ಸ್ತ್ರೀ ಸಮಾನತೆಗೆಂದು ಹೋರಾಡುವುದು ಸಮಾಜವನ್ನು ವಿಘಟಿಸಿ ನಾಶಪಡಿಸುವ ಹಾನಿಕಾರಕ ಸಂಗತಿಯಾಗಿದೆ ಎನ್ನುವವರಿದ್ದಾರೆ. ಹೀಗೆ ಮಾತಾಡುವವರು ವಾಸ್ತವವನ್ನು ಭದ್ರವಾಗಿ ಹುದುಗಿಹಾಕುವ ಕಣ್ಕಟ್ಟೊಂದನ್ನು ಬಲವಾಗಿ ನೆಮ್ಮಿರುವುದು ಅರ್ಥವಾಗುತ್ತದೆ. ಸಮಾನತೆ ಪ್ರಗತಿ ಎಂಬ ಶಬ್ದಗಳು ಕೇವಲ ಭಾಷಿಕ ಕ್ರಿಯೆಗಳಾಗಿವೆಯೇ ಹೊರತು, ಹೆಣ್ಣಿನ ಬದುಕಿನ ವಾಸ್ತವಗಳಾಗಿಲ್ಲ ಎಂಬುದನ್ನು ಹೆಣ್ಣು ಅನುಭವಿಸುತ್ತಿದ್ದಾಳೆ. ಆದ್ದರಿಂದ ಕಣ್ಕಟ್ಟು ಮತ್ತು ವಾಸ್ತವಗಳ ನಡುವಿನ ರಹಸ್ಯ ಭೇದಿಸಿ ಮಹಿಳೆಯರ ಹೋರಾಟದ ದಾರಿಯನ್ನು ಸ್ಪಷ್ಟಪಡಿಸಬೇಕಾದ ಹೊಣೆಗಾರಿಕೆ ಸ್ತ್ರೀವಾದಿಗಳಿಗಿದೆ ಎನ್ನುವರು ಬೆಟ್ಟಿಫ್ರೀಡನ್.

ಮಹಿಳೆಯ ಅನುಭವಗಳು ಸಾರ್ವತ್ರಿಕ ಪರಿಕಲ್ಪನೆಯಾಗಿ ಬೆಳೆಯಲು ಸಮಸ್ಯೆಗಳಿವೆ. ಮಹಿಳೆಯರ ವೈಯಕ್ತಿಕ ಹಿತಾಸಕ್ತಿಗಳು ಹಲವು ಸಲ ಭಿನ್ನವೂ, ವಿರುದ್ಧವೂ ಆಗಿರುತ್ತವೆ. ವರ್ಗ, ಜನಾಂಗ ಮೊದಲಾದ ರಾಜಕೀಯ ಮೂಲದಿಂದ ಈ ಹಿತಾಸಕ್ತಿಗಳು ಹುಟ್ಟಿಕೊಂಡಿರುತ್ತವೆ. ಬಹಳಷ್ಟು ಮಹಿಳೆಯರು ತಮ್ಮನ್ನು ಶೋಷಿತರು ಎಂದು ಭಾವಿಸಲು ಒಪ್ಪುವುದಿಲ್ಲ. ಶೋಷಿತರೆಂದು ಗುರುತಿಸಿಕೊಳ್ಳುವ ಮಹಿಳೆಯರು ಒಂದು ಬಗೆಯ ಮಿಥ್ಯ ಪ್ರಜ್ಞೆಗೆ ಬಲಿಯಾಗಿದ್ದು, ಪುರುಷರೊಂದಿಗೆ ಗುರುತಿಸಿಕೊಂಡವರೆಂದು ಹೇಳಲಾಗುತ್ತಿದೆ. ಅಂತಹ ಮಹಿಳೆಯರ ಅನುಭವವು ಪುರುಷ ಪ್ರೇರಿತವಾಗಿದ್ದು ಮಹಿಳೆಯರು ಸತ್ಯವನ್ನು ಗುರುತಿಸಲು ಅಸಮರ್ಥರೆನ್ನಲಾಯಿತು. ವಸ್ತುನಿಷ್ಠತೆ ಎಂಬುದು ಪುರುಷತ್ವಕ್ಕೆ ಹೊಂದಿಕೊಂಡಿದ್ದು, ಸ್ತ್ರೀಯರನ್ನು ಹೊರಗಿಡುವ ಸಾಧನವಾಗಿದೆ. ಪಿತೃಪ್ರಧಾನ ವ್ಯವಸ್ಥೆಯಡಿಯಲ್ಲಿ ವ್ಯಕ್ತಿಗಳಾಗಿ ತಮ್ಮಷ್ಟಕ್ಕೆ ಮಹಿಳೆಯರು ತಮ್ಮೆಲ್ಲರ ಹಿತಾಸಕ್ತಿಗಾಗಿ ಕಾರ್ಯಪ್ರವೃತ್ತರಾಗುವುದು ಅಸಾಧ್ಯ. ತಮ್ಮ ಅನುಭವದ ಸ್ವರೂಪವೇನು, ತಮ್ಮ ಅಸ್ತಿತ್ವದ ನಿಜಸ್ಥಿತಿ ಏನು ಎಂಬುದರ ಅರಿವು ಮೂಡಬೇಕಾದರೆ ಅದಕ್ಕೆ ಸ್ತ್ರೀವಾದಿ

ಪ್ರಜ್ಞೆ ಅವಶ್ಯಕವಾಗಿದೆ. ಅಂತಹ ಪ್ರಜ್ಞೆಯನ್ನು ಜಾಗೃತಗೊಳಿಸಲು ಈವರೆಗೆ ಸ್ತ್ರೀವಾದಿಗಳು ನಡೆಸಿರುವ ಪ್ರಯತ್ನಗಳ ಫಲವಾಗಿಯೇ 'ಮಹಿಳೆ' 'ಮಹಿಳಾ ಅನುಭವ'ಗಳೆಂಬುದಕ್ಕೆ ವಿಶಿಷ್ಟ ಅರ್ಥ ನೀಡುವ ಯತ್ನ ಪ್ರಾರಂಭವಾಗಿದೆ. ಮಹಿಳೆಯರು ತಮ್ಮ ಬಗ್ಗೆ ತಿಳಿದುಕೊಳ್ಳಲು ಈಚೆಗಷ್ಟೆ ಪ್ರಯತ್ನಿಸುತ್ತಿದ್ದಾರೆ. ಇಂಥ ಪ್ರಜ್ಞೆಯು ಸರ್ವವ್ಯಾಪ್ತಿಯಾದಾಗ ಮಾತ್ರ ಅವರದೇ ಆದ ತಾತ್ವಿಕ ಮಹತ್ವವುಳ್ಳ ಸಿದ್ಧಾಂತ ಹೊರಹೊಮ್ಮಲು ಸಾಧ್ಯವಿದೆ. ಸ್ತ್ರೀವಾದಿ ತಾತ್ವಿಕತೆ ಹೆಣ್ಣಿನ ಅನುಭವಗಳ ಕೇವಲ ಕಥನವಲ್ಲ. ಆ ಅನುಭವವನ್ನು ನೋಡುವ ಒಂದು ವಿಧಾನ ಅದೇ ಸ್ತ್ರೀವಾದಿ ದೃಷ್ಟಿಕೋನವಾಗಿದೆ.

ಸ್ತ್ರೀ-ಪುರುಷರು ಬೇರೆ ಬೇರೆ ಲಿಂಗಕ್ಕೆ ಸೇರಿದವರೆಂಬುದು ಜೈವಿಕ ಸಂಗತಿಯಾಗಿದೆ. ಈ ಸಂಗತಿಯನ್ನು ಆಶ್ರಯಿಸಿ ರಾಜಕೀಯ, ಆರ್ಥಿಕ, ಸಾಮಾಜಿಕ ನೆಲೆಗಳಲ್ಲಿ ಸ್ತ್ರೀಯನ್ನು ಅಸಮಾನ ನೆಲೆಯಲ್ಲಿ ಪಿತೃಪ್ರಧಾನ ವ್ಯವಸ್ಥೆಯು ನಿಲ್ಲಿಸಿದೆ. ಆದರೆ ಹೆಣ್ತನ ಕಡಿಮೆಯಾದದ್ದೇನಲ್ಲ. ಹೆಣ್ಣು ತನ್ನನ್ನು ತಾನು ಸ್ಥಾಪಿಸಿಕೊಳ್ಳುವ ಪ್ರಯತ್ನ ಮಾಡಿದುದೇ ಆಕೆಯ ಸ್ತ್ರೀತ್ವದ ಶೋಧವಾಗಿದೆ. ಏಕೆಂದರೆ ಈಕೆ ಪುರುಷ ಪ್ರಧಾನ ಸಮಾಜದಲ್ಲಿ ತನ್ನನ್ನು ತಾನು ಕೇಂದ್ರೀಕರಿಸಿಕೊಳ್ಳುವ ಪ್ರಯತ್ನ ಮಾಡುತ್ತಾಳೆ. ಪಿತೃಪ್ರಧಾನ ವ್ಯವಸ್ಥೆ ಹೆಣ್ಣಿನ ಮೇಲೆ ಕೆಲವು ನಿರ್ದಿಷ್ಟ ಮಾನದಂಡಗಳನ್ನು ಹೇರಿ-ಇದು ಹೆಣ್ಣಿಗೆ ಸಹಜ ಎಂದು ನಂಬಿಸುತ್ತಿದೆ.

ಆದರೆ ಈ ಚೌಕಟ್ಟನ್ನು ವಿರೋಧಿಸಿದ ಹೆಣ್ಣು ಪುರುಷನ ಮಾದರಿಯನ್ನು ಅನುಸರಿಸಿ ಅನುಕರಣೆ ಮಾಡುವುದು ಸ್ತ್ರೀವಾದವಲ್ಲ. ತನ್ನತನವನ್ನು ತಾನು ರೂಢಿಸಿಕೊಳ್ಳುವುದೇ ಸ್ತ್ರೀವಾದ. ಪರಂಪರಾಗತ ಸ್ತ್ರೀಮೌಲ್ಯಗಳಾದ ಕೋಮಲತೆ, ವಿನಯ, ವಿಧೇಯತೆ, ನಿಗರ್ವ, ಅಸ್ಥಿರತೆ, ಅಸಮಗ್ರತೆ, ಜಡತೆ, ಸಂಗೋಪನಾಶೀಲತೆ, ಭಾವನಾ ಪ್ರಧಾನತೆ ಇವುಗಳು ಸ್ತ್ರೀತ್ವದ ಲಕ್ಷಣಗಳೆಂದೂ ಇವುಗಳೇ ಸ್ತ್ರೀತ್ವ-ಹೆಣ್ತನ ಎಂದು ಪಿತೃಪ್ರಧಾನ ವ್ಯವಸ್ಥೆ ಹೆಣ್ಣನ್ನು ತಯಾರು ಮಾಡುತ್ತದೆ. ಅಲ್ಲದೆ ಹೆಣ್ಣನ್ನು ಗಟ್ಟಿಗರು, ಸತ್ವಪೂರ್ಣರು? ಶಾಂತಿಪ್ರಿಯರು? ವಾತ್ಸಲ್ಯಪರರು? ಎಂದು ಹೇಳಿದರು. ಆ ಮೂಲಕ ಕತೆ, ಕಾದಂಬರಿಗಳಲ್ಲಿ ಈಕೆಯ ಗುಣಗಳನ್ನು ವರ್ಣಿಸಿದರು. ಅಲ್ಲದೆ ಆಕೆ ತಗ್ಗಿ-ಬಗ್ಗಿ ನಡೆಯಬೇಕು. ಒಂದು ರೀತಿಯಲ್ಲಿ ಭಾವನಾ ಪ್ರಧಾನವಾದ ಗುಣಗಳನ್ನು ಆರೋಪಿಸಿ ಇವೇ ಹೆಣ್ಣಿನ ಲಕ್ಷಣಗಳೆಂದು ಹೇಳಿದರು.

ಪುರುಷ ಕೇಂದ್ರಿತವಾದವು ಜನಾಂಗವಾದ, ಜಾತಿವಾದ, ವರ್ಗವಾದಗಳಿಗಿಂತ ಸೂಕ್ಷ್ಮವಾಗಿ ಕೆಲಸ ಮಾಡುವುದರಿಂದ ಹಾಗೂ ವಂಚಿತರು, ವಂಚಕರ ಸ್ಪಷ್ಟ [illegible] ಸ್ತ್ರೀವಾದಿ ಪ್ರಜ್ಞೆಯ ಜಾಗೃತಿ ಮತ್ತು

ಹೋರಾಟಕ್ಕೆ ಬೇಕಾದ ತಿಳುವಳಿಕೆ ಮತ್ತು ಕಾರ್ಯವಿಧಾನವು ಕೂಡ ಬೇರೆ ಬಗೆಯದಾಗಿರುವುದು ಅನಿವಾರ್ಯವಾಗುತ್ತದೆ. ಪಿತೃವಂಶೀಯವಾದ ಕುಟುಂಬ ವ್ಯವಸ್ಥೆಯಲ್ಲಿ ವಿವಾಹ ಹೆಂಗಸಿನ ಜೀವನದ ನೆಲೆಯನ್ನು ಮಾತ್ರ ಬದಲಿಸಬೇಕಾಗಿರುವುದರಿಂದಲೂ ಉದ್ಯೋಗಕ್ಕೆ ತಡೆ ಉಂಟಾಗುತ್ತದೆ. ಮಕ್ಕಳ ಪಾಲನೆಗಾಗಿಯೂ ಕೂಡ ಉದ್ಯೋಗದ ತಡೆ ಉಂಟಾಗಬಹುದು.

ಒಬ್ಬರ ಅಥವಾ ಒಂದು ಗುಂಪಿನ ಮಹಿಳೆಯರ ಅನುಭವ ಎಲ್ಲಾ ಕಾಲದ ಎಲ್ಲಾ ಮಹಿಳೆಯರಿಗೂ ಸಮಾನವಾಗಿರುತ್ತದೆ ಎಂದುಕೊಳ್ಳುವುದು ತಪ್ಪಾಗುತ್ತದೆ. ಮೊದಲಲ್ಲಿ ಪಾಶ್ಚಾತ್ಯ ಬಿಳಿಯ ಜನಾಂಗದ ಸ್ತ್ರೀವಾದಿಗಳಷ್ಟೆ ಬರೆಯುತ್ತಿದ್ದಾಗ, ಅವರು ತಮ್ಮ ಸಾಂಸ್ಕೃತಿಕ ಹಿನ್ನೆಲೆಯಿಂದ ದೊರೆತ ಅನುಭವವನ್ನೆ ಸಮಗ್ರವಾದ ಮಹಿಳಾ ಅನುಭವವೆಂದು ಭಾವಿಸಿದ್ದರು. ಆದರೆ ಸಂಸ್ಕೃತಿಯ ಒಳಗಿರುವ ತಮಗೂ ಸಂಸ್ಕೃತಿಯ ಅಂಚಿನಲ್ಲಿರುವ ಕರಿಯ ಮಹಿಳೆಯರಿಗೂ ಒಂದೇ ರೀತಿಯ ಅನುಭವಗಳು ಇರಲಾರವು ಎಂಬ ಅರಿವು ಆ ಕಾಲದಲ್ಲಿ ಮೂಡಿರಲಿಲ್ಲ. ಹಾಗಾಗಿ ಒಬ್ಬರ ವ್ಯಕ್ತಿಗತ ಅನುಭವವು ಸಾರ್ವತ್ರಿಕವಾಗಿ ಎಲ್ಲಾ ಮಹಿಳೆಯರದೆ ಆಗಿರುತ್ತದೆಂಬ ಗ್ರಹಿಕೆಯಿಂದ 'Personal is political' ಎಂಬ ವೈಯಕ್ತಿಕ ರಾಜಕಾರಣ ಅಥವಾ ವ್ಯಕ್ತಿ ಸ್ವಾತಂತ್ರ್ಯ ಪರಿಕಲ್ಪನೆಯ ತತ್ವ ಹುಟ್ಟಿಕೊಂಡಿತು.

ವೈಯಕ್ತಿಕ ಸ್ವಾತಂತ್ರ್ಯವೆಂಬುದು ಹೆಣ್ಣಿಗೆ ಇರದಿದ್ದ ಕಾರಣ ಕ್ರಾಂತಿಯನ್ನು ಶುರುಮಾಡಿದ ಮೊದಲಿಗರಿಗೆ ತಮ್ಮ ಉದ್ದೇಶವನ್ನು ತಪ್ಪಾಗಿ ತಿಳಿದು ಗೇಲಿ ಮಾಡುತ್ತಾರೆಂದು ಗೊತ್ತಿತ್ತು. ಅದರಂತೆ ಸ್ಕಾಟ್ಲೆಂಡಿನ ಶ್ರೀಮಂತನ ಮಗಳು ಫ್ಯಾನಿರೈಟ್ ಮತ್ತು ಯಹೂದಿ ಗುರುವಿನ ಮಗಳು ಆರ್ನೆಸ್ಟೈನ್ ರೋಸ್ ಇವರಿಬ್ಬರು ಅಮೆರಿಕದ ಹೆಂಗಸರ ಹಕ್ಕುಗಳಿಗಾಗಿ ದನಿ ಎತ್ತಿದ ಮೊದಲಿಗರು. ಇವರಿಬ್ಬರನ್ನು ಸಮಾಜವು "ಹಾದರಗಿತ್ತಿ" ಮತ್ತು "ಸೂಳೆಯರಿಗಿಂತ ಸಾವಿರ ಪಾಲು ಕೀಳಾದವಳು" ಎಂದು ಬಣ್ಣಿಸಿತು. ಸೆನೆಕ್ ಫಾಲ್ಸ್ ಘೋಷಣೆಯಾದ ಕೂಡಲೆ 'ಕ್ರಾಂತಿ', 'ಹೆಂಗಸರ ಬಂಡು' 'ಒಳಲಿಂಗಗಳ ಸಾಮ್ರಾಜ್ಯ' ದೈವ ದ್ರೋಹ' ಎಂಬೆಲ್ಲ ಮಾತುಗಳು ಪತ್ರಿಕೆಗಳಲ್ಲಿ ಧರ್ಮ ಪ್ರವಚನಕಾರರಲ್ಲಿ ಕೇಳಿಸಿದವು. ಬೆದರಿಕೆಯಿಂದ ಹಲವು ಹೆಂಗಸರು ಘೋಷಣೆಗೆ ಸಹಿ ಹಾಕಲು ಹಿಂಜರಿದರು. "ಮುಕ್ತ ಪ್ರೇಮ"ವನ್ನು ಬಣ್ಣಿಸುವ ಬರಹಗಳು, 'ಕಾನೂನು ಬದ್ಧ ಹಾದರ"ವನ್ನು ತಿಳಿಸುವ ಬರಹಗಳು ಎಲ್ಲೆಲ್ಲೂ ಕಾಣಿಸತೊಡಗಿದವು. ವಕೀಲ ಮತ್ತು ವೈದ್ಯ ವೃತ್ತಿಯಲ್ಲಿದ್ದ ಹೆಂಡತಿಯರು ಗಂಡನ ಕೈಗೆ ಕೂಸನ್ನಿತ್ತು ಸಂಭಾಳಿಸಲು ಹೇಳುವ ನಗೆ ನಾಟಕಗಳು ಕಾಣಿಸಿಕೊಂಡವು.

ಸ್ತ್ರೀ ಪುರುಷರ ನಡುವಿನ ಅಸಮಾನತೆ ಪ್ರಕೃತಿ ಸಹಜವಲ್ಲ, ಜೈವಿಕವೂ ಅಲ್ಲ, ಅದು ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದದ್ದಾಗಿದೆ. ಇದನ್ನು ಅರಿತಿರುವ ಮೇರಿ ವುಲ್‌ಸ್ಟನ್‌ಕ್ರಾಫ್ಟ್ ತನ್ನ The vindication of the Rights of women (1792) ಕೃತಿಯಲ್ಲಿ "ಮಹಿಳೆಯನ್ನು ದೇವರು ಪುರುಷನ ಮನರಂಜನೆಗೆಂದು, ಆತನ ಕಾಮ ತೃಪ್ತಿಗೆಂದು ಸೃಷ್ಟಿಸಿಲ್ಲ, ಆಕೆಗೂ ತನ್ನದೇ ಆದ ವ್ಯಕ್ತಿತ್ವವಿದೆ, ಗೊತ್ತು ಗುರಿಗಳಿವೆ" ಎನ್ನುವಳು. ಜೊತೆಗೆ ಪುರುಷರನ್ನು ಕುರಿತು " ನೀವು ಮಹಿಳೆಯರನ್ನು ನಿಮ್ಮ ಸಂಗಾತಿಗಳೆಂದು ತಿಳಿಯಿರಿ. ಆಕೆ ನಿಮ್ಮ ಸಮಾನಳು ಎಂದು ತಿಳಿದು ಅದಕ್ಕೆ ತಕ್ಕಂತೆ ಆಕೆಯೊಂದಿಗೆ ವ್ಯವಹರಿಸುವಲ್ಲಿ ನಿಮ್ಮ ಗೌರವವು ಇದೆ" ಎನ್ನುವಳು. ಹೆಣ್ಣು ಸ್ತ್ರೀ ಲಿಂಗಿಯಾಗಿ ಹುಟ್ಟುತ್ತಾಳೆ. ಆದರೆ ಸಮಾಜ ಸಂಸ್ಕೃತಿ ಹೆಣ್ಣನ್ನು ಸ್ತ್ರೀಲಿಂಗ ಜಾತಿಯಾಗಿ ಬೆಳೆಸುತ್ತದೆ. ಹೆಣ್ಣು-ಗಂಡಿನ ನಡುವಿನ ಜೈವಿಕ ವ್ಯತ್ಯಾಸ ಎಲ್ಲ ಲಿಂಗಾಧಾರಿತ ನೀತಿಯ ಮೂಲನೆಲೆ. ಅವಳ ದೇಹವೇ ಅವಳ ವಿಧಿ, ನಾವು ಅದನ್ನು ಬದಲಿಸಲಾಗದು ಎನ್ನುವ ಪುರುಷ ಪ್ರಧಾನ ಸಮಾಜದ ಧೋರಣೆಗಳ ವಿರುದ್ಧ ಸ್ತ್ರೀವಾದಿ ಪ್ರಜ್ಞೆ ದಂಗೆ ಏಳುತ್ತದೆ. ಜೊತೆಗೆ ಹೆಂಗಸಿನ ಜೈವಿಕ ಸ್ವರೂಪಕ್ಕೆ ಅಂಟಿರುವ ತಪ್ಪು ಗ್ರಹಿಕೆಯನ್ನು ತೊಡೆಯುವ ಹಾಗೂ ಹೆಂಗಸು ತನ್ನ ದೇಹದ ಮೇಲೆ ತಾನು ಸ್ವಾಮ್ಯ ಪಡೆಯಬೇಕು ಎಂಬ ಉದ್ದೇಶಗಳ ಮೇಲೆ ಸ್ತ್ರೀವಾದ ಒತ್ತು ನೀಡಿದೆ.

ಪುರುಷ ನಿಯಂತ್ರಿತ ಹೊರಜಗತ್ತು, ಮಹಿಳೆಯರ ಒಳಜಗತ್ತುಗಳ ನಡುವೆ ಅಗಾಧವಾದ ವ್ಯತ್ಯಾಸವಿದೆ. ಇದರಿಂದ ಇವರಿಬ್ಬರ ವ್ಯಕ್ತಿತ್ವದ ಬೆಳವಣಿಗೆ ಸಮಗ್ರವಾಗಿ ಪೂರ್ಣಗೊಳ್ಳಲಾರದು. ಇದರಿಂದ ಸಮಾಜದ ವಿಕಾಸ ಮತ್ತು ಪ್ರಗತಿ ಕುಂಠಿತಗೊಳ್ಳುತ್ತದೆ ಎಂಬುದನ್ನು ಸ್ತ್ರೀವಾದ ತಿಳಿಸಲು ಪ್ರಯತ್ನಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕೇಟ್ ಮಿಲೆಟ್ ಲಿಂಗ ರಾಜಕೀಯದ ತಾತ್ತ್ವಿಕತೆಯನ್ನು ನಿರೂಪಿಸಿದ್ದಾರೆ. ಒಂದು ಗುಂಪು ಇನ್ನೊಂದನ್ನು ಆಳುವಾಗ ಅವೆರಡರ ನಡುವಿನ ಸಂಬಂಧವು ರಾಜಕೀಯ ಸ್ವರೂಪದ್ದಾಗಿರುತ್ತದೆ. ಈ ವ್ಯವಸ್ಥೆ ದೀರ್ಘಕಾಲದವರೆಗೆ ಮುಂದುವರೆದಾಗ ಅದು ತನ್ನದೇ ಆದ ವಿಚಾರಧಾರೆಯನ್ನು (ಊಳಿಗಮಾನ್ಯ, ಜನಾಂಗವಾದ) ಬೆಳೆಯಿಸುತ್ತದೆ. ಚಾರಿತ್ರಿಕವಾದ ಎಲ್ಲಾ ನಾಗರಿಕತೆಗಳೂ ಪಿತೃಪ್ರಧಾನವೇ ಆಗಿದೆ. ಅವುಗಳ ವಿಚಾರಧಾರೆಯು ಪುರುಷ ಪಾರಮ್ಯವನ್ನೇ ಸಾರುತ್ತಿರುತ್ತದೆ. ಸ್ತ್ರೀಯನ್ನು ಪುರುಷನಿಗಿಂತ ಭಿನ್ನವಾಗಿ ಗುರುತಿಸಲು ಮುಖ್ಯವಾದ ಅಂಶ ಆಕೆಯ ತಾಯ್ತನ. ಆದರೆ ಅದೇ ಈಗ ಲಿಂಗಪ್ರಭೇದ, ಶ್ರೇಣೀಕರಣ, ಯಜಮಾನಿಕೆ ಮತ್ತು ಶೋಷಣೆಗಳಿಗೂ ಮೂಲ ನೆಲೆಯಾಗಿದೆ.

ಗೃಹಿಣಿಯಾಗಿ ಮಾತ್ರವೇ ಇರುವ ಹೆಂಗಸು ನಮ್ಮಲ್ಲಿ ತೀರ ವಿರಳ. ಏಕೆಂದರೆ ಗೃಹಿಣಿಯಾಗಿದ್ದುಕೊಂಡು ತನ್ನ ಸಂಸಾರಕ್ಕೆ ಬೇಕಾದ ಇತರ ಕೆಲಸಗಳನ್ನು (ಉದಾ : ಬಟ್ಟೆ ಹೊಲೆಯುವುದು, ಇತರೆ.) ಮಾಡಿಕೊಳ್ಳುತ್ತಾರೆ. ಸಂಸಾರದ ಹೊರೆಯೊಂದಿಗೆ ಬೇರೆ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಿರುತ್ತಾರೆ. ಆದರೆ ಅವರು ನಿರ್ವಹಿಸುವ ಜವಾಬ್ದಾರಿಯ ಬಗ್ಗೆ ಗಂಡಸಿಗೆ ಗೌರವವಿಲ್ಲವಾಗಿದೆ. ಅವಳ ಶ್ರಮದ ಬಗೆಗೆ ಸಾಮರ್ಥ್ಯದ ಬಗೆಗೆ ಕಾಳಜಿವಹಿಸುವ ಮನಸ್ಸುಗಳು ಇಲ್ಲವಾಗಿ ಹೆಣ್ಣಿಗೂ ಕೂಡ ಅವಳಲ್ಲೇ ಅವಳ ಬಗೆಗೆ ನಂಬಿಕೆ, ವಿಶ್ವಾಸ ಇಲ್ಲವಾಗಿದೆ. ಅವಳ ಸಾಮರ್ಥ್ಯದ ಅರಿವು ಅವಳಲ್ಲಿ ಮರೆಯಾಗಿದೆ. ಇಲ್ಲಿ ಲಿಂಗ ತಾರತಮ್ಯದ ಹಲವು ನೆಲೆಗಳು ಬಯಲಾಗುತ್ತಿವೆ. ಕಾಮವು ಈಗ ಮಾನವೀಯ ನೆಲೆಗಳನ್ನು ಕಳೆದುಕೊಂಡಿದೆ. (ಹಾಲಿವುಡ್ ನಟಿಯರ ಎದೆಕಟ್ಟು, ಪುರುಷ ಶಿಶ್ನವನ್ನು ಜಾಹಿರಾತಿನಲ್ಲಿ ಬಳಸುತ್ತಿರುವುದು ಇವುಗಳ ಹಿನ್ನೆಲೆಯಲ್ಲಿ ಕಾಮವು ಮಾನವೀಯನೆಲೆ ಕಳೆದುಕೊಂಡಿರುವುದು ನಿಜವಾಗಿದೆ) ಹೆಣ್ಣುತನದ ಕಣ್ಕಟ್ಟಿನೊಂದಿಗೆ ಸಲಿಂಗರತಿಯು ಹೆಚ್ಚಾಗಿದೆ.

ಜಾನ್ ಸ್ಟುವರ್ಟ್ ಮಿಲ್ ಲಿಂಗ ತಾರತಮ್ಯದ ಬಗೆಗೆ ಮಾತನಾಡುತ್ತಾ "ಒಂದು ಲಿಂಗ ಸಮೂಹವನ್ನು ಇನ್ನೊಂದು ಲಿಂಗ ಸಮೂಹಕ್ಕೆ ಅಧೀನಗೊಳಿಸುವ ಸಾಮಾಜಿಕ ಪದ್ಧತಿ ತಂತಾನೆ ಕೆಟ್ಟದ್ದು. ಇದು ಮಾನವ ಪ್ರಗತಿಗೆ ಹಾಕಿದ ಮುಖ್ಯ ತಡೆಯಾಗಿದೆ. ಎರಡು ಲಿಂಗ ಸಮೂಹಗಳೂ ಸಮಾನ ಅವಕಾಶಗಳನ್ನು ಪಡೆಯಬೇಕೆಂದು ನಾನು ನಂಬಿದ್ದೇನೆ" ಎನ್ನುವರು. ಆದರೆ ಹೆಣ್ಣು ಪುರುಷ ಸೃಷ್ಟಿಯ ಮಿಥ್‌ಗಳನ್ನು ವಾಸ್ತವಗಳೆಂದು ಗ್ರಹಿಸಿ, ಅಸಹಾಯಕಳಂತೆ ಬದುಕುತ್ತಿದ್ದಾಳೆ. ಇದನ್ನು ವಿರೋಧಿಸುತ್ತಿದ್ದ ಇಂದಿರಾಗಾಂಧಿಯವರು ತಮ್ಮನ್ನು ಮಹಿಳಾ ಪ್ರತಿನಿಧಿ ಎಂದು ಗುರುತಿಸಿಕೊಳ್ಳುವುದನ್ನು ವಿರೋಧಿಸುತ್ತಿದ್ದರು. ಮಧುಕೇಶ್ವರ್, ಮಹಾಶ್ವೇತಾದೇವಿಯಂತಹ ಮಹಿಳಾ ಹೋರಾಟಗಾರ್ತಿಯರೂ ಕೂಡ ತಮ್ಮನ್ನು ಸ್ತ್ರೀವಾದಿಗಳೆಂದು ಗುರುತಿಸಿಕೊಳ್ಳಲು ನಿರಾಕರಿಸಿದ್ದರು. ಇವರು ಪುರುಷನಿಗಿಂತ ಸ್ತ್ರೀ ಕೆಳ ಶ್ರೇಣಿಯವಳು ಎನ್ನುವುದಾದರೆ ತಮ್ಮನ್ನು ಸ್ತ್ರೀಜಾತಿಯಲ್ಲಿ ಗುರುತಿಸಬೇಕಿಲ್ಲ ಎಂದರು. ಸ್ತ್ರೀತ್ವ ಎಂಬುದನ್ನೇ ನಿರಾಕರಿಸಲು ಇವರು ಹಿಂಜರಿಯುವುದಿಲ್ಲ.

ಕಾನೂನು ಕೂಡ ಸದಾ ಕಾಲ ಹೆಣ್ಣಿಗೆ ಗಂಡಿನೊಂದಿಗೆ, ಸಮಾಜದೊಂದಿಗೆ ರಾಜಿಯಾಗುವ ಮಾರ್ಗವನ್ನೆ ಸೂಚಿಸುತ್ತದೆ. ಕಾನೂನಿನಿಂದ ವರ್ಗ ಮತ್ತು ಜಾತಿ ಅಸಮಾನತೆಗಳ ನಿವಾರಣೆಯಲ್ಲಿ ಫಲ ದೊರತಿದೆ. ಆದರೆ ಈ ಲಿಂಗ ತಾರತಮ್ಯದ

ಸಮಸ್ಯೆ ಮಾತ್ರ ಮತ್ತಷ್ಟು ಹೊಸ ಆಕಾರಗಳನ್ನು ಪಡೆದುಕೊಳ್ಳುವುದರ ಮೂಲಕ ಬೃಹದಾಕಾರವಾಗಿ ಬೆಳೆಯುತ್ತಿದೆ. ಮಹಿಳಾ ಬದುಕಿನ ಸಕಲ ಸಮಸ್ಯೆಗಳ ಮೂಲ ವಿವಾಹದ ನಿಯಮಾವಳಿಯಲ್ಲೆ ಅಡಕಗೊಂಡಿದೆ. ಭ್ರೂಣ ಹತ್ಯೆ, ಹೆಣ್ಣು ಶಿಶುಹತ್ಯೆ, ಅವಿವಾಹಿತತೆ, ಅತ್ಯಾಚಾರ, ವೈಧವ್ಯ, ಸತಿಪದ್ಧತಿ ಎಂಬುವು ಮಹಿಳಾ ಸಮಸ್ಯೆಗಳಿಗೆ ಮೂಲವಾಗಿವೆ. ಹೆಣ್ಣಿನ ಲೈಂಗಿಕತೆಯನ್ನು ಒಬ್ಬ ಗಂಡಸಿನ ಯಜಮಾನಿಕೆಗೆ ಒಳಪಡಿಸುವ ವಿವಾಹ ಸಂಸ್ಥೆಯೇ ಮೂಲದಲ್ಲಿ ಈ ಸಮಸ್ಯೆಗಳನ್ನು ಹುಟ್ಟಹಾಕಿದೆ. ಹೆಣ್ಣಿನ ಲೈಂಗಿಕತೆಯ ನಿರ್ಬಂಧ ಮಾತ್ರದಿಂದಲೆ ಅವಳ ಮೇಲೆ ಹಲವು ಬಗೆಯ ನಿಯಂತ್ರಣ ಹಾಗೂ ಹತೋಟಿ ಹೇರಲಾಗಿದೆ. ಶೀಲವೆಂಬುದು ಹೆಣ್ಣಿಗಷ್ಟೆ ಅನ್ವಯಿಸುವ ಸಾಮಾಜಿಕ ನಿಯಮವಾಗಿದೆ. ಗಂಡಿಗಿದ್ದರೂ ಅದು ಹೆಣ್ಣಿಗಿರುವಷ್ಟು ಕಟ್ಟುನಿಟ್ಟಿನಿಂದ ಕೂಡಿಲ್ಲ. ಇದರಿಂದ ಬಹುಪತ್ನಿತ್ವ, ವಿಧುರವಿವಾಹ, ವೇಶ್ಯಾವಾಟಿಕೆ ಮೊದಲಾದವು ಹುಟ್ಟು ಪಡೆದುಕೊಂಡವು.

ಸಾಮಾಜಿಕ ಪರಿಸ್ಥಿತಿಗಳು ಹೆಂಗಸಿನ ಬಂಧನದ ಸ್ವರೂಪದಲ್ಲಿ ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ತರುತ್ತಿದ್ದಾವೆಯೇ ಹೊರತು, ಅದರ ಬಿಗಿಯು ಎಂದು ಸಡಿಲಗೊಂಡಿಲ್ಲ. ಹೆಣ್ಣಿನ ವ್ಯಕ್ತಿತ್ವ ಅವಳ ಪರಿಸ್ಥಿತಿಯನ್ನೇ ಅವಲಂಬಿಸಿ ರೂಪಿತವಾಗುತ್ತದೆ. ಈಕೆ ತನ್ನ ಸುತ್ತಲಿನ ಸಾಮಾಜಿಕ ನಿಯಮಗಳು ತನ್ನ ವಿರುದ್ಧವೇ ಇವೆ ಎಂಬುದನ್ನು ಅರಿಯದೇ ಅವುಗಳನ್ನು ಪೋಷಿಸಿ ರಕ್ಷಿಸುವಳು. ಪುರುಷನಿಗೆ ಹಕ್ಕುಗಳು, ಮಹಿಳೆಗೆ ಕರ್ತವ್ಯಗಳು, ಮೊದಲಿನಿಂದ ಹಂಚುವ ಕ್ರಮ ನಡೆದು ಬರುತ್ತಿದೆ. ಹೆಣ್ಣು ಮಕ್ಕಳು ಕೆಲಸಕ್ಕೆ ಹೋಗುವುದನ್ನು ತಡೆಯುವ ಮೂಲಕ ಸುಖವಾಗಿರಿ ಎಂಬ ಆಸೆ ಆಮಿಷ ಒಡ್ಡುವ ಮೂಲಕ ಹೆಣ್ಣನ್ನು ನಿಷ್ಕ್ರಿಯಗೊಳಿಸುವುದರೊಂದಿಗೆ ಮತ್ತೆ ಸ್ತ್ರೀಯನ್ನು ವಿಸ್ಮೃತಿಗೆ ತಳ್ಳುವ ಪ್ರಯತ್ನ ನಡೆಯುತ್ತಿದೆ. ಆದರೆ ಅದು ಹೆಣ್ಣಿಗೆ ತಿಳಿಯುತ್ತಿಲ್ಲ. ಆದರೆ ಹೆಣ್ಣು ಮೊದಲಿಗೆ ತನ್ನನ್ನು ತಾನು ಮೊದಲು ಪ್ರೀತಿಸುವುದನ್ನು ಕಲಿಯಬೇಕು. ಜೊತೆಗೆ ತನ್ನ ಬಗ್ಗೆ ಗೌರವದ ಆತ್ಮಪ್ರತ್ಯಯವನ್ನು ಬೆಳೆಸಿಕೊಳ್ಳಬೇಕು. ಈ ಪ್ರೀತಿ ವಿಶ್ವಾಸಗಳಲ್ಲಿ ಮಕ್ಕಳು, ಸಂಸಾರವನ್ನು ಆಪ್ತ ವಲಯಕ್ಕೆ ತೆಗೆದುಕೊಳ್ಳುವ ಶಕ್ತಿ ಇರುತ್ತದೆ. ಇಲ್ಲಿ ಸಾಮಾಜಿಕ ಅಸಮಂಜಸತೆಗಳಿಗೂ ಬಂಡವಾಳಶಾಹಿ ಧೋರಣೆಯೇ ಮುಖ್ಯ ಕಾರಣವೆಂಬುದು ಸ್ತ್ರೀಪುರುಷ ಸಂಬಂಧಗಳಿಗೂ ಸಹ ಅನ್ವಯಿಸುತ್ತದೆ. ಮೊದಲು ಸ್ತ್ರೀ-ಪುರುಷ ಸಂಬಂಧದಲ್ಲಿನ ಅಸಮಾನತೆ ಹೋಗಬೇಕಾದರೆ ಸ್ತ್ರೀ ಮೊದಲು ಆರ್ಥಿಕ ಸ್ವಾವಲಂಬನೆ ಹೊಂದಬೇಕು. ಹೆಣ್ಣಿಗೆ ಮಾತನಾಡುವ ಹಕ್ಕನ್ನೆ ನಿರಾಕರಿಸುವ ಪುರುಷ ಸಮಾಜದ ನಡುವೆ ಹೆಣ್ಣು ತನ್ನದೇ ಆದ ಭಾಷೆ ರೂಪಿಸಿಕೊಳ್ಳಬೇಕಾಗಿದೆ.

ಒಂದು ವಿಷಯದ ಬಗೆಗೆ ತೀರ್ಮಾನವು ಗಂಡಿನ ಭಾಷೆಯಲ್ಲಿ ಖಡಾಖಂಡಿತವಾಗಿದ್ದರೆ, ಹೆಣ್ಣಿನ ಭಾಷೆಯಲ್ಲಿ ಅನುನಯದ ಭಾಷೆ ಇರುತ್ತದೆ. ಅಂದರೆ ಹೀಗೆ ಮಾಡಿದ್ದರೆ ಆಗುತ್ತಿತ್ತು. ಹಾಗೆ ಮಾಡಿದರೆ ಸರಿಯಾಗದೆ ಎಂಬುವುಗಳಾಗಿವೆ. ಜಗತ್ತು ಆಧುನಿಕತೆಯತ್ತ ಕಾಲಿರಿಸಿದಂತೆ ಮಹಿಳೆಯ ಬಗೆಗಿನ ಅವಗಣನೆ ಹೊಸ ಹೊಸ ಅವತಾರಗಳನ್ನು ಪಡೆದುಕೊಳ್ಳುತ್ತಿದೆ. ಉದ್ಯೋಗದಲ್ಲಿ ಪುರುಷನು ತ್ಯಜಿಸಿದ ಕ್ಷೇತ್ರಗಳು ಹೆಣ್ಣಿಗೆ ದಕ್ಕುತ್ತಿವೆ. ಜೊತೆಗೆ ಪ್ರವಾಸೋದ್ಯಮ, ಜಾಹೀರಾತು, ಮೊದಲಾದ ಪ್ರದರ್ಶನ ವ್ಯಾಪಾರಗಳು ಸ್ತ್ರೀ ಶೋಷಣೆಯ ಇನ್ನೊಂದು ಮುಖವಾಗಿದೆ. ಇಂದು ಹೆಣ್ಣು ಅಸಮಾನತೆ ಹೋಗಲಾಡಿಸಿಕೊಳ್ಳುತ್ತ, ಹಕ್ಕುಗಳಿಗಾಗಿ ಹೆಚ್ಚು ಹೆಚ್ಚು ಹೋರಾಡುತ್ತಿರುವಾಗಲೆ ಅಸಮಾನತೆಯ ಇನ್ನಷ್ಟು ಮುಖಗಳು ದಿನೇದಿನೇ ಸಮಾಜದಲ್ಲಿ ತೆರೆದುಕೊಳ್ಳುತ್ತಿವೆ.

'ಅಧಿಕಾರವೇ ರಾಜಕೀಯದ ತಿರುಳು' ಎನ್ನುವ ಕೇಟ್ ಮಿಲೆಟ್ ಪುರುಷರಿಂದ ಮಹಿಳೆಯು ದಮನಕ್ಕೊಳಗಾಗುತ್ತಿರುವುದರ ಹಿಂದಿರುವ ಲೈಂಗಿಕ ರಾಜಕೀಯವನ್ನು ಬಯಲಿಗೆಳೆಯುವುದು ಸ್ತ್ರೀವಾದಿ ವಿಮರ್ಶಕರ ಮತ್ತು ಚಿಂತಕರ ಮೊದಲ ಕರ್ತವ್ಯವೆನ್ನುತ್ತಾಳೆ. ಸ್ತ್ರೀವಾದದ ಅಧಿಕಾರ ವಿರೋಧಿ ನೆಲೆಗಟ್ಟು ಪುರುಷ ವ್ಯವಸ್ಥೆಯ ದಬ್ಬಾಳಿಕೆಯನ್ನು ವಿರೋಧಿಸುವಷ್ಟಕ್ಕೆ ನಿಂತು ಬಿಡುವುದಿಲ್ಲ. ಸ್ತ್ರೀಯರ ಖಾಸಗಿ, ಸ್ವಂತ ಶಕ್ತಿಯುತ ಪ್ರಪಂಚವನ್ನು ಕಟ್ಟುವುದಕ್ಕೂ ಮುಂದುವರಿಯುತ್ತದೆ. ಸ್ತ್ರೀ ಪ್ರತಿಭಟನೆಯ ಸೂಕ್ಷ್ಮ ರೀತಿಗಳು, ಕಲಾತ್ಮಕ ಆಯಾಮಗಳು ಈ ಹೊಸ ಪ್ರಪಂಚವನ್ನು ಕಟ್ಟುವ ಕೆಲಸವನ್ನು ತುಂಬ ಸುಂದರವಾಗಿ ಮಾಡುತ್ತವೆ. ಇದನ್ನೇ ಸೂಕ್ಷ್ಮ ಪ್ರತಿಭಟನೆ, ಸೌಂದರ್ಯಾತ್ಮಕ ಪ್ರತಿರೋಧ ಎಂದು ಗುರುತಿಸಲಾಗುವುದು. ಹೀಗಾಗಿ ಸ್ತ್ರೀವಾದಿ ಹೋರಾಟದಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ, ನೆಲೆಗಳಷ್ಟೆ ಸಾಲುವುದಿಲ್ಲ. ಸಾಂಸ್ಕೃತಿಕ , ತಾತ್ವಿಕ, ಕಲಾತ್ಮಕ ನೆಲೆಗಳೂ ಮುಖ್ಯ ಎಂದು ಒತ್ತಿ ಹೇಳಬೇಕಾಗುತ್ತದೆ.

ರಾಷ್ಟ್ರ, ಪ್ರಭುತ್ವ, ರಾಜ್ಯ, ಸರ್ಕಾರಗಳು, ತಮಗಿರುವ ಅಧಿಕಾರದಿಂದ ಭ್ರಷ್ಟತೆ ಮತ್ತು ಕ್ರೌರ್ಯಗಳನ್ನು ಮೈಗೂಡಿಸಿಕೊಂಡು, ಮೊದಲೆ ಶೋಷಕವಾಗಿರುವಂತಹ ಪುರುಷ ಪ್ರಧಾನ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸುತ್ತವೆ. ಈ ವಿಷಯದಲ್ಲಿ ಮಧುಕೀಶ್ವರ ಅವರ ಚಿಂತನೆಗಳು ಸ್ತ್ರೀವಾದಕ್ಕೆ ತುಂಬ ಸಹಾಯ ಮಾಡುತ್ತವೆ.

ಹೆಂಗಸರು ಅವರಿಗೆ ಗೊತ್ತಿಲ್ಲದ ಒಂದು ಸಮಸ್ಯೆಯಲ್ಲಿ ನರಳುತ್ತಿರುವುದಕ್ಕೆ ಅವರಲ್ಲಿನ ಶಿಕ್ಷಣದ ಕೊರತೆ ಇರುವುದೇ ಕಾರಣವಾಗಿದೆ. ಹೆಣ್ಣು ಶಿಕ್ಷಣ ಪಡೆದಂತೆ

ಆಕೆಯ ಬೌದ್ಧಿಕ ಮತ್ತು ಭಾವನಾತ್ಮಕ ಸಂಪನ್ಮೂಲ ಉತ್ತಮವಾಗಿದ್ದಾಗ ಮಾತ್ರ ಮಕ್ಕಳನ್ನು ಉನ್ನತದಾರಿಗೆ ತರಲು ಸಾಧ್ಯ. ಹಾಗಾಗಿ ಮುಕ್ತ ಶಿಕ್ಷಣ ಗಂಭೀರ ನೆಲೆಯಲ್ಲಿರಬೇಕೇ ಹೊರತು ನಿಷ್ಕ್ರಿಯರಾಗುವಂತೆ ಮಾಡಬಾರದು. ಹೆಣ್ಣು ಕಾಲೇಜಿಗೆ ಹೋಗುತ್ತಿರುವುದೇ ಪ್ರಿಯಕರನನ್ನು ಹುಡುಕಿಕೊಳ್ಳಲು ಎಂಬ ಭಾವ ಬದಲಾಯಿತು. ತಮ್ಮ ಹೆಣ್ಣುತನವನ್ನು ತಾವೆ ಹತ್ತಿಕ್ಕಿಕೊಂಡು ತಮ್ಮ ಬೇರೆ ಆಸಕ್ತಿಗಳನ್ನು ತೊಡಗಿಸಿಕೊಳ್ಳುವುದರ ಮೂಲಕ ಕಣ್ಕಟ್ಟಿನಿಂದ ಹೊರಬರಲು ಪ್ರಯತ್ನಿಸಿದರು. ಅದಕ್ಕೆ ಉದಾಹರಣೆ ಎಂಬಂತೆ ಬೆಟ್ಟಿಫ್ರೀಡನ್ ಕಣ್ಕಟ್ಟನ್ನು ಎದುರಿಸಿದ ಮೊದಲ ತಲೆಮಾರು ಎನ್ನುವಳು. ಈಕೆ ಮೊದಲಿಗೆ ತನ್ನ ಶಿಕ್ಷಣ, ಕೆಲಸ ಬಿಟ್ಟು ಗೃಹಿಣಿಯಾಗಿಯೇ ಇರುತ್ತಾಳೆ. ನಂತರ ಅದರಿಂದ ಹೊರ ಬರುವ ಮೂಲಕ ಚಿಂತನಶೀಲತೆ ಬೆಳೆಸಿಕೊಂಡರು. ಲೋಕ ಪರಿವರ್ತನೆಯ ನೆಲೆಗಳಲ್ಲಿ ಚಿಂತನಶೀಲತೆ ಬೆಳೆಸಿಕೊಂಡರು. ಲೋಕ ಪರಿವರ್ತನೆಯ ನೆಲೆಗಳಲ್ಲಿ ಭಾಗಿಯಾಗುವುದನ್ನು ಶಿಕ್ಷಣದಿಂದ ಕಲಿತಳು. ಅಂದು ಹೆಣ್ಣುತನ ಎಂಬ ಕಣ್ಕಟ್ಟು ಒಪ್ಪಿಕೊಂಡ ಪಾಲಕರು, ಅಧ್ಯಾಪಕರು ಮತ್ತು ಸಲಹೆಗಾರರು ತಮ್ಮ ವ್ಯಾಪ್ತಿಯ ಹೆಂಗಸರಿಗೂ ಕಣ್ಕಟ್ಟಿನ ಅಂಶಗಳನ್ನು ತುಂಬಿದರು. ಈಗಲೂ ಸಹ ತುಂಬುತ್ತಿದ್ದಾರೆ. ಆದರೆ ಇಂದು ಅದರಿಂದ ಹೊರಬರುವ ಪ್ರಯತ್ನಗಳು ಕೂಡ ನಡೆಯುತ್ತಿವೆ.

ಹೀಗಾಗಿ ಹೆಣ್ಣುತನದ ಕಣ್ಕಟ್ಟಿನಿಂದ ಹೊರಬರುವುದರೊಂದಿಗೆ ಶಿಕ್ಷಣ ಪಡೆದ ಸ್ತ್ರೀ ವೈಚಾರಿಕವಾಗಿ ಆಲೋಚಿಸುವ ಸಾಮರ್ಥ್ಯ ಪಡೆದುಕೊಂಡಿದ್ದಾಳೆ. ಹೆಣ್ಣು ಗಂಡಿನ ನಡುವಿನ ಭೇದದ ಬಗೆಗೆ ದನಿಎತ್ತಿ ಮಾತನಾಡುವ ಸಾಮರ್ಥ್ಯ ಪಡೆದಿದ್ದಾಳೆ. ಆದರೆ ಎಲ್ಲರು ಈ ದಾರಿಯಲ್ಲಿ ಸಾಗಿದ್ದಾರೆ ಎನ್ನಲಾಗದು. ಏಕೆಂದರೆ ಪಿತೃಪ್ರಧಾನ ವ್ಯವಸ್ಥೆಯ ಜೊತೆಗೆ ಪುರುಷ ಪ್ರಧಾನ ಸಮಾಜದ ಅಧಿಕಾರದ ದರ್ಪದೊಳಗೆ ನಲುಗುತ್ತಿರುವ ಹೆಣ್ಣುಜೀವಗಳು ಇನ್ನೂ ಇವೆ. ಅಂದರೆ ಸಮಾಜದಲ್ಲಿ ಸ್ತ್ರೀ ಬಗೆಗೆ ಸಕಾರಾತ್ಮಕ ಬದಲಾವಣೆ ಉಂಟಾಗಿದ್ದರು, ಇನ್ನು ಮತ್ತಷ್ಟು ಬದಲಾವಣೆಗೆ ಒಳಪಡಬೇಕಾದ ಅವಶ್ಯಕತೆ ಇದೆ.

### ಪರಾಮರ್ಶನ ಗ್ರಂಥಗಳು

೧. ಪ್ರೀತಿ ಶುಭಚಂದ್ರ, ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ಪ್ರಥಮ ೨೦೦೨.
೨. ಸುಮಿತ್ರಾಬಾಯಿ ಬಿ.ಎನ್., ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, ದ್ವಿತೀಯ ೨೦೦೬.

೩. ಮೀರಾ ಎಲ್.ಜಿ., ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ, ಶಕ್ತಿ ಪ್ರಿಂಟರ್ಸ್ & ಪಬ್ಲಿಕೇಷನ್, ಬೆಂಗಳೂರು, ಪ್ರಥಮ ೨೦೦೪.

೪. ಶ್ರೀಮತಿ ಎಚ್.ಎಸ್., ಸ್ತ್ರೀವಾದ : ತಾತ್ವಿಕತೆ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ಪ್ರಥಮ ೨೦೧೨.

೫. ಬೆಟ್ಟಿ ಫ್ರೀಡನ್, ಕನ್ನಡ : ಶ್ರೀಮತಿ ಹೆಚ್.ಎಸ್., ಹೆಣ್ಣುತನ ಎಂಬ ಕಣ್ಕಟ್ಟು, ಪ್ರಗತಿ ಗ್ರಾಫಿಕ್ಸ್ ಬೆಂಗಳೂರು, ಪ್ರಥಮ ೨೦೧೦.

□□□

# ೧೦. ಶಿವಶರಣೆಯರ ವಚನಗಳಲ್ಲಿ ಮಾನವೀಯ ಮೌಲ್ಯಗಳು

– ಲೀಲಾವತಿ ಕೆ.

ಹನ್ನೆರಡನೆಯ ಶತಮಾನದ ಶಿವಶರಣೆಯರೆಲ್ಲರೂ ಮಾನವೀಯ ಗುಣಗಳನ್ನು ಪುರಸ್ಕರಿಸಿದವರು. "ಶಿವಶರಣ – ಶರಣೆಯರ ಪ್ರತಿಯೊಂದು ವಚನದಲ್ಲಿಯೂ ಸಮಸ್ಯೆ, ಆತಂಕ, ತಲ್ಲಣಗಳಿದ್ದು, ಕೊನೆಗೆ ಪರಿಹಾರ ಆಶಾವಾದದ ಮಿಂಚು ಕಂಡುಬರುತ್ತದೆ. ಗಹನವಾದ ಅರ್ಥವನ್ನು ಹೊಮ್ಮಿಸುವ ವಚನಗಳು ಸಹಜತೆಯ ಚಿರಗನ್ನು ಸೃಷ್ಟಿಸುತ್ತವೆ. ಮಾನವೀಯ ಮೌಲ್ಯಗಳು ಭಾರತೀಯ ಧಾರ್ಮಿಕ ಸಾಂಸ್ಕೃತಿಕ ಇತಿಹಾಸದಲ್ಲಿ ೧೨ನೇ ಶತಮಾನ ಹಲವಾರು ದೃಷ್ಟಿಯಿಂದ ವೈಶಿಷ್ಟ್ಯ ಪೂರ್ಣಕಾಲ. ಕನ್ನಡ ನಾಡಿನಲ್ಲಿ ಕನ್ನಡ ಭಾಷೆಯಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಶಿವಶರಣ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಬಹಳ ಮಹತ್ವದ್ದು, ಶೂದ್ರರಂತೆ ಸ್ತ್ರೀಯನ್ನು ಎರಡನೆಯ ದರ್ಜೆ ಪ್ರಜೆಯನ್ನಾಗಿ ಕಾಣುತ್ತಿದ್ದ ಸಮಯದಲ್ಲಿ ಎಲ್ಲರೂ ಸಮಾನರು, ಸ್ತ್ರೀಯರಿಗೂ ಸಮಾನವಾಗಿ ಜೀವಿಸುವ ಹಕ್ಕು ಇದೆ ಎಂದು ಸಾರಿದರು. ವ್ಯಕ್ತಿಸ್ವಾತಂತ್ರ್ಯ, ಸ್ತ್ರೀಸ್ವಾತಂತ್ರ್ಯ, ಸಮಾನತೆ, ವಿಶ್ವಮಾನವ ಕಲ್ಪನೆಗಳನ್ನು ನಿಜ ಅರ್ಥದಲ್ಲಿ ತಂದವರು ಶರಣರು. ಶ್ರೀಸಾಮಾನ್ಯರು, ಹಿಂದುಳಿದ ಅಸ್ಪೃಶ್ಯರು, ಸ್ತ್ರೀಯರು ಸತ್ಯ ಶುದ್ಧ ಕಾಯಕ ಮತ್ತು ದಾಸೋಹದಿಂದ ಉಂಟಾದ ಆರ್ಥಿಕ ಉನ್ನತಿಯಿಂದ ಸ್ವಾತಂತ್ರ್ಯದ ಹೊಸಗಾಳಿಯನ್ನು ಉಸಿರಾಡಿದರು. ಸಮಾನತೆಯನ್ನು ಸವಿದರು. ಈ ಅವಧಿಯಲ್ಲಿ ನೂರಾರು ಶರಣೆಯರು ವಚನಗಳ ಮೂಲಕ ತಮ್ಮ ವ್ಯಕ್ತಿತ್ವವನ್ನು ಉನ್ನತೀಕರಿಸಿಕೊಂಡು ಜ್ಞಾನಿಗಳಾಗಿ ಹೊರ ಹೊಮ್ಮಿದ್ದಾರೆ. ಆಧ್ಯಾತ್ಮಿಕವಾಗಿಯೂ ಶರಣೆಯರ ಸಾಧನೆಯ ಗುರಿಯಾಗಿತ್ತು".[೧]

"ಮಾನವೀಯ ಮೌಲ್ಯಗಳನ್ನು ಸ್ವತಂತ್ರವಾಗಿ ಬದುಕಲು ಅನು ಮಾಡಿಕೊಟ್ಟರು. ಶರಣ–ಶರಣೆಯರು ಅಂದಿಗೂ–ಇಂದಿಗೂ ಎಂದೆಂದಿಗೂ ಮಾನವೀಯ ಮೌಲ್ಯಗಳು ಆದರ್ಶ ಪ್ರಾಯವಾಗಿದೆ".[೨] ದೀನ ದಲಿತರ ಉತ್ತಮ ಕುಲದಲ್ಲಿ ಹುಟ್ಟಿದ ಸ್ತ್ರೀಯರನ್ನು ಶೂದ್ರರ ಸಮ ಎಂದು ಭಾವಿಸಲಾಗುತ್ತಿತ್ತು. ಅತ್ಯಂತ

ಕೆಳಮಟ್ಟಿಗೆ ಯುಗ-ಯುಗಳಿಂದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಅನೇಕ ಸಂಕೋಲೆಗಳಿಂದ ಬಂಧಿತರಾಗಿದ್ದವರಿಗೆ ಸಾಮಾಜಿಕ ಜೀವನದಲ್ಲಿ ಅಸಮಾನತೆ ತಲೆದೋರಿತು. ಆರ್ಥಿಕ ಜೀವನದಲ್ಲಿ ಸಿರಿತನ ಬಡತನಗಳ ಅಂತರ ಅತಿಯಾಗಿತ್ತು. ವ್ಯಕ್ತಿ ಸಂಸ್ಕೃತಿ ಎಂದು ನಾವೆಲ್ಲಿ ಹೇಳುತ್ತಿರುವುದು ವ್ಯಕ್ತಿಯು ಹೇಗೆ ನಡೆದುಕೊಂಡರೆ ಅವನನ್ನು ಅವನಿರುವ ಸಮಾಜವೂ ಗೌರವಿಸುತ್ತದೆ. ಆದರ್ಶ ವ್ಯಕ್ತಿತ್ವದ ಹಲವು ಮಾನವೀಯ ಮೌಲ್ಯಗಳ ಗುಣಗಳನ್ನು ನೋಡಬಹುದು. ಅವುಗಳೆಂದರೆ,

೧) ದಯ ೨) ಕರುಣೆ ೩) ಕ್ಷಮ ೪) ಶಾಂತಿ ೫) ಸಹಾನುಭೂತಿ ೬) ಸಂಧಾನ ೭) ಅನುಕಂಪ ೮) ಪ್ರೀತಿ ೯) ಪ್ರಾಮಾಣಿಕತೆ ೧೦) ಸ್ನೇಹ ೧೧) ನಂಬಿಕೆ ೧೨) ಕಷ್ಟ-ನಷ್ಟ ೧೩) ಸುಖ-ದುಃಖ ೧೪) ಸೋಲು-ಗೆಲವು ದಯೆಯನ್ನು ಕುರಿತ ಅಕ್ಕ ಮಹಾದೇವಿಯ ವಚನ ಹೀಗಿದೆ :

**"ಉಸುರಿನದ ಪರಿಮಳ ಉರಲು ಕುಸುಮದ ಹಂಗೇಕಯ್ಯ ?**
**ಕ್ಷಮೆ, ದಯ, ಶಾಂತಿ, ಸೈರಣೆಯಿರಲು ಸಮಾಧಿಯ ಹಂಗೇಕಯ್ಯ**
**ಲೋಕವೇ ತಾನಾದ ಬಳಿಕ ಏಕಾಂತದ ಹಂಗೇಕಯ್ಯ ?**
**ಚೆನ್ನಮಲ್ಲಿಕಾರ್ಜುನ".**[೩] ವ.ಸಂ. ೮೭

ಉಸಿರಿನ ಪರಿಮಳ ಯುಕ್ತವಾದರೆ ಹೂವಿನ ಪರಿಮಳದ ಅವಶ್ಯಕತೆಯಿಲ್ಲ. ಹೂವಿನ ಹಂಗಿಲ್ಲ, ಕ್ಷಮೆ, ದಯೆ, ಶಾಂತಿ, ಸೈರಣೆಗಳು ತನ್ನಲ್ಲಿದ್ದರೆ ಯೋಗ ಸಮಾಧಿಯಾಗಬೇಕಿಲ್ಲ. ಆತ್ಮವೇ ಪರಮಾತ್ಮ ಇಡೀ ಜಗತ್ತಿನಲ್ಲಿದ್ದಾನೆಂದು ಅರಿವಾದಾಗ ಲೋಕವೇ ತಾನಾದಾನ ಏಕಾಂತದ ಹಂಗು ಇರುವುದಿಲ್ಲ ಎಂದಿದ್ದಾಳೆ ಅಕ್ಕಮಹಾದೇವಿ.

ಶಿವಶರಣೆಯರು ಶಿವನ ಕರುಣೆ ಉಂಟಾಗದಿದ್ದರೆ ಭಯಂಕರವಾದ ನರಕ ಉಂಟಾಗುವುದು. ಕರುಣೆ ಸಹಾನುಭೂತಿ, ಸಮಾಧಾನಗಳಲ್ಲಿ ಮಾನವೀಯ ಗುಣಗಳನ್ನು ಕಂಡುಕೊಂಡರು ಮತ್ತು ಎಲ್ಲರ ಜೊತೆಯಲ್ಲಿ ಸ್ನೇಹದಿಂದ ಓಡಾಡುತ್ತಿದ್ದರು.

**"ಶಿವಂಗೆ ತಪ್ಪಿದ ಕಾಲ ಭಸ್ಮ ವಾದುದನರಿಯಯ್ಯ ?**
**ಶಿವಂಗೆ ತಪ್ಪಿದ ಕಾಮನುರಿದದಸಿರಿಯಯ್ಯ ?**
**ಶಿವಂಗೆ ತಪ್ಪಿದ ಬ್ರಹ್ಮನ ಶಿರ ಹೋದುದನರಿಯಯ್ಯ ?**
**ಚೆನ್ನಮಲ್ಲಿಕಾರ್ಜುನನ ಪಾದಕ್ಕೆ ತಪ್ಪಿದಡೆ**
**ಭವ ಘೋರ ನರಕವೆಂದರಿಯೋ ಮರುಳೆ".**[೪] ವ.ಸಂ. ೩೭೪

ಶಿವನ ಕರುಣೆಯಿಲ್ಲದಿದ್ದರೆ ಭಯಂಕರವಾದ ನರಕ ಉಂಟಾಗುವುದು, ಶಿವನಿಗೆ ಶರಣಾಗದ ಕಾಮನು ಭಸ್ಮವಾದನು. ಶಿವನ ಎದುರಾದ ಕಾಮನು ಉರಿದು

ಹೋದನು. ಬ್ರಹ್ಮನ ಶಿರವು ಕರುಣೆಯಿಲ್ಲದೇ ಇಲ್ಲವಾಯಿತು. ಚೆನ್ನಮಲ್ಲಿಕಾರ್ಜುನನ ಕರುಣೆ ಇಲ್ಲದಿದ್ದರೆ ಘೋರ ನರಕ ಉಂಟಾಗುವುದು ಮರುಳ ಮಾನವ ಎಂದಿದ್ದಾಳೆ ಮಹಾದೇವಿಯಕ್ಕ.

**ಮಹಾದೇವಿಯಕ್ಕನ ಮತ್ತೊಂದು ವಚನ ಹೀಗಿದೆ :**

**"ಅರಸಿ ತೊಳಲಿದಲ್ಲ ಬಯಸಿ ಹೊಕ್ಕರಿಲ್ಲ, ತಪಸ್ಸು ಮಾಡಿದರಿಲ್ಲ.**
**ಅದು ತನ್ನ ಬಹುಕಾಲಕ್ಕಲ್ಲದೇ ಸಾಧ್ಯವಾಗದು.**
**ಶಿವನೊಲಿದಲ್ಲದೇ ಕೈಗೊಡದು ಚೆನ್ನಮಲ್ಲಿಕಾರ್ಜುನ ಗೂಲಿದನಾಗಿ**
**ನಾನು ಸಂಗನ ಬಸವಣ್ಣನ ಶ್ರೀ ಪಾದವ ಕಂಡು ಬದುಕಿದೆನು."[೫]** ವ.ಸಂ. ೩೯

ಪರಶಿವನು ಮೆಚ್ಚಿದಾಗಲೇ ಅವನ ಕರುಣೆ ಎಂಬಾಗುವುದು. ಶಿವನೊಲಿಯದಿದ್ದರೆ ಶೋಧನೆ ಮಾಡಿದರು ಬಯಸಿ ಸೇರಿಕೊಂಡರೂ ತಪವನ್ನು ಮಾಡಿದರೂ ಅದು ಬರುವ ಕಾಲಕ್ಕೆ ಬರುವುದು. ಚೆನ್ನಮಲ್ಲಿಕಾರ್ಜುನನಿಗೆ ಒಲಿವ ನಂತರದಲ್ಲಿ ಸಂಗನ ಬಸವಣ್ಣನ ಶ್ರೀ ಪಾದಗಳನ್ನು ಕಂಡು ನಾನು ಬದುಕಿದೆನು ಎಂದಿದ್ದಾಳೆ.

ಅಮುಗೆ ರಾಯಮ್ಮನ ವಚನಗಳ ಮೂಲಗುಣವೇ ನಿಷ್ಠೂರತೆ ಎನಿಸಿದನ್ನು ನೇರವಾಗಿ ಯಾವ ಮುಜುಗರ ಇಲ್ಲದೆ ಅಭಿವ್ಯಕ್ತಿಸಿದ್ದಾಳೆ. ರಾಯಮ್ಮನ ಪ್ರತಿಯೊಂದು ವಚನದಲ್ಲಿಯ ನಿಷ್ಠುರದ ಕಾವು ಹೊರಸೂಸುತ್ತದೆ. ರಾಯಮ್ಮನ ವಚನಗಳಲ್ಲೆಲ್ಲ ವೇಷಧಾರಿಗಳನ್ನು ಕುರಿತಾದ ಟೀಕೆ ಮೇಲಿಂದ ಮೇಲೆ ಹರಿದು ಬರುತ್ತದೆ. ಸಮಾಜವನ್ನು ನಿರ್ಭಿತವಾಗಿ ಟೀಕಿಸುವಲ್ಲಿ ಅಂದಿನ ಮಹಿಳಾ ಸಂವೇದನೆ ಎಷ್ಟೊಂದು ದಿಟ್ಟತನದಿಂದ ಪ್ರಾಮಾಣಿಕತೆಯಿಂದ ಕೂಡಿದ್ದಾಗಿತ್ತೆಂಬುದು ಅರಿವಿಗೆ ಬರುತ್ತದೆ.

ರಾಯಮ್ಮನ ವಚನ ಹೀಗಿದೆ :

**"ವೇಷವ ತೊಟ್ಟು ಗ್ರಾಸಕ್ಕೆ ತಿರುಗುವ**
**ವೇಷಧಾರಿಗಳ ಕಂಡಡೆ ನಾಚಿತ್ತೆನ್ನಮನ**
**ಲಿಂಗವ ನರಿಯದೆ ಲಿಂಗೈಕ್ಯರೆಂಬ**
**ಅಂಗವಿಕಾರಿಗಳ ಕಂಡಡೆ ಹೊದ್ದದು ಎನ್ನುಮನ**
**ಅರಿದು ಆಚರಿಸಿದೆನೆಂಬ ಅಜ್ಞಾನಿಗಳ ಕಂಡೆಡೆ ?**
**ಮೃಢನ ಶರಣರು ಮೆಚ್ಚುವರೆ ಅಮುಗೇಶ್ವರಾ ?**
**ಲಿಂಗವನರಿಯದಿರ್ದಡೆ ಎಂತು ಲಿಂಗೈಕ್ಯರೆಂಬೆನಯ್ಯ ?[೬]** ವ.ಸಂ. ೧೦೧

ರಾಯಮ್ಮಳು ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕೆನ್ನುವ ಜಾಯಮಾನಕ್ಕೆ ಸೇರಿದವಳು. ತಾನು ಕಂಡಿದ್ದನ್ನು ಅತ್ಯಂತ ನಿರ್ಭಯವಾಗಿ ನಿಸ್ಸಂಕೋಚದಿಂದ ಹೇಳುವ ಎದೆಗಾರಿಕೆ ಅವಳದು. ಉರುಕ್ತರಲ್ಲಿ ಭಕ್ತರು, ಅನುಭಾವಿಗಳು, ಲಿಂಗವಂತರು, ಜ್ಞಾನಿಗಳು ಯಾರೇ ಇರಲಿ ಎಲ್ಲರನ್ನು ಆಮೂಲಾಗ್ರವಾಗಿ ಶೋಧಿಸಿ ಪರೀಕ್ಷಿಸುವ ಗುಣವೇ ರಾಯಮ್ಮನ ವಚನಗಳ ಸತ್ವವಾಗಿದೆ.

ಜಗತ್ತಿನಲ್ಲಿ ಜೀವರಾಶಿಗಳಲ್ಲಿ ಕಷ್ಟವನ್ನು, ನಾವು ಹೆಚ್ಚು ಹೆಚ್ಚು ನಿಯಮಗಳನ್ನು ಪಾಲಿಸಿದಷ್ಟೂ ನಮ್ಮ ಹಾಗೂ ಪ್ರಾಣಿಗಳ ಮತ್ತು ಇತರ ಜೀವಿಗಳ ಕಷ್ಟವನ್ನು ಕಡಿಮೆ ಮಾಡಬಹುದು. ಪ್ರೀತಿ, ಪ್ರೇಮ, ದಯೆಯ ಮಾರ್ಗದ ಅನುಯಾಯಿಗಳು ನೋವು-ಕಷ್ಟವನ್ನು ಕಡಿಮೆ ಮಾಡಲು ಬೇರೆ ಯಾವುದಾದರೂ ಉಪಾಯಗಳಿದ್ದರೆ ಆ ನಿಯಮಗಳನ್ನು ಸಹ ಪಾಲಿಸಬಹುದು. ನಾವು ಜನರ ಸ್ವಭಾವ, ತತ್ವಗಳು ಧರ್ಮ ರಾಷ್ಟ್ರೀಯತೆ ಬಣ್ಣ ಮುಂತಾದ ಚಿಂತೆ ಮಾಡದೆ ಒಬ್ಬ ತಾಯಿ ತನ್ನ ಒಬ್ಬನೇ ಮಗನನ್ನು ಪ್ರೀತಿಸುವಂತಿದ್ದರೆ ಆಗ ನಾವು ಜಗತ್ತಿನಲ್ಲಿರುವ ಯಾವುದೇ ಷರತ್ತುಗಳಿಲ್ಲದೆ ಪ್ರೀತಿಸಿದರೆ, ಎಲ್ಲರನ್ನು ಪ್ರೀತಿಸಲು ಸಾಧ್ಯವಾಗುತ್ತದೆ. ನಾವು ಪ್ರೀತಿಯನ್ನು ತೋರಿದರೆ ಕೆಟ್ಟದಾರಿಯಲ್ಲಿ ನಡೆಯುವವರು ಸಹಬಾಳ್ವೆಯವರಾಗುತ್ತಾರೆ.

"ದಯೆ, ಅನುಕಂಪ, ಕರುಣೆ, ಧರ್ಮದ ಜೀವಾಳವೆಂದು ಪರಿಗಣಿಸುವ ಕಾರಣ, ಇವು ಇಲ್ಲದ ಕಡೆ ಜೀವಪರವಾದ ಧರ್ಮ ಇರುವುದಿಲ್ಲ. ವಚನಕಾರರು ಧರ್ಮಕ್ಕೆ ವ್ಯಾಖ್ಯಾನಿಸಿದ ವಿಶಿಷ್ಟ ಅರ್ಥವೇ ಮಾನವೀಯ ಅನುಕಂಪದ ನೆಲೆಯಾಗಿದೆ."[೭] ಅದು ಜನಸಾಮಾನ್ಯರಿಗೆ ಅರಿವು ಮೂಡಿಸುವ ಅವರ ಬಾಳಿಗೆ ಬೆಳಕು ನೀಡಿ ಸಮಾಜದಲ್ಲಿ ಸದಾಚಾರ ಮತ್ತು ಸೌಜನ್ಯ ಶೀಲ ನಡಾವಳಿಕೆಗಳನ್ನು ಸ್ಥಾಪಿಸುವ ಒಂದು ಸಾಮಾಜಿಕ ಮೌಲ್ಯವನ್ನು ಧರ್ಮವೆನ್ನುತ್ತಾರೆ. ಹೀಗಾಗಿ ದಯವಿಲ್ಲದ ಧರ್ಮವದಾವುದಯ್ಯ ದಯಯೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ ಎಂದು ಸಾರುತ್ತಾ ಭಯವೇ ಧರ್ಮದ ಮೂಲವಾಗಿದ್ದ ಜಾಗದಲ್ಲಿ ದಯೆಯನ್ನು ಪ್ರತಿಷ್ಠಾಪಿಸಿದರು.

ಮಾನವೀಯತೆಯೇ ವಚನ ಚಳವಳಿಯ ಭೂಮಿಕೆಯಾಗಿದೆ. "ಆದರೆ ಆ ತಳಹದಿಯಲ್ಲೇ ಅದು ನಿಲ್ಲುವುದಿಲ್ಲ. ಅದರ ಮೇಲೆ ಮಾನವನ ಸರ್ವಾಂಗೀಣ ಉದ್ಧಾರದ ಭವ್ಯ ಸೌಧವನ್ನು ಅದು ನಿರ್ಮಿಸುತ್ತದೆ. ಮಾನವೀಯತೆಯ ಸಿದ್ಧಾಂತಕ್ಕೆ ಮಾನವನ ಒಳಿತಿಗಾಗಿ ದುಡಿಯುವುದು. ಮಾನವನ ಉದ್ಧಾರ ಇವುಗಳೇ ಅದರ ಪರಮಧರ್ಮ. ಒಟ್ಟಿನಲ್ಲಿ ವಚನ ಚಳುವಳಿ ಅಂದಿನ ಜನ ಜೀವನದಲ್ಲಿ ಸಮಗ್ರ ಕ್ರಾಂತಿಗೆ ಕಾರಣವಾದ ಒಂದು ರಚನಾತ್ಮಕ ಮತ್ತು ವಿಧಯಾತ್ಮಕ ಆಂದೋಲನವಾಗಿದ್ದು, ಇದು ಜೀವನವನ್ನು ಪೂರ್ಣ ದೃಷ್ಟಿಯಿಂದ ನೋಡಿತು. ವ್ಯಷ್ಟಿ-ಸಮಸ್ಯೆಗಳ ಸಮಾಜ ಧರ್ಮಗಳು, ಅಂತರಂಗ-ಬಹಿರಂಗಗಳ ಆಚಾರ-ವಿಚಾರಗಳ ಹೀಗೆ ಒಟ್ಟು ಮಾನವ ಜೀವಿತದ ಎಲ್ಲಾ ಸಮಸ್ಯೆಗಳ ಎಲ್ಲಾ ಪದರಗಳನ್ನು ವಿಶ್ಲೇಷಿಸಿ, ಸಾರ್ವತ್ರಿಕವಾದ ವಿಚಾರಸಮ್ಮತವಾದ ಉತ್ತರವನ್ನು ಕಂಡುಕೊಳ್ಳಲು ನಡೆದ ಸಾಮೂಹಿಕ ಚಳುವಳಿ ಇದು. ಹೀಗೆ ಜೀವ ವಿರೋಧಿ ವ್ಯವಸ್ಥೆಯ

ಸಾಂಸ್ಕೃತಿಕಗಳನ್ನು ಸದಾ ಕಾಲವು ವಿರೋಧಿಸುತ್ತಾ ಸಾಗುವುದರೊಂದಿಗೆ ಆ ಮೂಲಕ ಜೀವಪರವಾದ ರಚನಾತ್ಮಕ ಚಿಂತನೆ ಮತ್ತು ಜನಪರ ಕಾಳಜಿಗಳಲ್ಲಿ ನಂಬಿಕೆ ಇಟ್ಟು ಸರ್ವಸಮಾನತೆಯ ಹಾಗೂ ಸಾರ್ವಕಾಲಿಕ ಉದಾತ್ತ ಮೌಲ್ಯಗಳನ್ನು ಸ್ಥಾಪಿಸಿಕೊಳ್ಳುತ್ತಾ ಅವುಗಳನ್ನು ಜಾಣತನದಿಂದ ಕಾಯ್ದುಕೊಳ್ಳುತ್ತಾ ಚಲನಶೀಲವಾಗುವ ಮೂಲಕ ಹೊಸ ಪರಂಪರೆಯ ನಿರ್ಮಾಣದ ಮಹತ್ವ ಚಾರಿತ್ರಿಕ ಘಟ್ಟವಾಗಿ ದಾಖಲಾಗಿದೆ.

ಧಾರ್ಮಿಕ ಸಾಮಾಜಿಕ ಕ್ಷೇತ್ರದಲ್ಲಿ ಏನು ನಡೆಯುತ್ತದೆ ಎಂಬುದನ್ನು ವಸ್ತುವಾಗಿ ಅನೇಕ ವಚನಕಾರರು ಮತ್ತು ವಚನಕಾರ್ತಿಯರು ತಮ್ಮ ಅನಿಸಿಕೆಗಳನ್ನು ಹೊರ ಹಾಕಿದ್ದಾರೆ. ವಚನಗಳನ್ನು ಓದಿದಾಗ ೧೨ನೆಯ ಶತಮಾನದ ಜನ ಜೀವನ, ನಡವಳಿಕೆ ಆಚಾರ-ವಿಚಾರಗಳ ಬಗ್ಗೆ ತಿಳಿಯುತ್ತದೆ. ಏನಾಗಬೇಕು, ಏನಾಗಿದೆ, ಹೇಗಿದ್ದರೆ ಚೆನ್ನ ಎಂಬುವುದು ಕೂಡ ತಿಳಿಯುತ್ತದೆ, ಪ್ರತಿಯೊಬ್ಬ ವಚನಕಾರರು ತಮ್ಮ ವಚನಗಳಲ್ಲಿ ಮೌಲ್ಯಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ.

"ಮೌಲ್ಯ ಎಂದರೆ ಮನುಷ್ಯನು ತನ್ನ ಜೀವನದಲ್ಲಿ ಬೆಲೆ ಕೊಡುವ ಭಾವನೆ ಎಂಬ ಅರ್ಥವಿದೆ. ಇದು ವಚನದಲ್ಲಿ ಸಾಕಾರಗೊಂಡಿದೆ. ಇದೇ ರೀತಿ ಮಾನವೀಯತೆಗೂ ಹೆಚ್ಚು ಒತ್ತು ಕೊಡಲಾಗಿದೆ. ಮಾನವೀಯತೆ ಎಂದರೆ ಮನುಷ್ಯನಿಗೆ ಸಂಬಂಧಪಟ್ಟ ಎಂಬ ಅರ್ಥ".

ಒಟ್ಟಿನಲ್ಲಿ ಮಾನವೀಯ ಮೌಲ್ಯ ಎಂದರೆ ಮನುಷ್ಯನು ತನ್ನ ಮತ್ತು ಸಮಾಜದ ನಡುವಿನ ಆರೋಗ್ಯಕರ ಸಂಬಂಧಕ್ಕಾಗಿ ವರ್ತಿಸುವ ವರ್ತನೆ, ಶ್ರಮ ಹಾಗೂ ವ್ಯಕ್ತಿತ್ವವನ್ನು ನಿಯಂತ್ರಿಸುವ ಬದುಕಿನ ಚಾಲನಾಶಕ್ತಿ ಎನ್ನಬಹುದು. ಒಂದು ಉತ್ತಮವಾದ ಸಮಾಜದ ನಿರ್ಮಾಣದಲ್ಲಿ ಪ್ರತಿಯೊಬ್ಬನು ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅವಶ್ಯಕವಾಗಿದೆ.

ಮಾನವೀಯ ಮೌಲ್ಯಗಳಿಗೆ ಸಂಬಂಧಿಸಿದಂತೆ ವಚನಗಳು ನಮಗೆ ದಾರಿದೀಪವಾಗಿದೆ. ಬಸವಾದಿ ಶಿವಶರಣರಿಂದ ಹಿಡಿದು ಆಧುನಿಕ ವಚನಕಾರರು ಮತ್ತು ವಚನಕಾರ್ತಿಯರವರೆಗೆ ಮಾನವೀಯ ಮೌಲ್ಯಗಳನ್ನು ಬಿಂಬಿಸುವ ಸಾಕಷ್ಟು ವಚನಗಳು ಹೊರ ಬಂದಿವೆ. ಇವುಗಳನ್ನು ಓದಿ ಮಾನವ ಮಾಡಿಕೊಳ್ಳುವುದರ ಮೂಲಕ ಬದುಕಿನಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಂಡುಕೊಳ್ಳಬಹುದು.

ಮುಕ್ತಾಯಕ್ಕನ ವಚನ ಹೀಗಿದೆ :

"ಸತ್ಯವುಳ್ಳಲ್ಲಿ ಶಬುದ ಹಿಂಗದು
ಭಾವವುಳ್ಳಲ್ಲಿ ಭಕ್ತಿಹಿಂಗದು
ಮೂರು ಲೋಕದ ಹಂಗಿನ ಶಬುದವೇನಯ್ಯೋ ?
ಮುಕ್ತಿಯನೇವೆಯ್ಯೋ ?

**ಎನ್ನ ಯುಕುತಿಯ ಮುಕುತಿಯ ಬಕುತಿಯ ಪದವನ್ನು ಕಂಡು ನಾಡಿದನಜಗಣ್ಣ ತಂದೆ.** ವ.ಸಂ.೩೨

ಜ್ಞಾನ ಮತ್ತು ಕೌಶಲ್ಯಗಳ ಜೊತೆಗೆ ಉತ್ತಮ ನಾಗರಿಕನಾಗಲು ಪ್ರೇರಕವಾದ ಅಂಶಗಳೆಲ್ಲವೂ ಮೌಲ್ಯಗಳು, ಈ ಅಂಶಗಳನ್ನು ನಾವು ವಚನಗಳಲ್ಲಿ ಕಾಣಬಹುದು. ಮಾನವೀಯ ಮೌಲ್ಯಗಳ ಅರಿವು ನಮಗಾಗುವುದರಲ್ಲಿ ಯಾವ ಸಂಶಯವು ಇಲ್ಲ.

**ಪರಿಚಿರಿತೆ ಎನಗೇಕಯ್ಯ ನಮ್ಮ ಚಿಂತೆ ನಮಗೆ ಸಾಲದೆ ?**
**ಕೂಡಲಸಂಗಯ್ಯ ಒಲಿದಾನೋ ಬಲ್ಲನೋ ಎಂಬ ಚಿಂತೆ,**
**ಹಾಸ ಉಂಟು ಹೊದೆಯಲುಂಟು.**

ಆ ಜಾತಿ ಈ ಜಾತಿ ಎಂದು ನಾವು ಭೇದಭಾವ ತೋರುತ್ತೇವೆ. ಅದು ತಪ್ಪು, ಎಲ್ಲರನ್ನು ಒಂದೇ ರೀತಿ ನೋಡಬೇಕು. ಜನ್ಮತಃ ಎಲ್ಲರೂ ಶೂದ್ರರೇ, ಕರ್ಮದಿಂದ ಬ್ರಾಹ್ಮಣರು ಇದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ದೇವರು ಒಬ್ಬನೇ, ನಾಮ ಹಲವು ಎಂದು ಬಸವಣ್ಣನವರು ಹೇಳಿದ್ದಾರೆ. ಹೀಗೆ ಸಾರ್ವಕಾಲಿಕ ಮೌಲ್ಯಗಳು, ಧಾರ್ಮಿಕ ಮೌಲ್ಯಗಳು, ಸಾಮಾಜಿಕ ಮೌಲ್ಯ, ಕ್ರೀಡಾಮೌಲ್ಯಗಳು, ಆಧ್ಯಾತ್ಮಿಕ ಮೌಲ್ಯಗಳು, ರಾಜಕೀಯ ಮೌಲ್ಯಗಳು ಹೀಗೆ ಎಲ್ಲಾ ಮೌಲ್ಯಗಳ ಬಗ್ಗೆ ಬಸವಣ್ಣನವರು ತಮ್ಮ ವಚನದಲ್ಲಿ ತಿಳಿಸಿದ್ದಾರೆ.

ಮೋಳಿಗೆಯ ಮಹಾದೇವಿಯ ವಚನ ಹೀಗಿದೆ :

**"ಪೂಜೆಯಲ್ಲಿ ಲಕ್ಷಿತವಪ್ಪವರು ಪುಣ್ಯದ ಅಗಿಂಗೆ ಒಡಲು**
**ದಾಸೋಹವೆಂಬ ಸೋಹವನರಿದಲ್ಲಿ**
**ಚತುರ್ವಿಧಪಲ ಪದದಾಸೆಗೆ ಒಡಲು**
**ಇಂತೀ ಉಭಯದ ಪ್ರೀತಿಯ ನರಿತು ತೋರಿದ ತೋರಿಕೆ ಬಂದಂತೆ**
**ಲಿಂಗಕ್ಕೆ ಮನ ಹೋಯಿತು.**
**ಜಂಗಮಕ್ಕೆ ಧನ ಹೋಯಿತು.**
**ಇಂತೀ ಎಲ್ಲ ಲಕ್ಷ್ಯದಲ್ಲಿ ಲಕ್ಷಸಿ**
**ನೀವು ಕೈಲಾಸಕ್ಕೆ ಹೋದೆಹೆನೆಂಬ ಕಲ್ಲೆದೆಗೆ ನಾನಂಜುವೆ**
**ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಃಕ ಮಲ್ಲಿಕಾರ್ಜುನಾ."**[೧೦] ವ.ಸಂ. ೪೭

ಇದೇ ರೀತಿ ಯಾವುದೇ ವಚನವನ್ನು ನೋಡಿದರೂ ಅದರಲ್ಲಿ ಮಾನವೀಯ ಮೌಲ್ಯಗಳಿಗೆ ಸಂಬಂಧಿಸಿದಂತೆ ಮಾಹಿತಿ ದೊರೆಯುತ್ತದೆ. ಗುರು, ಲಿಂಗ, ಜಂಗಮಕ್ಕೆ ಸಂಬಂಧಿಸಿದ ಮಾಹಿತಿ ಇರಬಹುದು. ವೀರಶೈವ ಧರ್ಮಾನುಷ್ಠಾನಕ್ಕೆ ಸಂಬಂಧಿಸಿದ ವಿವರಗಳಿರಬಹುದು. ಕಾಯಕ, ದಾಸೋಹ, ಹೀಗೆ ಎಲ್ಲಾ ವಿಷಯಕ್ಕೆ ಸಂಬಂಧಿಸಿದಂತೆ ಸವಿವರವಾದ ವಿಷಯದ ಪ್ರಸ್ತಾಪವಿದೆ.

ಪ್ರತಿಯೊಬ್ಬರಲ್ಲಿಯೂ ತನ್ನ ನೋವು-ನಲಿವುಗಳನ್ನು, ತಾವು ಕಂಡುಕೊಂಡ ಸತ್ಯವನ್ನು ವಚನದ ಮೂಲಕ ಹೊರಗಡೆವಿದ್ದಾರೆ. ಇದರಿಂದಾಗಿ ಬದುಕು ಕಟ್ಟಬೇಕಾದಷ್ಟು ಮಾಹಿತಿಗಳು ನಮಗೆ ಲಭ್ಯವಾಗುತ್ತವೆ. ಜ್ಞಾನ ಮತ್ತು ಕೌಶಲ್ಯದೊಂದಿಗೆ ಉತ್ತಮ ನಾಗರಿಕನಾಗಲು ವಚನ ಸಾಹಿತ್ಯ ಪ್ರೇರಣೆ ನೀಡುತ್ತದೆ.

ಪುಣ್ಯಸ್ತ್ರೀ ಲಿಂಗಮ್ಮನ ವಚನ ಹೀಗಿದೆ :

**"ಅಯ್ಯ ಈ ಮಹಾ ಘನವ ಕಾಂಬುದಕ್ಕೆ**
**ಹಸಿವು ಕೆಡಬೇಕು, ತೃಷೆಯಡಗಬೇಕು ವ್ಯಸನ ನಿಲ್ಲಬೇಕು.**
**ನಿದ್ರೆ ಹರಿಯಬೇಕು : ಜೀವನ ಬುದ್ಧಿ ಹಿಂಗಬೇಕು**
**ಮನ ಪವನ ಬಿಂದು ಒಡಗೂಡಬೇಕು.**
**ಚಿತ್ತ ಒತ್ತಟ್ಟಿಗೆ ಹೋಗದಿರಬೇಕು".**[೧೧] ವ.ಸಂ. ೩೧

ಮಾನವೀಯ ಮೌಲ್ಯಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ರೂಢಿಸಿ ಬೆಳೆಸಿಕೊಂಡಲ್ಲಿ ಅದು ಹೆಮ್ಮರವಾಗಿ ವ್ಯಕ್ತಿತ್ವದ ಪ್ರಜ್ವಲಿಕೆಗೆ ಹಾಗೂ ಶೋಭೆ ಮತ್ತು ಸೊಬಗಿಗೆ ಕಾರಣವಾಗುತ್ತದೆ. ಹೀಗಾಗಿ ವಚನಗಳು ನಮಗೆ ದೊಡ್ಡ ಸಂಪತ್ತು. ೧೨ನೆಯ ಶತಮಾನದಲ್ಲಿ ನೂರಾರು ಶರಣ-ಶರಣೆಯರು ಜಾತಿ-ಭೇದವಿಲ್ಲದೆ ತಮ್ಮ ಅನುಭವಗಳನ್ನು ವಚನಗಳ ಮೂಲಕ ಧಾರೆ ಎರೆದಿದ್ದಾರೆ. ಇದರ ಸಮರ್ಪಯೋಗಗಳನ್ನು ಪ್ರತಿಯೊಬ್ಬರು ಮಾಡಿಕೊಳ್ಳುವುದು ಅತ್ಯಂತ ಅವಶ್ಯಕ.

ಪ್ರತಿಯೊಬ್ಬರು ಮಾನವೀಯ ಮೌಲ್ಯಗಳನ್ನು ಅಳವಡಿಕೆಗೆ ಪ್ರಾಮಾಣಿಕ ಪ್ರಯತ್ನ ನಡೆಸಬೇಕು. ಇದಕ್ಕೆ ಹಿರಿಯರ ಸಹಕಾರ ಪಡೆಯಬಹುದು. ದೇವರು, ಸೇವೆ, ಪ್ರೀತಿ, ತ್ಯಾಗ, ಪ್ರಕೃತಿ, ದಯೆ, ಕರುಣೆ, ಮಮತೆ, ಕಾಯಕ, ಫಲ, ಪ್ರಾಮಾಣಿಕತೆ, ಸಹಬಾಳ್ವೆ, ಸಹಕಾರ, ಅಹಿಂಸೆ, ಹೀಗೂ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

೧೨ನೆಯ ಶತಮಾನದಲ್ಲಿ ಎರಡುನೂರಕ್ಕೂ ಹೆಚ್ಚು ಶಿವಶರಣ ಶರಣೆಯರು ಸಾವಿರಾರು ವಚನಗಳ ಮೂಲಕ ತಮ್ಮ ಅನುಭವಗಳನ್ನು ಧಾರೆ ಎರೆದಿದ್ದಾರೆ. ಯಾರಿಗೆ ಯಾವುದು ಬೇಕು, ಅದೆಲ್ಲವೂ ವಚನ ಸಾಹಿತ್ಯದಲ್ಲಿದೆ. ಶಿವಶರಣ-ಶರಣೆಯರ ವಚನಗಳಲ್ಲಿ ತಾರತಮ್ಯವಿಲ್ಲ. ಪ್ರತಿಯೊಂದು ವಚನವು ಸುಖೀಸಮಾಜದ ಪರಿಕಲ್ಪನೆ ಇಟ್ಟುಕೊಂಡಿದೆ.

ಪ್ರತಿಯೊಬ್ಬರು ವ್ಯಕ್ತಿಜೀವನ ನಿರ್ವಹಣೆಗಾಗಿ ಕಷ್ಟಪಟ್ಟು ದುಡಿಯಬೇಕು. ದುಡಿಮೆಯಲ್ಲಿ ಸೋಮಾರಿತನ ಶ್ರಮಗಳ್ಳತನ ಇರಬಾರದು. ಮೋಸ, ವಂಚನೆ, ಕಳವು, ಸುಳ್ಳು ಇವುಗಳಿಗೆ ವ್ಯಕ್ತಿಯಲ್ಲಿ ಅವಕಾಶ ಕೊಡಬಾರದು. ವೃತ್ತಿ ಧರ್ಮಕ್ಕೆ

ಎಂದೂ ಮೋಸಮಾಡಬಾರದು. ಮಾನವ ಪರಸ್ಪರ ಸಹಕಾರ ಸೇವೆಗಳು ಅಗತ್ಯ. ಈ ಮೌಲ್ಯಗಳನ್ನು ರೂಢಿಸಿಕೊಂಡಾಗ ವೈಯುಕ್ತಿಕ ಅಭಿವೃದ್ಧಿಯ ಜೊತೆಗೆ ಸಮಾಜದ ಅಭಿವೃದ್ಧಿಗೂ ಸಹಾಯಕವಾಗುತ್ತದೆ.

**ಅಡಿಟಿಪ್ಪಣಿಗಳು**

೧. ಶರಣ ಸಂಪದ, ಜಯದೇವಪ್ಪ ಜೈನಕೇರಿ, ಪು. ೧೩೫.

೨. ವಚನ ಸಮಗ್ರ, ಡಾ. ಪಿ.ವಿ. ನಾರಾಯಣ, ಪು. ೨೩೫.

೩. ಶಿವಶರಣೆಯರ ವಚನ ಸಂಪುಟ, ಡಾ. ವೀರಣ್ಣ ರಾಜೂರ, ಪು. ೩೧.

೪. ಶಿವಶರಣೆಯರ ವಚನ ಸಂಪುಟ, ಪು. ೧೩೫.

೫. ಅಕ್ಕಮಹಾದೇವಿಯ ವಚನಗಳು, ಪು. ೨೯.

೬. ಶಿವಶರಣೆಯರ ವಚನ ಸಂಪುಟ, ಪು. ೨೧೪.

೭. ಜಂಗಮ, ಡಾ. ಎಸ್. ಚಂದ್ರಕಿರಣ್, ಪು. ೧೨೩.

೮. ಬಸವಣ್ಣನವರ ವಚನಗಳಲ್ಲಿ ಮಾನವೀಯ ಮೌಲ್ಯಗಳು, ನೀಲಾವರ ಸುರೇಂದ್ರ ಅಡಿಗ, ಪು. ೫.


೯. ಶಿವಶರಣೆಯರ ವಚನ ಸಂಪುಟ, ಪು. ೩೩೪.

೧೦. ಅದೇ ಪುಟ. ೩೫೨.

೧೧. ಅದೇ ಪುಟ. ೩೮೫.

□□□

ಕೆ.ಸಂ. ೨೬[illegible] – [illegible]ಮುದ್ರಣ – ೩೦೦ ಪ್ರತಿಗಳು – ೦೬-೦೭-೨೦೦೬.



ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

ಮಾನಸಗಂಗೋತ್ರಿ, ಮೈಸೂರು